ಸಂಪುಟ: 05 ಸಂಚಿಕೆ: 176 ಪುಟಗಳು: 08 ಮಂಗಳವಾರ 09 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಅಹಿಂಸೆಗೆ ಎರಡು ನಂಬಿಕೆಗಳು ಬೇಕಾಗುತ್ತದೆ. ದೇವರು ಮೇಲೆ ನಂಬಿಕೆ ಇದ್ದಂತೆಯೇ ಮನುಷ್ಯನ ಮೇಲೆಯೂ ವಿಶ್ವಾಸ ಇರಬೇಕು.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಗುತ್ತಿಗೆದಾರರಿಗೆ ಜೇಷ್ಠತೆ ಆಧಾರದಲ್ಲಿ ಬಿಲ್ ಪಾವತಿ ಶೀಘ್ರ

• ಉದಯವಾಹಿನಿ, ಬೆಂಗಳೂರು

ಜಲಸಂಪನ್ಮೂಲ ಇಲಾಖೆ ಮತ್ತು ಬಿಬಿಎಂಪಿ ಇದ್ದ ಸಂದರ್ಭದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಜೇಷ್ಠತೆ ಆಧಾರದಲ್ಲಿ ಶೀಘ್ರವೇ ಬಿಲ್ ಪಾವತಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ. ರಾಜ್ಯ ಗುತ್ತಿಗೆದಾರರ ಸಂಘ ಮತ್ತು ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ತಮ್ಮನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಅವರು ಆಶ್ವಾಸನೆ ನೀಡಿದ್ದಾರೆ. ಕಾಮಗಾರಿ ಮುಗಿದು 10 ವರ್ಷಗಳಾದರೂ ಠೇವಣಿ ಮತ್ತು ಭದ್ರತಾ ಹಣವನ್ನು ನೀರಾವರಿ ಇಲಾಖೆ ಅಧಿಕಾರಿಗಳು ಬಿಡುಗಡೆ ಮಾಡಿಲ್ಲ. ನಾಲ್ಕು ನೀರಾವರಿ ನಿಗಮಗಳಲ್ಲಿ ಮೂರು ವರ್ಷದಿಂದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗಿಲ್ಲ. 50 ಲಕ್ಷದಿಂದ 3 ಕೋಟಿ ರೂ.ವರೆಗೆ ಬಾಕಿ ಬಿಲ್‌ಗಳ ಪಾವತಿಸಲು ಆದ್ಯತೆ ನೀಡಬೇಕು. ಕಾಯ್ದೆಯನ್ನು ಪಾಲಿಸದೆ ಬಿಲ್ ಪಾವತಿಸುತ್ತಿದ್ದು, ಜೇಷ್ಠತೆ ಆಧಾರದಲ್ಲಿಯೇ ಪಾವತಿಸಬೇಕು ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಒತ್ತಾಯಿಸಿದ್ದಾರೆ.

## ಇನ್‌ಫೋಸಿಸ್ ಸ್ಪಿಂಗ್‌ಬೋರ್ಡ್ ಕರ್ನಾಟಕ ಮಾಧ್ಯಮ ಅಕಾಡೆಮಿ

• ಉದಯವಾಹಿನಿ, ಬೆಂಗಳೂರು

'ದೇಶದಲ್ಲೇ ಮೊದಲ ಬಾರಿಗೆ, ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಇನ್‌ಫೋಸಿಸ್ ಸ್ಪಿಂಗ್‌ಬೋರ್ಡ್ ಸಿಎಸ್ ಆರ್ ಕಾರ್ಯಕ್ರಮದಡಿ ಪತ್ರಕರ್ತರ ತರಬೇತಿಗಾಗಿ ಸಹಭಾಗಿತ್ವಕ್ಕಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿಯು ಒಡಂಬಡಿಕೆ ಮಾಡಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಇನ್‌ಫೋಸಿಸ್‌ನ ಸ್ಪಿಂಗ್‌ಬೋರ್ಡ್ ಸಿಎಸ್‌ಆರ್ ಕಾರ್ಯಕ್ರಮದಡಿ ಸಹಭಾಗಿತ್ವಕ್ಕಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಕರ್ತರ ತರಬೇತಿಗಾಗಿ ಒಪ್ಪಂದಕ್ಕೆ ಸಹಿ ಹಾಕಿವೆ.

ಪತ್ರಕರ್ತರ ಸಾಫ್ಟ್ ಸ್ಕಿಲ್ ತರಬೇತಿಯ ಉದ್ದೇಶಕ್ಕಾಗಿ ಮಾಡಿಕೊಳ್ಳುತ್ತಿರುವ ಈ ಒಡಂಬಡಿಕೆಯು ಸಿ.ಎಸ್.ಆರ್.ಅಡಿ ಕರ್ನಾಟಕ ಮಾಧ್ಯಮ ಅಕಾಡೆಮಿ ಕೈಗೆತ್ತಿಕೊಂಡ ಮೊದಲ ಕಾರ್ಯಕ್ರಮವಾಗಿದೆ. ಇನ್ಫೋಸಿಸ್ CSR ಯೋಜನೆಯ ಸ್ಟಿಂಗ್‌ಬೋರ್ಡ್ ಪ್ಲಾಟ್‌ಫಾರ್ಮ್ ಮೂಲಕ ಪತ್ರಕರ್ತರ ಡಿಜಿಟಲ್ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಸಾಮರ್ಥ್ಯ ನಿರ್ಮಾಣ ಈ ಒಡಂಬಡಿಕೆಯ ಉದ್ದೇಶವಾಗಿದೆ. ಇನ್‌ಫೋಸಿಸ್ ಸ್ಪಿಂಗ್‌ಬೋರ್ಡ್ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿಯ ಸಹಭಾಗಿತ್ವವು ಬದಲಾಗುತ್ತಿರುವ ಹೊಸ ಮಾಧ್ಯಮಕ್ಕೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

## ಕರ್ನಾಟಕ ರಾಜ್ಯದ 1 ಲಕ್ಷ ಶಾಲಾ ಶಿಕ್ಷಕರಿಗೆ ಸಂಕಷ್ಟ!

• ಉದಯವಾಹಿನಿ, ಬೆಂಗಳೂರು

ಸೇವಾನಿರತ ಶಿಕ್ಷಕರು ಕಡ್ಡಾಯವಾಗಿ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಬರೆಯಬೇಕೆಂಬ ಸುಪ್ರೀಂಕೋರ್ಟ್ ತೀರ್ಪಿನಿಂದಾಗಿ ಕರ್ನಾಟಕದ ಸುಮಾರು ಒಂದು ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರು ಸಂಕಷ್ಟ ಎದುರಿಸುವಂತಾಗಿದೆ. ಮಹಾರಾಷ್ಟ್ರ ಸರಕಾರ ಹಾಗೂ ಅಂಜುಮನ್ ಇಶಾತ್-ಎ-ತಮಿಲ್ ಟ್ರಸ್ಟ್ ನಡುವಣ ಪ್ರಕರಣದಲ್ಲಿ ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳಾದ ದಿಪಂಕರ್ ದತ್ತಾ ಹಾಗೂ ಮನಮೋಹನ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು, 2009 ರ ಶಿಕ್ಷಣದ ಹಕ್ಕು ಕಾಯಿದೆ (ಆರ್‌ಟಿಇ)ಯಡಿ 2011 ರಿಂದ ದೇಶಾದ್ಯಂತ ಜಾರಿಯಾದ ಟಿಇಟಿ ನಿಯಮದಂತೆ ಸೇವಾನಿರತ ಶಿಕ್ಷಕರೆಲ್ಲರೂ (ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಹೊರತುಪಡಿಸಿ) ಟಿಇಟಿ ಬರೆಯಬೇಕು,'' ಎಂದು ತೀರ್ಪು ನೀಡಿದೆ.

## ಪ್ರಮುಖ ಆರೋಪಿ ಜಗದೀಶ್‌ಗೆ ನ್ಯಾಯಾಂಗ ಬಂಧನ

• ಉದಯವಾಹಿನಿ, ಬೆಂಗಳೂರು

ರೌಡಿಶೀಟರ್ ಬಿಕ್ಲುಶಿವ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಜಗ್ಗ ಅಲಿಯಾಸ್ ಜಗದೀಶ್ ಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಆರೋಪಿ ಜಗದೀಶ್ ಸಿಐಡಿ ಪೊಲೀಸ್ ಕಸ್ಟಡಿ ಇಂದಿಗೆ ಮುಗಿದ ಹಿನ್ನೆಲೆಯಲ್ಲಿ ಆತನನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

ಈ ವೇಳೆ ಕೋರ್ಟ್ ಆರೋಪಿ ಜಗದೀಶ್ ಗೆ ಸೆಪ್ಟೆಂಬರ್ 22ರವರೆಗೆ ನ್ಯಾಯಾಂಗ ಬಂಧನಕ್ಕೆ ವಹಿಸಿ ಆದೇಶ ಹೊರಡಿಸಿದೆ.


ಇದೇ ವೇಳೆ ಪ್ರಕರಣದ ನಾಲ್ವರು ಆರೋಪಿಗಳನ್ನು ಸಿಐಡಿ ಪೊಲೀಸರು ಕಸ್ಟಡಿಗೆ ಪಡೆದಿದ್ದಾರೆ. ಕಿರಣ್, ಮದನ್, ವಿಮಲ್ ಸೇರಿ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳ ವಿರುದ್ಧ ಕೋಕಾ ಕಾಯ್ದೆ ಹಿನ್ನೆಲೆಯಲ್ಲಿ ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ.



## ಮದ್ದೂರು ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ

# ಅಯ್ಯೋ ವಿಘ್ನೇಶ ಭುಗಿಲೆದ್ದ ಆಕ್ರೋಶ

**ಮದ್ದೂರು ಘಟನೆಯಲ್ಲಿ 21 ಮಂದಿ ಬಂಧನ**



• ಉದಯವಾಹಿನಿ, ಮಂಡ್ಯ

ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಉದ್ವಿಗ್ನ ಪರಿಸ್ಥಿತಿಯಿದೆ. ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಗಲಾಟೆ ನಡದಿತ್ತು. ಪಟ್ಟಣದ ಮಸ್ಜಿದ್ ಹುಸೇನ್ ಮಸೀದಿಯ ಸುನ್ನಿ ಚೌಕದ ಬಳಿ ಮೆರವಣಿಗೆ ಬರುತ್ತಿದ್ದಾಗ ಯುವಕರು ನೃತ್ಯ ಮಾಡಿಕೊಂಡು ಬರುವಾಗ ಮಸೀದಿ ಮೇಲಿಂದ ಕಲ್ಲು ತೂರಿ ಬಂದಿದೆ ಎನ್ನಲಾಗಿದೆ. ಇದರಿಂದ ರೊಚ್ಚಿಗೆದ್ದ ಯುವಕರು ಕೂಡ ಪ್ರತಿಯಾಗಿ ಮಸೀದಿಯತ್ತ ಕಲ್ಲೆಸೆದಿದ್ದಾರೆ. ಇದರಿಂದ ಎರಡು ಗುಂಪುಗಳ ನಡುವೆ ಕಲ್ಲು ತೂರಾಟ ನಡೆದಿದೆ. ಈ ವೇಳೆ ಮಹಿಳಾ ಹೋಂಗಾರ್ಡ್ ಪೊಲೀಸರು ಸೇರಿದಂತೆ ಎರಡು ಕೋಮಿನ ಯುವಕರು ಗಾಯಗೊಂಡಿದ್ದರು. ಘಟನೆ ಖಂಡಿಸಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದ ಮಸೀದಿ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆ ವಿಕೋಪಕ್ಕೆ ತಿರುಗುತ್ತಿದ್ದಂತೆ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿಚಾರ್ಜ್ ನಡೆಸಿದ್ದಾರೆ. ಮಹಿಳಾ ಕಾರ್ಯಕರ್ತರ ಮೇಲೂ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದಾರೆ. ಸದ್ಯ ಮದ್ದೂರು ಪಟ್ಟಣ ಬೂದಿ ಮುಚ್ಚಿದ ಕೆಂಡದಂತಾಗಿದೆ. ಎಲ್ಲೆಡೆ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿದ್ದು, ಪ್ರತಿಭಟನೆ ನಿಯಂತ್ರಿಸಲು ಪೊಲೀಸರ ಹರ ಸಾಹಸ ನಡೆಸುತ್ತಿದ್ದಾರೆ. ಲಾಠಿ ಚಾರ್ಜ್ ಗೆ ಮಹಿಳಾ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಉದ್ರಿಕ್ತ ಗುಂಪಿನಿಂದ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಬೈಕ್‌ಗಳ ಜಖಂ ಆಗಿದೆ. ಘಟನೆಗೆ ಸಂಬಂಧಿಸಿದಂತೆ ಅನುಮಾನಗೊಂಡ 20ಕ್ಕೂ ಹೆಚ್ಚು ಮಂದಿ ಕಾರ್ಯ ಕರ್ತರನ್ನು ಪೊಲೀಸರು ಬಂಧಿಸಿದ್ದಾರೆ. ಮದ್ದೂರು ಪಟ್ಟಣದಲ್ಲಿ ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ ಕಲ್ಲು ತೂರಾಟ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಎಚ್ಚೆತ್ತಿದೆ.

ಜಿಲ್ಲೆಯಾದ್ಯಂತ ಕಟ್ಟೆಚ್ಚರಕ್ಕೆ ಸೂಚನೆ ನೀಡಲಾಗಿದೆ. ಮಂಡ್ಯ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಪ್ರತಿಷ್ಠಾಪಿಸಿರುವ ಗಣೇಶಮೂರ್ತಿಗಳ ಸ್ಥಳಗಳಿಗೆ ಪೊಲೀಸ್ ಭದ್ರತೆ ನೀಡಲಾಗಿದೆ. ಪ್ರತಿಷ್ಠಾಪಿಸಿರುವ ಗಣೇಶಮೂರ್ತಿಗಳ ಸ್ಥಳಗಳಲ್ಲಿ ಮೂರ್ತಿಗಳ ಮುಚ್ಚುವಂತೆ ಸೂಚನೆ ನೀಡಲಾಗಿದೆ. ಗಣೇಶಮೂರ್ತಿಗಳು ಕಾಣದಂತೆ ಅಡ್ಡಲಾಗಿ ಪರದೆಗಳ ಅಳವಡಿಕೆ ಮಾಡಲಾಗಿದೆ. ಸೋಮವಾರ ಗಣೇಶಮೂರ್ತಿಗಳ ವಿಸರ್ಜನೆ ಮಾಡದಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಮದ್ದೂರು ಪರಿಸ್ಥಿತಿ ತಹಬದಿಗೆ ಬರುವವರೆಗೂ ಮುಂಜಾಗ್ರತೆ ವಹಿಸಲಾಗುತ್ತಿದೆ.

**21 ಮುಸ್ಲಿಮರ ಬಂಧನ:** ಮದ್ದೂರಿನಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಿಡಿಗೇಡಿಗಳು ಕಲ್ಲು ತೂರಾಟ ಮಾಡಿದ್ದಾರೆ. ಮದ್ದೂರು ಪಟ್ಟಣದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನ ತಿಳಿಗೊಳಿಸಿದ್ದಾರೆ. ಪ್ರೀಪ್ಲಾನ್ ಮಾಡಿಯೇ ಗಣೇಶ ಮೆರವಣಿಗೆ ಮಸೀದಿ ಬಳಿ ಬರುತ್ತಿದ್ದಂತೆಯೇ ಕಲ್ಲು ತೂರಾಟ ಮಾಡಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಇನ್ನೊಂದೆಡೆ ಸ್ವತಃ ಗೃಹ ಸಚಿವ ಪರಮೇಶ್ವರ್ ಸಹ ಇದೊಂದು ಪೂರ್ಣ ನಿಯೋಜಿತ ಕೃತ್ಯ ಎಂದು ಹೇಳಿದ್ದಾರೆ. ಕಲ್ಲು ತೂರಿದ್ದ ಈಗಾಗಲೇ ಪೊಲೀಸರು 21 ಮುಸ್ಲಿಮರನ್ನು ಬಂಧಿಸಿದ್ದಾರೆ. ಇನ್ನು ಬಂಧಿತ ಆರೋಪಿಗಳ ವಿರುದ್ಧ BNS ಕಾಯ್ದೆ 189(2), 189(4), 121(2), 132ರ ಹಾಗೂ 190ರ ಅಡಿ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸಿದ್ದಾರೆ.

### ಸರ್ಕಾರದ ವೈಫಲ್ಯ ಎಂದ ಪ್ರತಿಪಕ್ಷಗಳು

ಮಂಡ್ಯ ಜಿಲ್ಲೆಯ ಮದ್ದೂರು ಗಣೇಶ ಮೂರ್ತಿ ವಿಸರ್ಜನೆಯ ಮೆರವಣಿಗೆಯ ವೇಳೆ ಕಲ್ಲು ತೂರಾಟ ನಡೆದಿದೆ. ಘಟನೆ ಖಂಡಿಸಿ ಬಿಜೆಪಿ ಮತ್ತು ಹಿಂದೂ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದರು. ಈ ವೇಳೆ ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ. ಇನ್ನು ಮದ್ದೂರು ಪ್ರಕರಣ ಸಂಬಂಧ ಮಾತನಾಡಿರುವ ಸಚಿವ ಎನ್.ಚಲುವರಾಯಸ್ವಾಮಿ, 21 ಮಂದಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಮದ್ದೂರಿನಲ್ಲಿ ಹೊರಗಡೆಯಿಂದ ಬಂದು ಯಾರೋ ಗಲಭೆ ಮಾಡಿರಬಹುದು. ಈ ಬಗ್ಗೆ ವಿಚಾರಣೆ ನಡೆಸಿ ನಂತರ 21 ಜನರನ್ನು ಈಗಾಗಲೇ ಬಂಧಿಸಲಾಗಿದೆ. ಯಾವ ಹಿಂದೂಗಳ ಮೇಲೂ ಕೇಸ್ ದಾಖಲಾಗಿಲ್ಲ. ಗಲಭೆ ನಡೆದ ಕೆಲವೇ ಗಂಟೆಗಳಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಘಟನೆ ನಡೆದ ತಕ್ಷಣ ಇಷ್ಟು ಬೇಗ ಕ್ರಮ ತೆಗೆದುಕೊಂಡ ಪ್ರಕರಣ ಬೇರೆ ಯಾವುದೂ ಇಲ್ಲ ಎಂದರು.

### ಬಂಧಿತ ಆರೋಪಿಗಳು ಯಾರ್ಯಾರು

ಮೊಹಮ್ಮದ್ ಆವೇಜ್ ಅಲಿಯಾಸ್ ಮುಳ್ಳು, ಮೊಹಮ್ಮದ್ ಇರ್ಫಾನ್ ಅಲಿಯಾಸ್ ಮಿಯಾ, ನವಾಜ್ ಖಾನ್ ಅಲಿಯಾಸ್ ನವಾಜ್, ಇಮ್ರಾನ್ ಪಾಷಾ ಅಲಿಯಾಸ್ ಇಮ್ರಾನ್, ಉಮರ್ ಫಾರೂಕ್ ಅಲಿಯಾಸ್ ಉಮರ್, ಸಯ್ಯದ್ ದಸ್ತಗಿರ್ ಅಲಿಯಾಸ್ ಸಯ್ಯದ್ ರಶೀದ್ , ಖಾಸಿಫ್ ಅಹ್ಮದ್ ಅಲಿಯಾಸ್ ಖಾಸಿಫ್, ಅಹ್ಮದ್ ಸಲ್ಮಾನ್ ಅಲಿಯಾಸ್ ಮುಕ್ಕುಲ್ಲಾ, ಮುಸವೀರ್ ಪಾಷಾ ಅಲಿಯಾಸ್ ಒಡೆಯ, ಕಲಾಂದರ್ ಖಾನ್, ಸುಮೇರ್ ಪಾಷಾ, ಮೊಹಮ್ಮದ್ ಅಜೀಜ್, ಇನಾಯತ್ ಪಾಷಾ, ಮೊಹಮ್ಮದ್ ಖಲೀಂ ಅಲಿಯಾಸ್ ಕೈಫ್ ಬಂಧಿತರು.

### ಒಬ್ಬನಿಗೆ ರಕ್ತ ಬರುವಂತೆ ಭಾರೀ ಹಲ್ಲೆ ಮಾಡಿದ್ದಾರೆ

ಅವರ ಮನೆಯಲ್ಲಿ ಬಂದು ನಾವು ಊಟ ಮಾಡ್ತೇವೆ, ನಮ್ಮ ಮನೆಗೆ ಬಂದು ಅವರು ಊಟ ಮಾಡ್ತಾರೆ. ಆದರೆ ಇಲ್ಲಿ ಏನು ಆಗ್ತಿದೆ ಎಂದು ನಮಗೆ ಗೊತ್ತಾಗುತ್ತಿಲ್ಲ. ಒಬ್ಬನಿಗೆ ರಕ್ತ ಬರುವಂತೆ ಭಾರೀ ಹಲ್ಲೆ ಮಾಡಿದ್ದಾರೆ. ಮುಸ್ಲಿಮರು ಬಂದು ನಮ್ಮ ದೇವಸ್ಥಾನದ ಮುಂದೆ ಹೋಗಬಹುದು, ನೃತ್ಯ ಮಾಡಬಹುದು ಆಗ ನಾವೆಲ್ಲಾ ಸುಮ್ಮನೆ ಇರುತ್ತೇವೆ. ಆದರೆ, ನನಗೆ ಮಾತ್ರ ಅವಕಾಶ ಇಲ್ಲ. ಚೆನ್ನೇಗೌಡ ಬಡಾವಣೆ ಅಂದರೂ ಮುಸ್ಲಿಮರೇ ತುಂಬಿಕೊಂಡಿದ್ದಾರೆ. ಹಿಂದೂಗಳಿಗೆ ಜಾಗ ಇಲ್ಲ. ಇಲ್ಲಿ ಮುಸ್ಲಿಂ ಸಮುದಾಯದವರಿಗೆ ಹೆಚ್ಚಿನ ಬೆಂಬಲ ಕೊಡ್ತಿದ್ದಾರೆ ಎಂದು ಯುವತಿ ಆರೋಪ ಮಾಡಿದ್ದಾರೆ.

### ಸರ್ಕಾರದ ವಿರುದ್ಧ ಹೆಚ್‌ಡಿಕೆ ಕಿಡಿ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕೆಟ್ಟ ಆಡಳಿತ, ನಡವಳಿಕೆಯಿಂದಲೇ ಮದ್ದೂರಿನಲ್ಲಿ ಕಲ್ಲು ಎಸೆಯುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು. ಘಟನೆಯ ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ಜತೆ ಮಾತನಾಡಿ ಮಾಹಿತಿ ಪಡೆದುಕೊಂಡ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಇಷ್ಟು ದೊಡ್ಡಮಟ್ಟದಲ್ಲಿ ಇಂಥ ಕೆಟ್ಟ ಘಟನೆಗಳು ನಡೆಯಲು ಕಾಂಗ್ರೆಸ್ ಸರ್ಕಾರವೇ ಕಾರಣ ಎಂದು ದೂರಿದರು. ಶಾಂತಿ ನೆಮ್ಮದಿಗೆ ಹೆಸರಾಗಿದ್ದ ಮಂಡ್ಯ ಜಿಲ್ಲೆಗೆ ಬೆಂಕಿ ಹಚ್ಚುವ ಕೆಲಸವಾಗುತ್ತಿದೆ. ಹಿಂದೆಂದೂ ಈ ಜಿಲ್ಲೆಯಲ್ಲಿ ಇಂಥ ಘಟನೆಗಳು ಆಗಿಲ್ಲ. ನಾಗಮಂಗಲದಲ್ಲಿ ಕೆಲ ದುಷ್ಟಶಕ್ತಿಗಳು ಬೆಂಕಿ ಹಾಕುವ ಕೆಲಸ ಮಾಡಿದವು. ಈಗ ಮದ್ದೂರಿನಲ್ಲಿಯೂ ಅಂಥ ಶಕ್ತಿಗಳೇ ಜನರ ನೆಮ್ಮದಿ ಕೆಡಿಸುವ ಹುನ್ನಾರ ನಡೆಸಿವೆ.



### ಅಶೋಕ್ ಕಿಡಿ

ಘಟನೆ ಸಂಬಂಧ ಎಕ್ಸ್ ಪೋಸ್ಟ್ ಮೂಲಕ ಪ್ರತಿಕ್ರಿಯಿಸಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ್, ಕಳೆದ ವರ್ಷ ನಾಗಮಂಗಲದಲ್ಲಿ ಗಣೇಶೋತ್ಸವ ಮೆರವಣಿಗೆ ವೇಳೆ ಅಮಾಯಕರ ಮೇಲೆ ಕಲ್ಲು ತೂರಾಟ ನಡೆಸಿ, ಅಂಗಡಿ - ಮುಂಗಟ್ಟುಗಳು, ವಾಹನಗಳಿಗೆ ಬೆಂಕಿ ಹಚ್ಚಲು ಬಿಡಲಾಗಿತ್ತು. ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರದ ಈ ವರ್ಷವೂ ಗಣೇಶ ವಿಸರ್ಜನೆ ವೇಳೆ ಹಿಂದೂಗಳಿಗೆ ಸೂಕ್ತ ಭದ್ರತೆ ಒದಗಿಸಲು ವಿಫಲವಾಗಿದೆ.



1. ಮದ್ದೂರು ಗಣೇಶ ವಿಸರ್ಜನೆ ಗಲಾಟೆಯು ತಾರಕ್ಕೇರಿದ್ದು, ಹಿಂದೂ ಮುಖಂಡರಿಂದ ಪ್ರತಿಭಟನೆ
2. ಜನ ಅಲ್ಲ ಪೊಲೀಸರನ್ನು ಬಿಡದೇ ಹೊಡೆದಿದ್ದಾರೆ ಎಂದು ಯುವತಿ ಆರೋಪ
3. ನಮಗೆ ನೆಮ್ಮದಿ ಇಲ್ಲದಂತಾಗಿದೆ ಎಂದು ಯುವತಿ ಮಾತನಾಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್

**ಯತ್ನಾಳ್‌ಗೆ ಫುಲ್ ಡಿಮ್ಯಾಂಡ್**



# ರೈತರಿಗೆ ಗುಡ್ ನ್ಯೂಸ್: ಬೆಳೆ ಹಾನಿಗೆ ಶೀಘ್ರದಲ್ಲೇ ಪರಿಹಾರ

## 111 ಜನ, 766 ಜಾನುವಾರುಗಳು ಸಾವು 550 ಕೋಟಿ ರೂ. ಮೊತ್ತದ ಬೆಳೆ ನಷ್ಟ ಅಂದಾಜು

• ಉದಯವಾಹಿನಿ, ಬೆಂಗಳೂರು

ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಶೀಘ್ರ ಪರಿಹಾರ ವಿತರಣೆ ಮಾಡಬೇಕು ಎಂದು ಸಿಎಂ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅತಿವೃಷ್ಟಿ ಹಾನಿ ಹಾಗೂ ಕೈಗೊಂಡ ಪರಿಹಾರ ಕ್ರಮಗಳ ಕುರಿತು ಎಲ್ಲಾ ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಸಿಇಒಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಅವರು ಸೂಚನೆ ನೀಡಿದರು.ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ''ಜಂಟಿ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿದ್ದು, ಗರಿಷ್ಠ 10 ದಿನಗಳೊಳಗೆ ಸಮೀಕ್ಷೆ ಕಾರ್ಯ ಮುಗಿಸಲು ಸೂಚಿಸಲಾಗಿದೆ. ಪ್ರಾಥಮಿಕ ಸಮೀಕ್ಷೆಯಂತೆ 4,80,256 ಹೆಕ್ಟೇರ್ ಕೃಷಿ ಬೆಳೆ ಹಾಗೂ 40,407 ಹೆಕ್ಟೇರ್ ತೋಟಗಾರಿಕಾ ಬೆಳೆ ಸೇರಿ ಒಟ್ಟು 5,20,663 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಸದ್ಯಕ್ಕೆ 550 ಕೋಟಿ ರೂ. ಬೆಳೆ ನಷ್ಟ ಅಂದಾಜು ಮಾಡಲಾಗಿದೆ. ಸಮೀಕ್ಷೆ ವರದಿ ಕೈಸೇರುತ್ತಿದ್ದಂತೆ ಬೆಳೆ ನಷ್ಟ ಪರಿಹಾರ ವಿತರಣೆ ಆರಂಭವಾಗಲಿದ್ದು, ಆದಷ್ಟು ಶೀಘ್ರ ಪರಿಹಾರ ವಿತರಣೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ,'' ಎಂದು ಹೇಳಿದರು.

''ಪರಿಹಾರ ನೀಡಲು ಹಣದ ಕೊರತೆ ಇಲ್ಲ. ಅನಾವೃಷ್ಟಿ ಪರಿಹಾರವನ್ನೇ ಕೇಂದ್ರ ಸರಕಾರ ಬಾಕಿ ಉಳಿಸಿಕೊಂಡಿದ್ದು, ಹಾಗಾಗಿ ಚಾಮರಾಜನಗರ ಹೊರತಾಗಿ ಉಳಿದಂತೆ ರಾಜ್ಯದೆಲ್ಲೆಡೆ ವಾಡಿಕೆಯಂತೆ ಮಳೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರದಿಂದ ಸದ್ಯಕ್ಕೆ ಯಾವುದೇ ಪರಿಹಾರ ಕೇಳುತ್ತಿಲ್ಲ'' ಎಂದು ಸ್ಪಷ್ಟಪಡಿಸಿದರು.

ಮುಂಗಾರು ಪೂರ್ವ ಮಳೆಗಾಲ ಆರಂಭವಾದ ಏಪ್ರಿಲ್‌ನಿಂದ ಈವರೆಗೆ ರಾಜ್ಯದಲ್ಲಿ ಮಳೆ ಸಂಬಂಧಿ ಅನಾಹುತಗಳಿಂದ ಒಟ್ಟು 111 ಮಂದಿ ಸಾವನ್ನಪ್ಪಿದ್ದು, ಎಲ್ಲಾ ಪ್ರಕರಣಗಳಲ್ಲಿ ಒಟ್ಟು 5 ಕೋಟಿ 55 ಲಕ್ಷ ರೂ. ಪರಿಹಾರವನ್ನು ವಿತರಿಸಲಾಗಿದೆ. ಒಟ್ಟು 766 ಜಾನುವಾರುಗಳು ಸಾವಿಗೀಡಾಗಿದ್ದು, 1 ಕೋಟಿ 52 ಲಕ್ಷ ರೂ. ಪರಿಹಾರ ವಿತರಿಸಲಾಗಿದೆ.



### ಪರಿಹಾರದ ಜತೆಗೆ ಮನೆ

ಮಳೆಯಿಂದಾಗಿ ರಾಜ್ಯದ ನಾನಾ ಭಾಗಗಳಲ್ಲಿ ಒಟ್ಟು 651 ಮನೆಗಳಿಗೆ ಸಂಪೂರ್ಣ ಹಾನಿಯಾಗಿವೆ. 9,087 ಮನೆಗಳು ಭಾಗಶಃ ಹಾನಿಗೆ ಗುರಿಯಾಗಿವೆ. ಸಂಪೂರ್ಣ ಹಾನಿಯಾದ 649 ಮನೆಗಳಿಗೆ ಹಾಗೂ ಭಾಗಶಃ ಹಾನಿಯಾದ 8,608 ಮನೆಗಳಿಗೆ ಈವರೆಗೆ ಒಟ್ಟು 24 ಕೋಟಿ 29 ಲಕ್ಷ ರೂ. ಪರಿಹಾರ ಪಾವತಿಸಲಾಗಿದೆ. ಮನೆ ಹಾನಿಯಾದವರಿಗೆ ಪರಿಹಾರದ ಜತೆಗೆ, ನಾನಾ ವಸತಿ ಯೋಜನೆಗಳಡಿ ಮನೆ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಸಭೆಯಲ್ಲಿ ಸೂಚಿಸಿದರು.

**ವಾಡಿಕೆಗಿಂತ ಅಧಿಕ ಮಳೆ:** ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಜೂನ್ 1 ರಿಂದ ಸೆಪ್ಟೆಂಬರ್ ಮೊದಲ ವಾರದವರೆಗೆ ವಾಡಿಕೆಗಿಂತ ಶೇ. 4ರಷ್ಟು ಹೆಚ್ಚು ಮಳೆಯಾಗಿದೆ. ಈ ಅವಧಿಯಲ್ಲಿ ವಾಡಿಕೆ ಮಳೆ 721 ಮಿ.ಮೀ ಇದ್ದು, 753 ಮಿ.ಮೀ ಮಳೆ ದಾಖಲಾಗಿದೆ. ಕಳೆದ ವರ್ಷ ಶೇ. 23ರಷ್ಟು ಹೆಚ್ಚುವರಿ ಮಳೆ ದಾಖಲಾಗಿತ್ತು. ಆದರೆ, ಚಾಮರಾಜನಗರದಲ್ಲಿ ಮಾತ್ರ ವಾಡಿಕೆಗಿಂತ ಶೇ. 24ರಷ್ಟು ಕಡಿಮೆ ಮಳೆಯಾಗಿದೆ. ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸ್ವಲ್ಪ ಕಡಿಮೆಯಿದೆ. ಪ್ರಮುಖ ಜಲಾಶಯಗಳ ಗರಿಷ್ಠ ಸಾಮರ್ಥ್ಯ 895.62 ಟಿಎಂಸಿ ಅಡಿ ಇದ್ದು, ಪ್ರಸ್ತುತ 840.52 ಟಿಎಂಸಿ ಸಂಗ್ರಹವಿದೆ. ಕಳೆದ ವರ್ಷ ಈ ಅವಧಿಯಲ್ಲಿ 856.17 ಟಿಎಂಸಿ ಸಂಗ್ರಹ ಇತ್ತು.

**2ನೇ ಬೆಳೆಗೆ ನೀರಿಲ್ಲ:** ತುಂಗಾಭದ್ರಾ ಅಣೆಕಟ್ಟಿನ 32 ಕ್ರೆಸ್ಟ್ ಗೇಟ್‌ಗಳ ಬದಲಾವಣೆಗೆ ಟೆಂಡರ್ ಆಗಿದೆ. ಕ್ರೆಸ್ಟ್ ಗೇಟ್‌ಗಳ ಬದಲಾವಣೆ ಮತ್ತು ನಿರ್ವಹಣೆ ಸೇರಿ ಜಲಾಶಯದ ಮೂಲಸೌಕರ್ಯಗಳ ಅಭಿವೃದ್ಧಿಪಡಿಸುವ ಕಾರ್ಯವು ತುಂಗಾಭದ್ರಾ ಮಂಡಳಿ ವ್ಯಾಪ್ತಿಗೆ ಬರಲಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ತುಂಗಾಭದ್ರಾ ಅಚ್ಚುಕಟ್ಟು ಪ್ರದೇಶದ ಮೊದಲ ಬೆಳೆಗೆ ನೀರನ್ನು ಹರಿಸುವ ಮುನ್ನ ಅಗತ್ಯವಿರುವ ದುರಸ್ಥಿ ಕಾರ್ಯಗಳನ್ನು ಪೂರ್ಣಗೊಳಿಸಬೇಕು ಎಂದು ಸಿಎಂ ಸೂಚನೆ ನೀಡಿದರು.

## 6 ಎಕರೆ ಸರ್ಕಾರಿ ಜಮೀನು ಒತ್ತುವರಿ ಆರೋಪ: ಎಚ್‌ಡಿಕೆಗೆ ತನಿಖೆ ಬಿಸಿ

• ಉದಯವಾಹಿನಿ, ಬೆಂಗಳೂರು

ಕೇತಗಾನಹಳ್ಳಿಯ ಸರ್ಕಾರಿ ಜಮೀನು ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ಎಸ್‌ಐಟಿ ತನಿಖೆಗೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ವಿಭಾಗೀಯ ನ್ಯಾಯಪೀಠ ತೆರವುಗೊಳಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ತೆರವುಗೊಳಿಸುವಂತೆ ಕೋರಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಮನಗರ ತಹಶೀಲ್ದಾರ್ ಸಲ್ಲಿಸಿದ ರಿಟ್ ಅರ್ಜಿ ಮೇಲ್ಮನವಿಗೆ ಸಂಬಂಧಿಸಿದಂತೆ ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಈ ಪ್ರಕರಣದಲ್ಲಿ ಪ್ರತಿವಾದಿ ವಿರುದ್ಧ 6 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ ಆರೋಪವಿದೆ. ಒತ್ತುವರಿ ತೆರವುಗೊಳಿಸಬೇಕಿದ್ದ ಹಿನ್ನೆಲೆಯಲ್ಲಿ ರಾಮನಗರ ತಹಶೀಲ್ದಾರ್ ಮುಖಾಂತರ ಸರ್ಕಾರ ಕಾನೂನು ಕ್ರಮಕ್ಕೆ ಮುಂದಾಗಿದೆ. ಇದೇ ವೇಳೆ ಆರೋಪಗಳಿಗೆ ಸಂಬಂಧಿಸಿದಂತೆ ವಾಸ್ತವಾಂಶಗಳ ಶೋಧನೆಗಾಗಿ ಎಸ್‌ಐಟಿ ರಚಿಸಲಾಗಿದೆ. ಆದರೆ, ಪ್ರತಿವಾದಿ ಎಚ್.ಡಿ. ಕುಮಾರಸ್ವಾಮಿ ಅವರು ಎಸ್‌ಐಟಿ ರಚನೆಯನ್ನು ಪ್ರಶ್ನಿಸಿದ್ದರು. ಈ ಪ್ರಶ್ನಿತ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠ ಎಸ್‌ಐಟಿ ರಚನೆಗೆ ಮಧ್ಯಂತರ ತಡೆ ನೀಡಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,838/Gram24ct ₹9,935/Gram22ct ಬೆಳ್ಳಿ: ₹127.00/Gram

# 17ರಂದು ಛಾಯಾಚಿತ್ರಗ್ರಾಹಕರ ಸಂಘದ ವಿಶೇಷ ಮಹಾಸಭೆ

• ಉದಯವಾಹಿನಿ, ಬೆಂಗಳೂರು

ಸೆಪ್ಟಂಬರ್ 17 –2025 ನೇ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ದೈವಜ್ಞ ವಾಸುದೇವ ಶೇಟ್ ಕಲ್ಯಾಣ ಮಂಟಪ, ಜಾಲಹಳ್ಳಿ ಮೆಟ್ರೋ ನಿಲ್ದಾಣದ ಎದುರು, ಜಾಲಹಳ್ಳಿ ಕ್ರಾಸ್, ಬೆಂಗಳೂರು ಇಲ್ಲಿ ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘದ ವಿಶೇಷ ಮಹಾಸಭೆಯನ್ನು ಕರೆಯಲಾಗಿದೆ, ಈ ಸಭೆಗೆ ತಾವು ತಪ್ಪದೇ ಸಮಯಕ್ಕೆ ಸರಿಯಾಗಿ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

ಈಗಲೇ ತಮಗೆ ಪೋಸ್ಟ್ ಮುಖಾಂತರ ಸಭೆಯ ಪತ್ರಗಳನ್ನು ಪೋಸ್ಟ್ ಮಾಡಲಾಗಿದೆ, ಅಕಸ್ಮಾತ್ ತಮಗೆ ಸಭೆಯ ಆಹ್ವಾನ ಪತ್ರಿಕೆ ತಡವಾದಲ್ಲಿ ಇದೇ ಅಧೀಕೃತ ಆಹ್ವಾನವೆಂದು ಭಾವಿಸಿ, ಕೆಪಿಎ ಆಜೀವ ಸದಸ್ಯರು ಸಭೆಗೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

# ಕಾಂಗ್ರೇಸ್ ಶಾಸಕ ವೀರೇಂದ್ರ ಪಪ್ಪಿಗೆ 14 ದಿನ ನ್ಯಾಯಾಂಗ ಬಂಧನ

• ಉದಯವಾಹಿನಿ, ಬೆಂಗಳೂರು

ಅಕ್ರಮವಾಗಿ ಬೆಟ್ಟಿಂಗ್ ಕಂಪನಿ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಕಾಂಗ್ರೇಸ್ ಶಾಸಕ ಕೆಸಿ ವೀರೇಂದ್ರ ಪಪ್ಪಿಗೆ ಕೋರ್ಟ್ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ. ಇಡಿ ಕಸ್ಟಡಿ ಅವಧಿ ಮುಗಿದ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.



ಈ ವೇಳೆ ವಿಚಾರಣೆ ನಡೆಸಿದ ನ್ಯಾಯಾಲಯ ವಿರೇಂದ್ರ ಪಪ್ಪಿ ಅವರನ್ನು ಸೆ. 22ರವರೆಗೆ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಕಳುಹಿಸಿ ಆದೇಶ ಹೊರಡಿಸಿದೆ. ಅಕ್ರಮ ಬೆಟ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ರಾಜ್ಯಗಳಲ್ಲಿ ಇಡಿ ದಾಳಿ ನಡೆಸಿತ್ತು. ಇನ್ನು ದಾಳಿ ವೇಳೆ ವೀರೇಂದ್ರ ಪಪ್ಪಿ ಮನೆಯಲ್ಲಿ 12 ಕೋಟಿ ರೂ. ನಗದು (ಒಂದು ಕೋಟಿ ರೂ. ವಿದೇಶಿ ಕರೆನ್ಸಿ ಸೇರಿದಂತೆ), 6 ಕೋಟಿ ರೂ. ಮೌಲ್ಯದ ಚಿನ್ನಾಭರಣ, ಸುಮಾರು 10 ಕೆಜಿ ಬೆಳ್ಳಿ ನಾಲ್ಕು ವಾಹನಗಳನ್ನು ವಶಪಡಿಸಿಕೊಂಡಿತ್ತು. ಚಿತ್ರದುರ್ಗದ 50 ವರ್ಷದ ಶಾಸಕನನ್ನು ಆ.22 ರಂದು ಸಿಕ್ಕಿಂನ ರಾಜಧಾನಿ ಗ್ಯಾಂಗ್ಟಾಕ್‌ನಲ್ಲಿ ಬಂಧಿಸಿದ್ದು ಇಡಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ ಬೆಂಗಳೂರಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಟ್ರಾನ್ಸಿಟ್ ರಿಮಾಂಡ್ ಪಡೆದು ರಾಜ್ಯಕ್ಕೆ ಕರೆತಂದಿದ್ದರು. ಬಂಧನದ ವೇಳೆ ಶಾಸಕರು ತಮ್ಮ ಸಹಚರರೊಂದಿಗೆ ಕ್ಯಾಸಿನೊವನ್ನು ಗುತ್ತಿಗೆ ಪಡೆಯುವ ಸಲುವಾಗಿ ಮಾತುಕತೆ ನಡೆಸಲು ಗ್ಯಾಂಗ್ಟಾಕ್‌ಗೆ ಭೇಟಿ ನೀಡಿದ್ದರು ಎಂದು ತನಿಖಾ ಸಂಸ್ಥೆ ತಿಳಿಸಿದೆ.

# 50 ಟ್ರಾಫಿಕ್ ಸಿಗ್ನಲ್ ಅಳವಡಿಕೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕಳೆದ ಮೂರು ತಿಂಗಳಲ್ಲಿ ಹೊಸದಾಗಿ 50 ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಿದ್ದು, ಇದರೊಂದಿಗೆ ಟ್ರಾಫಿಕ್ ಸಿಗ್ನಲ್‌ಗಳ ಸಂಖ್ಯೆ 500 ದಾಟಿದೆ. ಈ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆಯ ವಿವರವಾದ ವಿಶ್ಲೇಷಣೆಯ ಬಳಿಕ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಸ್ಥಳೀಯ ಪೊಲೀಸ್ ಅಧಿಕಾರಿಗಳ ಶಿಫಾರಸಿನ ಮೇರೆಗೆ ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ದಟ್ಟಣೆ ಹೆಚ್ಚಾದ ಕಾರಣ ಈ ಜಂಕ್ಷನ್‌ಗಳಲ್ಲಿ ಕೆಲವು ಕ್ರಮಗಳನ್ನು ಜಾರಿಗೆ ತರುವ ಅಗತ್ಯವಿದೆ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಹೇಳಿದರು. ನಗರದ ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಸಾಮಾನ್ಯವಾಗಿದೆ. ಒಂದು ಕಾಲದಲ್ಲಿ ವಾಹನ ದಟ್ಟಣೆಯಿಂದ ಮುಕ್ತವಾಗಿದ್ದ ಅನೇಕ ರಸ್ತೆಗಳಲ್ಲಿ ಈಗ ದಟ್ಟಣೆ ಸಮಸ್ಯೆ ಎದುರಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

# ನಕಲಿ ವೈದ್ಯರ ಜಾಲ ಸಕ್ರಿಯ: ಅರ್ಹತೆ ಹೊಂದಿರದ 256 ಮಂದಿ ಪತ್ತೆ

• ಉದಯವಾಹಿನಿ, ಬೆಂಗಳೂರು

ಅರ್ಹತೆ, ಪರವಾನಗಿ ಇಲ್ಲದಿದ್ದರೂ ಚಿಕಿತ್ಸೆ ನೀಡುವ ನಕಲಿ ವೈದ್ಯರ ಜಾಲ ರಾಜ್ಯದಲ್ಲಿ ಸಕ್ರಿಯವಾಗಿದೆ. ಈ ಜಾಲದ ವಿರುದ್ಧ ಆರೋಗ್ಯ ಇಲಾಖೆಯು ಕಳೆದೊಂದು ವರ್ಷ ನಡೆಸಿದ ಕಾರ್ಯಾಚರಣೆಯಲ್ಲಿ 256 ನಕಲಿ ವೈದ್ಯರು ಪತ್ತೆಯಾಗಿದ್ದಾರೆ. ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪ್ರಯೋಗಾಲಯಗಳು, ನಕಲಿ ವೈದ್ಯರ ಪತ್ತೆ ಕಾರ್ಯವನ್ನು ಇಲಾಖೆ ಚುರುಕುಗೊಳಿಸಿದೆ. ರಾಜ್ಯದ ವಿವಿಧೆಡೆ ಕಾನೂನು ಬಾಹಿರವಾಗಿ ವೈದ್ಯ ವೃತ್ತಿ ಕೈಗೊಂಡವರನ್ನು ಗುರುತಿಸಿ ದಂಡ ವಿಧಿಸುವ ಜತೆಗೆ ಶಿಕ್ಷಿಸಲಾಗುತ್ತಿದೆ. ಇಷ್ಟಾಗಿಯೂ ರಾಜ್ಯದಾದ್ಯಂತ ನಕಲಿ ವೈದ್ಯರು ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವುದು ಅಧಿಕಾರಿಗಳು ನಡೆಸಿದ ದಾಳಿಯ ವೇಳೆ ದೃಢಪಟ್ಟಿದೆ.



ಅಲೋಪಥಿ, ಹೋಮಿಯೋಪಥಿ, ಆಯುರ್ವೇದ, ನ್ಯಾಚುರೋಪಥಿ, ಯುನಾನಿ ಹಾಗೂ ಸಿದ್ಧ ವೈದ್ಯರು ಸೇರಿದ್ದಾರೆ. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆಯಡಿ (ಕೆಪಿಎಂಇ) ಆರೋಗ್ಯಾಧಿಕಾರಿಗಳ ತಂಡವು ವಿವಿಧ ಆಸ್ಪತ್ರೆಗಳು, ಕ್ಲಿನಿಕ್‌ಗಳು ಪ್ರಯೋಗಾಲಯಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದೆ.

ಈ ಪರಿಶೀಲನೆ ವೇಳೆ ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದಿದ್ದರೂ ಪರವಾನಗಿ ಹೊಂದಿರದಿದ್ದರೂ ಕ್ಲಿನಿಕ್‌ಗಳು ನಡೆಸುತ್ತಿರುವುದು ಅಧಿಕಾರಿಗಳ ತಂಡದ ಗಮನಕ್ಕೆ ಬಂದಿದೆ. ಅಂತಹವರನ್ನು ನಕಲಿ ವೈದ್ಯರ ಪಟ್ಟಿಗೆ ಸೇರಿಸಲಾಗಿದೆ. 2024–25ನೇ ಸಾಲಿಗೆ ಪತ್ತೆಯಾದ ನಕಲಿ ವೈದ್ಯರಿಗೆ ಸಂಬಂಧಿಸಿದಂತೆ, 89 ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ.

# ಬಿಎಂಟಿಸಿ ಬಸ್‌ಗಳ ಸಂಖ್ಯೆ 7 ಸಾವಿರಕ್ಕೆ ಹೆಚ್ಚಳ

## ಹೊಸೂರು ರಸ್ತೆಯಲ್ಲಿರುವ ಮೆಟ್ರೋ ಸ್ಟೇಷನ್‌ಗಳಿಗೆ ಸಂಪರ್ಕ ಕಲ್ಪಿಸುವ ಬಸ್ಸುಗಳಿಗೆ ಬೇಡಿಕೆ ಹೆಚ್ಚು

• ಉದಯವಾಹಿನಿ, ಬೆಂಗಳೂರು

ಬಿಎಂಟಿಸಿ ತನ್ನ ಬಲ, ಜಾಲವನ್ನು ವಿಸ್ತರಣೆ ಮಾಡಿಕೊಂಡಿದ್ದು, ಒಟ್ಟಾರೆ ಬಸ್‌ಗಳ ಸಂಖ್ಯೆಯು 7 ಸಾವಿರಕ್ಕೆ ಏರಿಕೆಯಾಗಿದೆ. ಇವುಗಳ ಪೈಕಿ 5ರಲ್ಲಿ ಒಂದು ಎಲೆಕ್ಟ್ರಿಕ್ ಬಸ್ ಆಗಿದೆ. ಇನ್ನು ಶೀಘ್ರದಲ್ಲಿಯೇ ಹೊಸ 200 ಬಸ್‌ಗಳು ರಸ್ತೆಗಳಿಯಲಿವೆ.

ಕೋವಿಡ್ ಬರುವ ಮೊದಲು, ಬಿಎಂಟಿಸಿ ಪ್ರತಿದಿನ 6,190 ಬಸ್ಸುಗಳನ್ನು ಓಡಿಸುತ್ತಿತ್ತು. ಆದರೆ, ಕೋವಿಡ್ ಬಂದ ನಂತರ ಬಸ್ಸುಗಳ ಸಂಖ್ಯೆ ಕಡಿಮೆಯಾಯಿತು. 2020 – 21 ರಲ್ಲಿ ಕೇವಲ 5,313 ಬಸ್ಸುಗಳನ್ನು ಮಾತ್ರ ಓಡಿಸಲಾಯಿತು. ನಂತರ ಪರಿಸ್ಥಿತಿ ಸ್ವಲ್ಪ ಸುಧಾರಿಸಿದರೂ, ಬಸ್ಸುಗಳ ಕೊರತೆ, ಸಿಬ್ಬಂದಿ ಕೊರತೆ ಮತ್ತು ಜತೆಗೆ ವರ್ಕ್‌ಫ್ರಮ್ ಹೋಮ್‌ನಿಂದ ಪ್ರಯಾಣಿಕರ ಸಂಖ್ಯೆಯು ಹೆಚ್ಚಾದ ಕಾರಣ ಬಸ್ಸುಗಳ ಸೇವೆ ಅಷ್ಟಾಗಿ ಸುಧಾರಿಸಲಿಲ್ಲ. ಆ ಬಳಿಕ ವರ್ಷದಿಂದ ವರ್ಷಕ್ಕೆ ಹೆಚ್ಚಳ ಮಾಡಿಕೊಳ್ಳುತ್ತಾ ಬಂದಿದೆ.

ಖಾಸಗಿ ಕಂಪನಿಗಳ ಜೊತೆ ಸೇರಿ ಬಿಎಂಟಿಸಿ 1,568 ಎಲೆಕ್ಟ್ರಿಕ್ ಬಸ್ಸುಗಳನ್ನು ನಡೆಸುತ್ತಿದೆ. ಇದರಿಂದಾಗಿ ಬಿಎಂಟಿಸಿಗೆ ಹೆಚ್ಚು ಬಸ್ಸುಗಳನ್ನು ಓಡಿಸಲು ಸಾಧ್ಯವಾಗಿದೆ. ಜೊತೆಗೆ 2,500 ಹೊಸ ಕಂಡಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಸಾರ್ವಜನಿಕ ಸಾರಿಗೆಗೆ ಬೇಡಿಕೆ ಹೆಚ್ಚಾಗಿದ್ದು, ಕೋವಿಡ್ ಸಾಂಕ್ರಾಮಿಕ ರೋಗ ಬರುವ ಮೊದಲು ಎಷ್ಟು ಬಸ್ಸುಗಳನ್ನು ಓಡಿಸುತ್ತಿದ್ದರೋ, ಅದಕ್ಕಿಂತ ಈಗ ಹೆಚ್ಚು ಬಸ್ಸುಗಳನ್ನು ಓಡಿಸಲು ನಿರ್ಧರಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



**ಇದೇ ಮೊದಲು ಬಸ್‌ಗಳ ಸಂಖ್ಯೆ 7 ಸಾವಿರಕ್ಕೆ ಏರಿಕೆ:** ಬಿಎಂಟಿಸಿ 7,000 ಬಸ್ಸುಗಳನ್ನು ದಾಟಿರಲಿಲ್ಲ. ಶೀಘ್ರದಲ್ಲೇ ನಾವು ಇನ್ನೂ 200 ಎಲೆಕ್ಟ್ರಿಕ್ ಬಸ್ಸುಗಳನ್ನು ಸೇರಿಸುತ್ತೇವೆ. ಅದರಲ್ಲಿ 120 ಎಸಿ ಬಸ್ಸುಗಳು ಇರುತ್ತವೆ. ಹಳೆಯ ಬಸ್ಸುಗಳನ್ನು ತೆಗೆದರೂ, ನಮ್ಮಲ್ಲಿ 7,000 ಬಸ್ಸುಗಳು ಇದ್ದೇ ಇರುತ್ತವೆ. ಎಲೆಕ್ಟ್ರಿಕ್ ಬಸ್ಸುಗಳು ಮತ್ತು 820 ಬಿಎಸ್–VI ಬಸ್ಸುಗಳನ್ನು ಸೇರಿಸುವುದರಿಂದ ಕೋವಿಡ್‌ಗಿಂತ ಮೊದಲು ಎಷ್ಟು ಬಸ್ಸುಗಳನ್ನು ಓಡಿಸುತ್ತಿದ್ದೆವೋ, ಅದಕ್ಕಿಂತ ಹೆಚ್ಚು ಬಸ್ಸುಗಳನ್ನು ಓಡಿಸಲು ಸಾಧ್ಯವಾಗುತ್ತದೆ. ನಾವು ಈಗ 6,200 ಬಸ್ಸುಗಳನ್ನು ಓಡಿಸುತ್ತಿದ್ದೇವೆ. ಹೊಸ ಸಿಬ್ಬಂದಿ ಕೆಲಸಕ್ಕೆ ಸೇರುವುದರಿಂದ, ಇನ್ನೂ ಹೆಚ್ಚು ಬಸ್ಸುಗಳನ್ನು ಓಡಿಸಬಹುದು ಎಂದು ಬಿಎಂಟಿಸಿಯ ಮುಖ್ಯ ಟ್ರಾಫಿಕ್ ಮ್ಯಾನೇಜರ್ (ಕಾರ್ಯಾಚರಣೆ) ಜಿ.ಟಿ. ಪ್ರಭಾಕರ್ ರೆಡ್ಡಿ ತಿಳಿಸಿದ್ದಾರೆ.

**ನಿತ್ಯ 11.9 ಲಕ್ಷ ಕಿ.ಮೀ ಸಂಚಾರ:** ಸದ್ಯಕ್ಕೆ ಬಿಎಂಟಿಸಿ ಬಸ್‌ಗಳು ಪ್ರತಿದಿನ 61,000 ಟ್ರಿಪ್‌ಗಳನ್ನು ಓಡಿಸುತ್ತದೆ. ಇದರಿಂದ 11.9 ಲಕ್ಷ ಕಿಲೋಮೀಟರ್ ದೂರವನ್ನು ಕ್ರಮಿಸುತ್ತದೆ ಮತ್ತು 7 ಕೋಟಿ ರೂಪಾಯಿ ಆದಾಯವನ್ನು ಗಳಿಸುತ್ತದೆ. ಹೊಸ ಬಸ್‌ಗಳನ್ನು ಸೇರಿಸುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

### ನಿತ್ಯ ಪ್ರಯಾಣಿಕರ ಸಂಖ್ಯೆ ಏರಿಕೆ

ಸಾಂಕ್ರಾಮಿಕ ರೋಗದ ನಂತರ ಪ್ರಯಾಣಿಕರ ಸಂಖ್ಯೆ ಕಡಿಮೆಯಾಯಿತು. ಆದರೆ, ಶಕ್ತಿ ಯೋಜನೆಯಿಂದಾಗಿ ಹೆಚ್ಚು ಜನರು ಬಸ್ಸುಗಳಲ್ಲಿ ಪ್ರಯಾಣಿಸಲು ಪ್ರಾರಂಭಿಸಿದ್ದಾರೆ. ಕಳೆದ ವರ್ಷ ನಮ್ಮ ಬಸ್ಸುಗಳಲ್ಲಿ 40 ಲಕ್ಷ ಜನರು ಪ್ರಯಾಣಿಸಿದರು. ಈಗ ಅದು 44 ಲಕ್ಷಕ್ಕೆ ಏರಿದೆ ಎಂದು ಅಧಿಕಾರಿ ಹೇಳಿದರು.

**ಹೊಸದಾಗಿ 200 ಬಸ್ ಶೀಘ್ರ ಆರಂಭ**

### ಬಿಎಂಟಿಸಿ ಬಸ್‌ಗಳು ಭಾರೀ ಬೇಡಿಕೆ

ಬೆಂಗಳೂರಿನ ಹೊರವಲಯಕ್ಕೆ ಹೋಗುವ ಬಸ್ಸುಗಳಿಗೆ ಬೇಡಿಕೆ ಹೆಚ್ಚಾಗಿದೆ. ಮೆಟ್ರೋ ರೈಲುಗಳು ವಿಸ್ತರಣೆಯಾಗುತ್ತಿರುವುದರಿಂದ, ಅವುಗಳಿಗೆ ಪೂರಕವಾಗಿ ಬಿಎಂಟಿಸಿ ಬಸ್ಸುಗಳನ್ನು ಓಡಿಸುತ್ತಿದೆ. ನಗರದ ಹೊರವಲಯದಲ್ಲಿರುವ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಹೆಚ್ಚಿನ ಗಮನ ನೀಡಲಾಗುತ್ತಿದೆ. ಉದಾಹರಣೆಗೆ, ನೈಸ್ ರಸ್ತೆಯಲ್ಲಿ ಓಡಾಡುವ ಬಸ್ಸುಗಳಿಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ದೊಡ್ಡಬಳ್ಳಾಪುರ, ಅತ್ತಿಬೆಲೆ, ದೇವನಹಳ್ಳಿ ಮತ್ತು ನೆಲಮಂಗಲದಂತಹ ಪ್ರದೇಶಗಳಿಗೆ ಎಕ್ಸ್‌ಪ್ರೆಸ್ ಬಸ್ಸುಗಳನ್ನು ಓಡಿಸಲಾಗುತ್ತಿದೆ. ನಮ್ಮ ಮೆಟ್ರೋ ಐದು ನಿಮಿಷಕ್ಕೆ ಒಂದು ರೈಲು ಓಡಿಸಲು ಪ್ರಾರಂಭಿಸಿದರೆ, ನಾವು ಹೆಚ್ಚು ಬಸ್ಸುಗಳನ್ನು ನಿಯೋಜಿಸಬೇಕಾಗುತ್ತದೆ. ಇತ್ತೀಚೆಗೆ, ಹೊಸೂರು ರಸ್ತೆಯಲ್ಲಿರುವ ಮೆಟ್ರೋ ಸ್ಟೇಷನ್‌ಗಳಿಗೆ ಸಂಪರ್ಕ ಕಲ್ಪಿಸುವ ಬಸ್ಸುಗಳನ್ನು ಹೆಚ್ಚಿಸಲಾಗಿದೆ.

# 3 ದಿನ ರಾಜ್ಯಾದ್ಯಂತ ವರ್ಷಧಾರೆ, ಯೆಲ್ಲೋ ಅಲರ್ಟ್ ಘೋಷಣೆ

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ತಣ್ಣಗಾಗಿದ್ದ ಮಳೆರಾಯ ಮತ್ತೆ ಅಬ್ಬರಿಸಲು ಸಜ್ಜಾಗಿದ್ದು ಮುಂದಿನ 3 ದಿನಗಳ ಕಾಲ ರಾಜ್ಯಾದ್ಯಂತ ಮಳೆ ಚುರುಕು ಪಡೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಕರ್ನಾಟಕದಲ್ಲಿ ಮುಂದಿನ ಮೂರು ದಿನದ ಬಳಿಕ ಮತ್ತೆ ಮಳೆ ಹೆಚ್ಚಾಗಲಿದ್ದು, ಕರಾವಳಿಯಲ್ಲಿ ಸಾಧಾರಣ ಮಳೆಯಾಗಲಿದ್ದು, ಉತ್ತರ, ದಕ್ಷಿಣ ಒಳನಾಡಿನ ಸಾಕಷ್ಟು ಕಡೆ ಭಾರಿ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸೆ.8 ರಿಂದ 10ರವರೆಗೂ ರಾಜ್ಯದ ಸಾಕಷ್ಟು ಕಡೆಗಳಲ್ಲಿ ಮತ್ತೆ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ರಾಜ್ಯದ ವಿಜಯನಗರ, ಶಿವಮೊಗ್ಗ, ಮೈಸೂರು, ಮಂಡ್ಯ, ಕೊಡಗು, ಹಾಸನ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಚಾಮರಾಜನಗರ, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿಯಲ್ಲಿ ಸಾಧಾರಣ ಮಳೆಯಾಗಲಿದೆ.



**ಯೆಲ್ಲೋ ಅಲರ್ಟ್:** ಬೀದರ್, ಕಲಬುರಗಿ, ವಿಜಯಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

# ಕ್ಯೂ ಸಿಟಿ ನಿರ್ಮಾಣಕ್ಕೆ ಸರ್ಕಾರದಿಂದ ಜಾಗ ಮಂಜೂರು

• ಉದಯವಾಹಿನಿ, ಬೆಂಗಳೂರು

ಅತ್ಯಾಧುನಿಕ ಪ್ರಯೋಗಾಲಯಗಳು, ಸ್ಟಾರ್ಟ್‌ಅಪ್‌ಗಳಿಗೆ ಇನ್ಕ್ಯುಬೇಷನ್ ಸೌಲಭ್ಯಗಳು ಹಾಗೂ ಕೈಗಾರಿಕಾ ಶೈಕ್ಷಣಿಕ ಸಹಭಾಗಿತ್ವಕ್ಕೆ ಅಗತ್ಯವಾದ ಮೂಲಸೌಕರ್ಯಗಳನ್ನು ಹೊಂದಿರುವ ಕ್ಯೂ–ಸಿಟಿ (ಕ್ವಾಂಟಮ್ ಸಿಟಿ) ಸ್ಥಾಪನೆಗೆ ರಾಜ್ಯ ಸರ್ಕಾರ ಹೆಸರುಘಟ್ಟದಲ್ಲಿ 6.17 ಎಕರೆ ಜಾಗವನ್ನು ಮಂಜೂರು ಮಾಡಿದೆ. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್ ಎಸ್ ಭೋಸರಾಜು ಮಾಹಿತಿ ಹಂಚಿಕೊಂಡಿದ್ದಾರೆ.

ಕ್ವಾಂಟಮ್ ಕಂಪ್ಯೂಟರ್ ಕ್ಷೇತ್ರದಲ್ಲಿ 2035 ರ ವೇಳೆಗೆ ಕರ್ನಾಟಕವನ್ನು 20 ಶತಕೋಟಿ ಡಾಲರ್ ಕ್ವಾಂಟಮ್ ಆರ್ಥಿಕ ರಾಜ್ಯವಾಗಿ ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ದಿಟ್ಟ ಕ್ರಮಗಳನ್ನು ಕೈಗೊಳ್ಳಲಿದೆ. ಇದಕ್ಕೆ ಪೂರಕವಾಗಿ ನಮ್ಮ ಸರ್ಕಾರ ಕ್ಯೂ – ಸಿಟಿ ನಗರಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ದೇಶದ ಮೊದಲ ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮಾವೇಶದಲ್ಲಿ ನೀಡಿದ ಭರವಸೆಯಂತೆ ಕ್ವಾಂಟಮ್ ಸಿಟಿ ಗೆ ಜಾಗವನ್ನು ಮಂಜೂರು ಮಾಡಲಾಗಿದೆ ಎಂದು ತಿಳಿಸಿದ್ದಾರೆ.



**ಸೈದ್ಧಾಂತಿಕ ವಿಜ್ಞಾನ ಕೇಂದ್ರ ವಿಸ್ತರಣೆಗೆ 8 ಎಕರೆ ಭೂಮಿ:** ಅಲ್ಲದೇ, ಅಂತಾರಾಷ್ಟ್ರೀಯ ಸೈದ್ಧಾಂತಿಕ ವಿಜ್ಞಾನ ಕೇಂದ್ರ ವಿಸ್ತರಣೆಗೆ 8 ಎಕರೆ ಭೂಮಿಯನ್ನೂ ನೀಡಲಾಗಿದೆ. ಹೆಚ್ಚುವರಿ ಭೂಮಿ, ಸೈದ್ಧಾಂತಿಕ ವಿಜ್ಞಾನ ಕ್ಷೇತ್ರದಲ್ಲಿ ಅದರ ಶೈಕ್ಷಣಿಕ ಮತ್ತು ಸಂಶೋಧನಾ ವಿಸ್ತರಣೆಗೆ ನೆರವಾಗಲಿದೆ. ಎರಡೂ ಅಭಿವೃದ್ಧಿಗಳು ಸೇರಿ ಕರ್ನಾಟಕವನ್ನು ಉನ್ನತ ವಿಜ್ಞಾನ ಮತ್ತು ನವೀನತೆಯ ಕೇಂದ್ರವಾಗಿ ಎತ್ತಿ ಹಿಡಿಯಲಿವೆ ಎಂದು ಹೇಳಿದ್ದಾರೆ.

''ಕರ್ನಾಟಕದ ದೃಷ್ಟಿಯಲ್ಲಿ ಇದು ಐತಿಹಾಸಿಕ ಘಟ್ಟವಾಗಿದೆ. ಹೆಸರಘಟ್ಟದಲ್ಲಿ ನಿರ್ಮಾಣಗೊಳ್ಳಲಿರುವ ಕ್ವಾಂಟಮ್ ಸಿಟಿ ಜಾಗತಿಕ ಪ್ರತಿಭೆ, ಹೂಡಿಕೆಗಳನ್ನು ಆಕರ್ಷಿಸಲಿದೆ. ಬೆಂಗಳೂರನ್ನು ಭಾರತದ ಹಾಗೂ ವಿಶ್ವದ ಕ್ವಾಂಟಮ್ ಭೂಪಟದ ಪ್ರಮುಖ ಕೇಂದ್ರವಾಗಿ ಮತ್ತಷ್ಟು ಅಭಿವೃದ್ಧಿಯಾಗಲು ಸಹಕಾರಿಯಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

### ವಿಶ್ವ ದರ್ಜೆಯ ಸೌಲಭ್ಯ

ಕ್ಯೂ ಸಿಟಿಯಲ್ಲಿ ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸಲಾಗುವುದು. ಇದು ಶೈಕ್ಷಣಿಕ ಸಂಸ್ಥೆಗಳು, ನಾವೀನ್ಯತಾ ಕೇಂದ್ರಗಳು, ಕ್ವಾಂಟಮ್ ಹಾರ್ಡ್‌ವೇರ್‌ಗಳಿಗಾಗಿ ಉತ್ಪಾದನಾ ಕ್ಲಸ್ಟರ್‌ಗಳು, ಪ್ರೊಸೆಸರ್‌ಗಳು ಮತ್ತು ಸಹಾಯಕಗಳು ಹಾಗೂ ಕ್ವಾಂಟಮ್ ಎಚ್ .ಪಿ.ಸಿ. ಡೇಟಾ ಕೇಂದ್ರಗಳ ಸಹಯೋಗದೊಂದಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಕ್ಲಸ್ಟರ್‌ಗಳನ್ನು ಸಂಯೋಜಿಸಲಿದೆ ಎಂದು ಸಚಿವರು ಹೇಳಿದ್ದಾರೆ.

# ಫ್ರೀಡಂ ಪಾರ್ಕ್ ಮಾದರಿಯಲ್ಲಿ ಮಾರುಕಟ್ಟೆಯಲ್ಲಿ ಸ್ಮಾರ್ಟ್ ಪಾರ್ಕಿಂಗ್ ಸೌಲಭ್ಯ!

• ಉದಯವಾಹಿನಿ, ಬೆಂಗಳೂರು

ಕೆ.ಆರ್ ಮಾರುಕಟ್ಟೆಯ ಪಾರ್ಕಿಂಗ್ ಸಮಸ್ಯೆ ಪರಿಹರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಂದಾಗಿದೆ. ಮಾರುಕಟ್ಟೆಗೆ ಬರುವವರ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ನಿರ್ಧರಿಸಿದೆ.

ಈ ಹಿನ್ನೆಲೆಯಲ್ಲಿ ಕೆ.ಆರ್. ಮಾರುಕಟ್ಟೆಯಲ್ಲಿ ಕಾರುಗಳು ದ್ವಿಚಕ್ರ ವಾಹನಗಳಿಗಾಗಿ ಬಹು ಹಂತದ ಸ್ಮಾರ್ಟ್ ಪಾರ್ಕಿಂಗ್ ಸೌಲಭ್ಯವನ್ನು ನಿರ್ಮಿಸಲಿದೆ. 200 ಕಾರುಗಳು ಮತ್ತು 400 ಬೈಕ್‌ಗಳಿಗೆ ಪಾರ್ಕಿಂಗ್ ಗಾಗಿ ಸ್ಥಳಾವಕಾಶ ಕಲ್ಪಿಸಲಿದೆ. ಗಾಂಧಿ ನಗರದ ಫ್ರೀಡಂ ಪಾರ್ಕ್ ಮಾದರಿ ಅಳವಡಿಸಿ ಸೌಲಭ್ಯ ಕಲ್ಪಿಸಲು ಮುಂದಾಗಿದೆ. ಪ್ರಿನ್ಸ್ ರಾಯಲ್ ಪಾರ್ಕಿಂಗ್ ಬ್ಯುಸಿನೆಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ಕಲ್ಯಾಣ್ ಎಸ್ ಅವರ ಪ್ರಕಾರ, ಸಂಸ್ಥೆಯು ಕೆ.ಆರ್. ಮಾರುಕಟ್ಟೆಯಲ್ಲಿ ಗಾಂಧಿ ನಗರ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಪುನರಾವರ್ತಿಸುತ್ತದೆ. ಮೂಲಸೌಕರ್ಯಗಳನ್ನು ಸ್ಥಾಪಿಸುವ ಕೆಲಸ ಸೋಮವಾರದಿಂದ ಪ್ರಾರಂಭವಾಗುತ್ತದೆ ಎಂದಿದ್ದಾರೆ,



ಕಂಪನಿಯು ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಆಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪ್ರಾಜೆಕ್ಟ್ ವಿಭಾಗ) ದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಸೆ.1 ರಂದು ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು ಇದು 10 ವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಏಜೆನ್ಸಿ 4.37 ಕೋಟಿ ರೂ.ಗಳನ್ನು ಪಾವತಿಸಿದ್ದು, 6 ತಿಂಗಳೊಳಗೆ ಸೌಲಭ್ಯ ಕಲ್ಪಿಸುತ್ತದೆ ಎಂದು ಅವರು ಹೇಳಿದರು. ಪಾರ್ಕಿಂಗ್ ದರಗಳನ್ನು ಪಾಲಿಕೆ ನಿಗದಿಪಡಿಸಿದ್ದು ಏಜೆನ್ಸಿ ಅದನ್ನು ಪಾಲಿಸಬೇಕಾಗುತ್ತದೆ. ದರಗಳು ಆರ್ಥಿಕವಾಗಿರುತ್ತವೆ, ನಾಲ್ಕು ಚಕ್ರದ ವಾಹನಗಳಿಗೆ ಗಂಟೆಗೆ 15 ರೂ. ಮತ್ತು ದ್ವಿಚಕ್ರ ವಾಹನಗಳಿಗೆ 10 ರೂ.ಗಳನ್ನು ನಿಗದಿಪಡಿಸಲಾಗಿದೆ ಎಂದು ಏಜೆನ್ಸಿ ತಿಳಿಸಿದೆ. ಫ್ರೀಡಂ ಪಾರ್ಕ್‌ನಲ್ಲಿ ಸ್ಮಾರ್ಟ್ ಪಾರ್ಕಿಂಗ್ ಮಾದರಿಯು ನಷ್ಟದಲ್ಲಿ ಚಾಲನೆಯಲ್ಲಿದೆ ಏಕೆಂದರೆ ಅಲ್ಲಿಗೆ ಹೆಚ್ಚಿನ ವಾಹನಗಳು ಬರುವುದಿಲ್ಲ. ವಾಹನ ಮಾಲೀಕರು ಅಕ್ರಮವಾಗಿ ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಾರೆ ಎಂದು ಕಂಪನಿ ಹೇಳಿದೆ. ಪಾರ್ಕಿಂಗ್ ವ್ಯವಸ್ಥೆಯನ್ನು ತರುವುದು, ಅದೇ ಸಮಯದಲ್ಲಿ ಸ್ವಲ್ಪ ಲಾಭ ಗಳಿಸುವುದು ಸಂಸ್ಥೆಯ ಗುರಿಯಾಗಿದೆ ಎಂದು ಕಲ್ಯಾಣ್ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ ಮಹೇಶ್ವರ ರಾವ್, ಕೆಆರ್ ಮಾರುಕಟ್ಟೆಯಲ್ಲಿ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆಯ ಫಲಿತಾಂಶಗಳನ್ನು ನೋಡಲಾಗುವುದು, ವಿಶ್ಲೇಷಿಸಲಾಗುವುದು, ಫಲಿತಾಂಶಗಳು ಉತ್ತಮವಾಗಿದ್ದರೆ, ಅದನ್ನು ಇತರ ಸ್ಥಳಗಳಲ್ಲಿ ಪುನರಾವರ್ತಿಸಲಾಗುವುದು ಎಂದು ಹೇಳಿದರು.

ಎಲೆಕ್ಟ್ರಾನಿಕ್ ವಾಹನ ಚಾರ್ಜರ್‌ಗಳು, ಮಳೆ ನೀರು ಕೊಯ್ಲು ವ್ಯವಸ್ಥೆಗಳು ಮತ್ತು ಸಂವೇದಕ ಆಧಾರಿತ ನೆಲಮಾಳಿಗೆಯ ಪಾರ್ಕಿಂಗ್ ವ್ಯವಸ್ಥೆಯನ್ನು ಸುಮಾರು 8 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಮಳೆನೀರು ಕೊಯ್ಲು ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಂಸ್ಥೆಯು ಬಯಸಿದ್ದು, ತಲಾ 10,000 ಲೀಟರ್ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವ 10 ಪರ್ಕೊಲೇಷನ್ ಪಿಟ್‌ಗಳನ್ನು ಸ್ಥಾಪಿಸಲಿದೆ. ಅಲ್ಲದೆ, ನೀರನ್ನು ಹೊರಹಾಕಲು 10 ಎಚ್‌ಪಿ ಸೆನ್ಸರ್ ಮೋಟಾರ್‌ಗಳನ್ನು ಸ್ಥಾಪಿಸಲಾಗುವುದು. ಒಂದು ಅಡಿ ಮಳೆ ನೀರು ನೆಲಮಾಳಿಗೆಗೆ ಬಂದರೆ ಅಲ್ಲಿಂದ ನೀರು ಹೊರಹಾಕಲು ಮೋಟಾರ್‌ಗಳು ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತವೆ ಎಂದು ಕಂಪನಿಯ ಅಧಿಕಾರಿಯೊಬ್ಬರು ಹೇಳಿದರು.

# ಬೆಂಗಳೂರಿನ ಹೃದಯ ಭಾಗದ ಹಲವೆಡೆ ಸಂಚಾರಕ್ಕೆ ನಿರ್ಬಂಧ

• ಉದಯವಾಹಿನಿ, ಬೆಂಗಳೂರು

ಶಿವಾಜಿನಗರದ ಸೇಂಟ್ ಮೇರಿ ಬೆಸಿಲಿಕಾದಲ್ಲಿ ಸೋಮವಾರ ಆರೋಗ್ಯ ಮಾತೆಯ ರಥೋತ್ಸವ ನಡೆಯಲಿರುವ ಹಿನ್ನೆಲೆಯಲ್ಲಿ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಳ್ಳಲಿದ್ದು, ವಾಹನ ದಟ್ಟಣೆ ಉಂಟಾಗಲಿದೆ. ಹೀಗಾಗಿ, ಸುಗಮ ಸಂಚಾರದ ದೃಷ್ಟಿಯಿಂದ ಸುತ್ತಮುತ್ತ ವಾಹನ ಸಂಚಾರ ವ್ಯವಸ್ಥೆಯಲ್ಲಿ ಮಧ್ಯಾಹ್ನ 1 ಗಂಟೆಯಿಂದ ರಾತ್ರಿ 10ರವರೆಗೆ ಬದಲಾವಣೆ ಮಾಡಲಾಗಿದೆ ಮತ್ತು ಕೆಲ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಸಂಚಾರ ನಿರ್ಬಂಧ ಎಲ್ಲೆಲ್ಲಿ?**



- ಜ್ಯೋತಿ ಕೆಫೆ ವೃತ್ತದಿಂದ ರಸೆಲ್ ಮಾರ್ಕೆಟ್ ವರೆಗೆ ರಸ್ತೆಯ ಎರಡೂ ಬದಿ.
- ಬ್ರಾಡ್‌ವೇ ರಸ್ತೆಯಲ್ಲಿರಸೆಲ್ ಮಾರ್ಕೆಟ್ ಕಡೆಗೆ ರಸ್ತೆಯ ಎರಡೂ ಬದಿ.
- ಧರ್ಮರಾಜ ಕೋಯಿಲ್ ಸ್ಟ್ರೀಟ್–ಓಪಿ ಎಚ್ ರಸ್ತೆವರೆಗೆ ರಸೆಲ್ ಮಾರ್ಕೆಟ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ತಾಜ್ ವೃತ್ತದಲ್ಲಿ ನಿರ್ಬಂಧಿಸಲಾಗಿದೆ.
- ಬಿಆರ್‌ವಿ ಜಂಕ್ಷನ್‌ನಿಂದ ಶಿವಾಜಿನಗರ ಬಸ್ ನಿಲ್ದಾಣಕ್ಕೆ ಬರುವ ಬಿಎಂಟಿಸಿ ಬಸ್‌ಗಳು ಸೇರಿದಂತೆ ಎಲ್ಲಾ ವಾಹನಗಳು.
- ಬಾಳೇಕುಂದ್ರಿ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣಕ್ಕೆ ಬರುವ ಬಿಎಂಟಿಸಿ ಬಸ್‌ಗಳು ಸೇರಿದಂತೆ ಎಲ್ಲಾ ವಾಹನಗಳು.

# ಬೆಂಗಳೂರಿನಲ್ಲಿ ಕಾರ್ ಡ್ರೈವರ್‌ನ ಭೀಕರ ಕೊಲೆ: ಸ್ನೇಹಿತರಿಂದಲೇ ಹತ್ಯೆ ಶಂಕೆ

• ಉದಯವಾಹಿನಿ, ಬೆಂಗಳೂರು

ಕಾರ್ ಡ್ರೈವರ್‌ನನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಬೆಂಗಳೂರಿನ ಮೈಸೂರು ರಸ್ತೆಯ ಬಾಪೂಜಿನಗರದಲ್ಲಿ ನಡೆದಿದೆ. ಕೌಶಿಕ್ (25 ) ಕೊಲೆಯಾದ ದುರ್ದೈವಿ. ಮೃತ ಕೌಶಿಕ್ ಬ್ಯಾಟರಾಯನಪುರದಲ್ಲಿ ರೌಡಿಶೀಟರ್ ಆಗಿದ್ದ. 2020ರಲ್ಲಿ ಕೊಲೆ ಕೇಸ್ ಒಂದರಲ್ಲಿ ಕೌಶಿಕ್ ಎ8 ಆರೋಪಿಯಾಗಿ ಜೈಲು ಸೇರಿದ್ದ. ಬಳಿಕ ಜಾಮೀನಿನ ಮೂಲಕ ಹೊರಬಂದು, ಕ್ಯಾಬ್ ಓಡಿಸಿಕೊಂಡು ಜೀವನ ಸಾಗಿಸ್ತಿದ್ದ. ರಾತ್ರಿ ಕೌಶಿಕ್, ಸ್ನೇಹಿತರೊಂದಿಗೆ ಪಾರ್ಟಿ ಮಾಡುತ್ತಿದ್ದ ವೇಳೆ ಜಗಳ ನಡೆದಿದೆ. ಬಳಿಕ ಜೊತೆಯಲ್ಲಿದ್ದ ಸ್ನೇಹಿತರೇ ಕೌಶಿಕ್‌ನನ್ನು ಹತ್ಯೆಗೈದಿದ್ದಾರೆ ಎನ್ನಲಾಗುತ್ತಿದೆ. ಮಧ್ಯರಾತ್ರಿ 2:30ರ ಸುಮಾರಿಗೆ ಆರೋಪಿಗಳು ಕೊಲೆ ಮಾಡಿ ಪರಾರಿಯಾಗಿದ್ದಾರೆ. ಘಟನಾ ಸ್ಥಳಕ್ಕೆ ಬ್ಯಾಟರಾಯನಪುರ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಬಳಿಕ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿದ್ದಾರೆ. ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅನರ್ಹ ಬಿಪಿಎಲ್ ರೇಷನ್ ಕಾರ್ಡ್ ಹೊಂದಿದವರಿಗೆ ಶಾಕ್! ಕಠಿಣ ಕ್ರಮಕ್ಕೆ ಸಿಎಂ ಸೂಚನೆ

## ಅನ್ನಭಾಗ್ಯ ಅಕ್ಕಿಯ ಬದಲು ಪ್ರದೇಶವಾರು ಇತರ ಧಾನ್ಯಗಳನ್ನು ನೀಡುವ ಬಗ್ಗೆ ಪರಿಶೀಲನೆಗೆ ಸಿಎಂ ಸಲಹೆ

• ಉದಯವಾಹಿನಿ, ಬೆಂಗಳೂರು

ಅನರ್ಹ ಬಿಪಿಎಲ್ ಕಾರ್ಡ್ ಹೊಂದಿರುವವರ ವಿರುದ್ಧ ಕ್ರಮಕ್ಕೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಅಂತಹ ಕಾರ್ಡ್‌ದಾರರನ್ನು ಗುರುತಿಸಿ ರದ್ದು ಮಾಡಿ ಕ್ರಮ ಜರುಗಿಸಿ ಎಂದ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ಬೆಂಗಳೂರಿನಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಈ ವೇಳೆ ಮಾತನಾಡಿದ ಸಿಎಂ, ಅನರ್ಹ ಬಿಪಿಎಲ್ ಕಾರ್ಡುದಾರರನ್ನು ಗುರುತಿಸಿ ಬಿಪಿಎಲ್ ಕಾರ್ಡ್ ರದ್ದುಪಡಿಸುವ ಕಾರ್ಯವನ್ನು ಪಂಚಾಯತ್ ಮಟ್ಟದಲ್ಲಿ ನಡೆಸಬೇಕು.


ಈ ಕುರಿತಾಗಿರುವ ಮಾನದಂಡಗಳನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಬೇಕು ಎಂದು ಸೂಚನೆ ನೀಡಿದರು. ಈ ವಾರದಿಂದಲೇ ಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳು ಕ್ರಮಕ್ಕೆ ಮುಂದಾಗಲಿದ್ದಾರೆ ಎನ್ನಲಾಗಿದೆ. ಅನ್ನಭಾಗ್ಯ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಕ್ಕಿಯ ಬದಲು ಪ್ರದೇಶವಾರು ಇತರ ಧಾನ್ಯಗಳನ್ನು ನೀಡುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗಿದೆ.

ಮರಣ ಹೊಂದಿದವರ ಪಟ್ಟಿ ಪ್ರತಿ ತಿಂಗಳು ನವೀಕರಣ



GOVERNMENT OF KARNATAKA
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ
Food, Civil Supplies and Consumer Affairs Department
ತಾಲ್ಲೂಕು : (IRA) ಜಿಲ್ಲೆ :
ಪಡಿತರ ಚೀಟಿಯ ಸಂಖ್ಯೆ Ration Card No RY763849
Name of Holder
In Kannada
In English
Address of Card Holder
ಸದಸ್ಯರ ಸಂಖ್ಯೆ Family Members :
Consumer No. & Distributor's Name :
Fair Price Shop No. & Name :

ಮರಣ ಹೊಂದುವ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ತಿಂಗಳು ಪಂಚಾಯತ್ ಹಂತದಲ್ಲಿ ನವೀಕರಿಸಿ ಸಂಬಂಧಪಟ್ಟ ಬ್ಯಾಂಕುಗಳಿಗೆ ಮಾಹಿತಿಯನ್ನು ಒದಗಿಸಬೇಕು. ಮರಣ ಹೊಂದುವ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಬೇಕು.



ಗ್ಯಾರಂಟಿ ಯೋಜನೆಗಳ ಲಾಭ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಆಂದೋಲನ ಮಾದರಿಯಲ್ಲಿ ಕಾರ್ಯ ನಿರ್ವಹಿಸಬೇಕು. ಪಂಚಾಯತ್ ಮಟ್ಟದಲ್ಲಿ ಫಲಾನುಭವಿಗಳ ಸೇರ್ಪಡೆ ಮತ್ತು ತೆಗೆದು ಹಾಕುವಿಕೆಗೆ ಕ್ರಮ ಕೈಗೊಳ್ಳಬೇಕು ಎಂದು ಸಿಎಂ ತಿಳಿಸಿದ್ದಾರೆ.

ತೆರಿಗೆ ಪಾವತಿಸುವವರಿಗೆ ಗೃಹಲಕ್ಷ್ಮಿ ಯೋಜನೆ ಗೊಂದಲ **ನಿವಾರಣೆಗೆ ಕ್ರಮ:** ಜಿಎಸ್‌ಟಿ ರಿಟರ್ನ್ ಸಲ್ಲಿಸುವವರು ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯುವ ಕುರಿತು ಇರುವ ಗೊಂದಲವನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಿಎಂ ಹೇಳಿದ್ದಾರೆ.

### ಗ್ಯಾರಂಟಿ ಯೋಜನೆ ಯಾವುದಕ್ಕೆ ಎಷ್ಟು ಖರ್ಚು

- ಪಂಚ ಗ್ಯಾರಂಟಿ ಯೋಜನೆ ಒಟ್ಟಾರೆ – 97,813 ಕೋಟಿ ರೂ.
- ಗೃಹಲಕ್ಷ್ಮಿ ಯೋಜನೆ – 1.24ಕೋಟಿ ಫಲಾನುಭವಿಗಳಿಗೆ ಒಟ್ಟು 50,005 ಕೋಟಿ ರೂ.
- ಗೃಹಜ್ಯೋತಿ ಯೋಜನೆ – 1.64 ಕೋಟಿ ಫಲಾನುಭವಿಗಳಿಗೆ 18,139 ಕೋಟಿ ರೂ.
- ಯುವನಿಧಿ ಯೋಜನೆ – 2.55ಲಕ್ಷ ಫಲಾನುಭವಿಗಳಿಗೆ 623 ಕೋಟಿ ರೂ.
- ಶಕ್ತಿ ಯೋಜನೆ – 544ಕೋಟಿ ಫಲಾನುಭವಿಗಳಿಗೆ 13,903 ಕೋಟಿ ರೂ.
- ಅನ್ನಭಾಗ್ಯ ಯೋಜನೆ – 72.02ಕೋಟಿ ಫಲಾನುಭವಿಗಳಿಗೆ 11,821.17 ಕೋಟಿ ರೂ.

# ಬಾನು ಮುಷ್ತಾಕ್ ಕ್ಷಮೆ ಕೇಳಿದ್ರೆ ಕೇಸ್ ವಾಪಸ್ ತಗೋತೇನೆ

## ಸಿಎಂ ಅಲ್ಪಸಂಖ್ಯಾತರ ಓಲೈಕೆಗೆ ಯಾವ ಮಟ್ಟಕ್ಕೆ ಬೇಕಾದ್ರೂ ಹೋಗ್ತಾರೆ ಎಂದು ಟೀಕಿಸಿದ ಪ್ರತಾಪ್ ಸಿಂಹ

• **ಉದಯವಾಹಿನಿ, ಮೈಸೂರು**

ಕನ್ನಡ ಬಾವುಟ, ಕನ್ನಡ ತಾಯಿ ಬಗ್ಗೆ ಕೊಟ್ಟಿರುವ ವಿವಾದಾತ್ಮಕ ಹೇಳಿಕೆ ವಾಪಸ್ ಪಡೆದರೆ, ಕ್ಷಮೆ ಕೇಳಿದರೆ, ಕೇಸ್ ವಾಪಸ್ ಪಡೆಯುತ್ತೇನೆಂದು ಬಾನು ಮುಷ್ತಾಕ್ ಕುರಿತು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಿ ಕೋರ್ಟ್ ಮೊರೆ ಹೋಗಿರುವ ವಿಚಾರವಾಗಿ ಮೈಸೂರಿನಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಈ ಬಾರಿ ಬಾನು ಮುಷ್ತಾಕ್ ಆಯ್ಕೆಯಾದಾಗಲೇ ನಾನು ಪ್ರಶ್ನೆ ಮಾಡಿದ್ದೆ. ಬಾನು ಮುಷ್ತಾಕ್ ಬಗ್ಗೆ, ಅವರ ಸಾಧನೆಯ ಬಗ್ಗೆ ನಮಗೆ ಅಪಾರ ಗೌರವವಿದೆ. ಆದ್ರೆ ದಸರಾ ಧಾರ್ಮಿಕ ವಿಚಾರ, ಇದರ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ಬೇಡ. ಸರ್ಕಾರ ಪುನರ್ ಚಿಂತನೆ ಮಾಡಬೇಕು ಅಂತ ಹೇಳಿದ್ದೆ ಎಂದಿದ್ದಾರೆ. ಬಾನು ಮುಷ್ತಾಕ್ ಮುಸ್ಲಿಂ ಅಂತ ನಾನು ವಿರೋಧ ಮಾಡಲ್ಲ, ಆದ್ರೆ, ನಾಡನ್ನು ಕನ್ನಡ ತಾಯಿ ಮಾಡಿ, ಅರಿಸಿನ ಕುಂಕುಮ ಮಾಡಿ ಮುಸ್ಲಿಮರನ್ನು ಹೊರಗಿಟ್ಟಿದ್ದೀರಾ ಅಂತ ಹೇಳಿಕೆ ನೀಡಿದ್ದರು. ಇದಕ್ಕಾಗಿ ನಾನು ವಿರೋಧ ಮಾಡ್ತಿದ್ದೆ. ನಿಸಾರ್ ಅಹಮದ್ ಹೆಸರು ಎಳೆದು ತಂದರು. ಆದ್ರೆ ಕನ್ನಡ ತಾಯಿಯನ್ನು ನಿಸಾರ್ ಅಹಮದ್ ತಾಯಿ ಅಂತ ಒಪ್ಪಿಕೊಂಡಿದ್ದಾರೆ. ಸಿದ್ರಾಮಯ್ಯ ಬಾನು ಮುಷ್ತಾಕ್ ಹೇಳಿದ್ದ ಬಗ್ಗೆ ಏನಿದೆ ದಾಖಲೆ ಅಂತಾರೆ. ಅವರು



ಮಾತನಾಡಿರೋ ವಿಡಿಯೋ ಎಲ್ಲೆಡೆ ಇದೆ ಎಂದರು.

**ಕ್ಷಮೆ ಯಾಚುತ್ತಿದ್ದರೆ ಕೋರ್ಟ್‌ಗೆ ಹೋಗುತ್ತಿರಲಿಲ್ಲ!:** 2023ರ ಜನಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ತಾಯಿಯ ಬಗ್ಗೆ ಆಡಿರುವ ಮಾತು ತಪ್ಪಾಗಿದೆ ಅಂತ ಕ್ಷಮೆಯಾಚನೆ ಮಾಡಬೇಕಿತ್ತು. ಕ್ಷಮೆ ಯಾಚನೆ ಮಾಡಿದ್ರೆ ನಾನು ಕೋರ್ಟ್ ಮೊರೆ ಹೋಗುತ್ತಿರಲಿಲ್ಲ ಸಿದ್ದರಾಮಯ್ಯ ಅಲ್ಪ ಸಂಖ್ಯಾತರ ಓಲೈಕೆಗೆ ಯಾವ ಮಟ್ಟಕ್ಕೆ ಬೇಕಾದ್ರೂ ಹೋಗ್ತಾರೆ ಎಂದು ಟೀಕಿಸಿದರು.

ಈ ಹಿಂದೆ ಬರಗೂರು ರಾಮಚಂದ್ರಪ್ಪ ದೀಪ ಹಚ್ಚಲ್ಲ ಮಂಗಳಾರತಿ ತೆಗೆದುಕೊಳ್ಳಲ್ಲ ಅಂತ ಖ್ಯಾತಿ ತೆಗೆದಿದ್ರು. ಮುಸ್ಲಿಮರಲ್ಲಿ ಮೂರ್ತಿ ಪೂಜೆಗೆ ಅವಕಾಶ ಇಲ್ಲವೇ ಇಲ್ಲ, ಬಾನು ಮುಷ್ತಾಕ್ ಈ ಬಗ್ಗೆ ಮಾತನಾಡಲೇ ಇಲ್ಲ, ಅದಕ್ಕಾಗಿ ನಾನು ಕೋರ್ಟ್ ನಲ್ಲಿ ಪಿಐಎಲ್ ಹಾಕಿದ್ದೇನೆ. ಆರ್ಟಿಕಲ್ 26 ರ ಅಡಿಯಲ್ಲಿ ನಾನು ಕೇಸ್ ಹಾಕಿದ್ದೇನೆ ಪೂಜೆ ವಿಧಿ ವಿಧಾನ ಕುರಿತು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ನಮ್ಮ ಸಂಪ್ರದಾಯದ ವಿರುದ್ಧ ಕಂಡು ಬಂದರೆ ನಾವು ಪ್ರಶ್ನೆ ಮಾಡಬಹುದು ಬರಗೂರು ರಾಮ ಚಂದ್ರಪ್ಪ ರೀತಿ ಬಾನು ಮುಷ್ತಾಕ್ ತಾನಡೆ ತೆಗೆದರೆ ಏನಾಗುತ್ತೆ ಎಂದು ಪ್ರಶ್ನಿಸಿದ್ದಾರೆ.

ಮುಸ್ಲಿಮರು ಶಾಂತಿಪ್ರಿಯರು ಅಂತಾರೆ. ನಿನ್ನೆ ಮದ್ದೂರಿನಲ್ಲಿ ಗಣಪತಿ ಮೆರವಣಿಗೆ ವೇಳೆ ಕಲ್ಲು ಬಿಸಾಕಿದ್ದಾರೆ. ಅಷ್ಟು ಬಿಟ್ರೆ ಬೇರೆ ದೇವರಿಲ್ಲ ಅಂತಾರೆ. ಅಂತಹವರ ಕೈನಲ್ಲಿ ದಸರಾ ಉದ್ಘಾಟನೆ ಮಾಡೋದು ಸರಿ ಕಾಣಲ್ಲ, ಸಿದ್ದರಾಮಯ್ಯ ಅವರ ಹತ್ತಿರ ನಾವು ಸೆಕ್ಯುಲರ್ ಪಾಠ ಕಲಿಯಬೇಕಿಲ್ಲ, ಜಾಕೀರ್ ಹುಸೇನ್, ಬಿಸ್ಮಿಲ್ಲಾಖಾನ್ ಅವರನ್ನು ನಾವು ಒಪ್ಪಿದ್ದೇವೆ. ಅವರು ನಮ್ಮ ನೆಲ ಜಲ ಸಂಸ್ಕೃತಿ ಒಪ್ಪಿದ್ರು.

ಅಬ್ದುಲ್ ಕಲಾಂ ಅವರನ್ನು ನಾವು ರಾಷ್ಟ್ರಪತಿ ಮಾಡಿದ್ದೇವೆ. ನಾಡಿನ ನೆಲ ಜಲ ಒಪ್ಪುವವರಿಗೆ ನಾವು ಗೌರವ ಕೊಡುತ್ತೇವೆ ಎಂದು ಹೇಳಿದ್ದಾರೆ. ಹೀಗಾಗಿ ಕನ್ನಡ ತಾಯಿ, ಬಾವುಟದ ಬಗ್ಗೆ ಬಾನು ಮುಷ್ತಾಕ್ ನೀಡಿರುವ ವಿವಾದಾತ್ಮಕ ಹೇಳಿಕೆಗೆ ಕ್ಷಮೆ ಯಾಚನೆ ಮಾಡಿದರೆ ನಾನು ಕೇಸ್ ವಾಪಸ್ ತಗೋತೀನಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಮೈಸೂರಿನಲ್ಲಿ ಹೇಳಿದ್ದಾರೆ.

**ಗಲಭೆಗಳಿಗೆ ಯಾರು ಕಾರಣ?**

**ಕೆ.ಜಿ ಹಳ್ಳಿ, ಡಿ.ಜೆ ಹಳ್ಳಿ ಪ್ರಕರಣಗಳ ಕೇಸ್ ವಾಪಸ್ ತಗೊಂಡ ಪರಿಣಾಮ, ಕಳೆದ ವರ್ಷ ನಾಗಮಂಗಲದಲ್ಲಿ ಗಲಾಟೆ ಆಯ್ತು. ಈ ಬಾರಿ ಮದ್ದೂರಿನಲ್ಲಿ ಗಲಾಟೆ ಆಯ್ತು. ಇದಕ್ಕೆಲ್ಲ ಕಾರಣ ಯಾರು ಸಿದ್ದರಾಮಯ್ಯ ಅವ್ರೇ? ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ. ಪ್ರತಾಪ್ ಸಿಂಹ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಈ ರೀತಿ ಮಾಡುತ್ತಿದ್ದಾರೆ ಎಂಬ ಸಿಎಂ, ಡಿಸಿಎಂ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಹಾಗಾದ್ರೆ 2023ರಲ್ಲಿ ಬಾನು ಮುಷ್ತಾಕ್ ಮಾಡಿರುವ ಭಾಷಣ ನೀವು ಒಪ್ಪುತ್ತೀರಾ? ಈ ಬಗ್ಗೆ ಸಿದ್ದರಾಮಯ್ಯ, ಡಿ ಕೆ ಶಿವಕುಮಾರ್ ಹೇಳಲಿ. ಅವರು ಅವರ ಹೇಳಿಕೆ ಒಪ್ಪಿದರೆ, ನಾನು ಈಗಲೇ ನನ್ನ ಹೇಳಿಕೆ ವಾಪಸ್ ತಗೋತೀನಿ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ.**



## ಮಿನಿ ನ್ಯೂಸ್

### ದನದ ಕೊಠಡಿಗಳಾದ ಸಮುದಾಯ ಭವನ

• **ಉದಯವಾಹಿನಿ, ಹಾರೋಹಳ್ಳಿ**

ತಾಲ್ಲೂಕಿನಾದ್ಯಂತ ವಿವಿಧ ಯೋಜನೆಗಳಲ್ಲಿ ಆರಂಭಗೊಂಡಿದ್ದ ಸಮುದಾಯ ಭವನ ನಿರ್ಮಾಣ ಕಾಮಗಾರಿ ನನೆಗುದಿಗೆ ಬಿದ್ದಿದೆ. ಸರ್ಕಾರ ಸೂಕ್ತ ಸಮಯದಲ್ಲಿ ಹಣ ಬಿಡುಗಡೆ ಮಾಡದ ಪರಿಣಾಮ ಅರ್ಧಕ್ಕೆ ನಿಂತಿರುವ ಭವನಗಳು ದನದ ಕೊಟ್ಟಿಗೆಯಂತೆ ಬಳಕೆಯಾಗುತ್ತಿವೆ. ತಾಲೂಕಿನಲ್ಲಿ ಕೆಲವು ವರ್ಷಗಳ ಹಿಂದೆ ಆರಂಭಗೊಂಡಿದ್ದ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಬಹಳಷ್ಟು ಭವನಗಳು ಅಡಿಪಾಯ ಹಂತದಲ್ಲೇ ನಿಂತಿದ್ದು ಮೇಲೆದ್ದಿಲ್ಲ. ಕೆಲ ಭವನಗಳ ಕಾಮಗಾರಿ ಶೇ50ರಷ್ಟು ಪೂರ್ಣಗೊಂಡಿದ್ದರೂ ಅಂತಿಮ ಹಂತದ ಕೆಲಸ ಮಾಡಿ ಅವುಗಳನ್ನು ಉದ್ಘಾಟನೆ ಮಾಡಿಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಆರಂಭಗೊಂಡಿದ್ದ ಬಹುತೇಕ ಸಮುದಾಯ ಭವನಗಳ ಕಾಮಗಾರಿ ಅರ್ಧಕ್ಕೆ ನಿಂತಿವೆ. ಇದಕ್ಕಾಗಿ ನೂರಾರು ಕೋಟಿ ಹಣ ಪೋಲಾಗಿದೆ. ಸಮುದಾಯ ಸುತ್ತಮುತ್ತ ಆಳೆತ್ತರ ಗಿಡಗಂಟಿ ಬೆಳೆದು ನಿಂತಿವೆ. ಲಕ್ಷಾಂತರ ರೂ.ಸರ್ಕಾರದ ಹಣ ಖರ್ಚು ಮಾಡಿ ನಿರ್ಮಿಸಿರುವ ಭವನ ಹಾವು, ಹಲ್ಲಿಗಳ ಆವಾಸ ಸ್ಥಾನವಾಗಿದೆ. ಸಮುದಾಯ ಭವನ ಆವರಣ ಅಕ್ರಮ ಚಟುವಟಿಕೆಗಳ ತಾಣವಾಗಿದೆ. ರಾತ್ರಿ ವೇಳೆ ಮದ್ಯ ಸೇವನೆ ಮಾಡುವವರು ಆವರಣದಲ್ಲಿ ಮೋಜು, ಮಸ್ತಿ ಮಾಡುತ್ತಿದ್ದಾರೆ. ಬಹುತೇಕ ಸಮುದಾಯ ಭವನಗಳ ಕಾಮಗಾರಿ ಅನುದಾನ ಕೊರತೆಯಿಂದ ಸ್ಥಗಿತಗೊಂಡಿದೆ.

### ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳ ಸಾವು

• **ಉದಯವಾಹಿನಿ, ರಾಮನಗರ**

ತಾಲ್ಲೂಕಿನ ರೇವಣಸಿದ್ದೇಶ್ವರ ಬೆಟ್ಟದ ಪ್ರಕೃತಿ ಸೌಂದರ್ಯ ಸವಿಯಲು ಭಾನುವಾರ ಬಂದಿದ್ದ ಬೆಂಗಳೂರಿನ ವಿದ್ಯಾರ್ಥಿಗಳಿಬ್ಬರು, ಬೆಟ್ಟದ ಹಿಂಭಾಗದಲ್ಲಿರುವ ಇಲ್ಲಿನ ಅವೇರಹಳ್ಳಿಯ ಹೊಸಕೆರೆಯಲ್ಲಿ ಈಜುವಾಗ ಮುಳುಗಿ ಮೃತಪಟ್ಟಿದ್ದಾರೆ. ಬೆಂಗಳೂರಿನ ಬಾಗಲಕುಂಟೆಯ ಸಿದ್ದಾರ್ಥ್ (19) ಮತ್ತು ಹೆಸರುಘಟ್ಟದ ನಿಶಾಂತ್ (20) ಮೃತರು. ಇಬ್ಬರೂ ಯಲಹಂಕ ಬಳಿಯ ರಾಜಾನುಕುಂಟೆಯಲ್ಲಿರುವ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿಬಿಎ ಓದುತ್ತಿದ್ದರು. ಇಬ್ಬರು ವಿದ್ಯಾರ್ಥಿನಿಯರು ಸೇರಿದಂತೆ ಆರು ಮಂದಿಯ ತಂಡವು, ಯೂಟ್ಯೂಬ್‌ನಲ್ಲಿ ರೇವಣಸಿದ್ದೇಶ್ವರ ಬೆಟ್ಟದ ಸುಂದರ ಪ್ರಕೃತಿ ಗಮನಿಸಿ ಮಧ್ಯಾಹ್ನ ಕಾರಿನಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದರು. ಬೆಟ್ಟದಾಚೆಗಿರುವ ಅವೇರಹಳ್ಳಿಯ ಹೊಸಕೆರೆಗೆ ಸಂಜೆ 4 ಗಂಟೆ ಸುಮಾರಿಗೆ ಬಂದು, ಫೋಟೊ, ವಿಡಿಯೊ ತೆಗೆದುಕೊಂಡಿದ್ದರು ಎಂದು ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದರು. ಈ ವೇಳೆ, ಸಿದ್ದಾರ್ಥ್ ಈಜುವುದಕ್ಕಾಗಿ ನೀರಿಗೆ ಇಳಿದಿದ್ದಾರೆ. ಸ್ವಲ್ಪ ಮುಂದೆ ಆಳವಾದ ಜಾಗಕ್ಕೆ ಹೋಗಿ ಈಜುತ್ತಿದ್ದ ಅವರು, ನೀರಿನಲ್ಲಿ ಮುಳುಗತೊಡಗಿದ್ದಾರೆ. ಅದನ್ನು ಗಮನಿಸಿದ ನಿಶಾಂತ್, ರಕ್ಷಿಸುವುದಕ್ಕಾಗಿ ನೀರಿಗೆ ಜಿಗಿದಿದ್ದಾರೆ. ವೇಳೆ, ನೀರಿನ ಸೆಳೆತಕ್ಕೆ ಸಿಲುಕಿ ಇಬ್ಬರೂ ಮುಳುಗಿದ್ದಾರೆ ಎಂದು ಪೊಲೀಸರು ಹೇಳಿದರು.

### ನಕಲಿ ಪ್ರಮಾಣಪತ್ರ : ಆಸ್ಪತ್ರೆ ನೌಕರನ ವಿರುದ್ಧ ಪ್ರಕರಣ

• **ಉದಯವಾಹಿನಿ, ಕೆಜಿಎಫ್**

ರಾಬರ್ಟಸನ್‌ಪೇಟೆಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ವೈದ್ಯರ ಸಹಿಯುಳ್ಳ ಪ್ರಮಾಣಪತ್ರಗಳನ್ನು ನಕಲಿ ಮಾಡಿ ವಂಚಿಸುತ್ತಿದ್ದ ಆರೋಪದ ಮೇರೆಗೆ ಆಸ್ಪತ್ರೆಯ ಡಿ ಗ್ರೂಪ್ ನೌಕರನ ಮೇಲೆ ರಾಬರ್ಟಸನ್ ಪೇಟೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಡಿ ಗ್ರೂಪ್ ನೌಕರನಾಗಿ ಕೆಲಸ ಮಾಡುತ್ತಿದ್ದ ಡಿ.ಚಂದರ್ ಆರೋಪಿ. ಆರೋಪಿಯಿಂದ ನಕಲಿ ಮಾಡಲು ಉಪಯೋಗಿಸುತ್ತಿದ್ದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಚಂದರ್ ಆಸ್ಪತ್ರೆ ವೈದ್ಯರ ನಕಲಿ ಪ್ರಮಾಣ ಪತ್ರವನ್ನು ವಿತರಣೆ ಮಾಡುತ್ತಿದ್ದಾನೆ ಎಂಬ ದೂರಿನ ಹಿನ್ನೆಲೆ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಸುರೇಶ್ ಕುಮಾರ್, ಸಹಾಯಕ ಆಡಳಿತಾಧಿಕಾರಿ ಶ್ರೀಧರ್, ಕಚೇರಿ ಅಧೀಕ್ಷಕ ಸುಬ್ರಹ್ಮಣಿ ಸೇರಿದಂತೆ ಹಲವರ ಸಮ್ಮುಖದಲ್ಲಿ ಈಚೆಗೆ ಅವರ ಬೈಕ್ ತಪಾಸಣೆ ಮಾಡಲಾಯಿತು. ಬೈಕ್‌ನಲ್ಲಿ ವೈದ್ಯರಿಂದ ಸಹಿ ಪಡೆದಿರುವ ರಜೆಯ ವೈದ್ಯಕೀಯ ಪ್ರಮಾಣ ಪತ್ರ. ಆಸ್ಪತ್ರೆಯ 13 ಖಾಲಿ ವೈದ್ಯಕೀಯ ಪ್ರಮಾಣ ಪತ್ರ ಇರುವ ಪುಸ್ತಕ. ವೈದ್ಯರ ಸಹಿ ಮತ್ತು ಮೊಹರು ಇರುವ ವಯಸ್ಸಿನ ದೃಢೀಕರಣ ಪತ್ರ. ಆಸ್ಪತ್ರೆಯ ಔಷಧಿಗಳು, ಖಾಸಗಿ ಸಂಸ್ಥೆಯ ಲೆಟರ್ ಹೆಡ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ನಂತರ ವಿಚಾರಣೆ ನಡೆಸಿದಾಗ, ಆರೋಪಿಯು ಪ್ರಮಾಣ ಪತ್ರವನ್ನು ನಕಲು ಮಾಡಿ ದಾಖಲೆಗೆ 100 ರಂತೆ ಮಾರಾಟ ಮಾಡುತ್ತಿದ್ದನೆಂದು ತಿಳಿದುಬಂದಿದೆ ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಸುರೇಶ್‌ಕುಮಾರ್ ತಿಳಿಸಿದ್ದಾರೆ.

## ಉಪನಗರ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ಪ್ರತಿಭಟನೆ

• **ಉದಯವಾಹಿನಿ, ಬಿಡದಿ**

ಬಿಡದಿ ಸಮಗ್ರ ಉಪನಗರ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ಪ್ರತಿಭಟಿಸುತ್ತಿರುವ ರೈತರು, ಯೋಜನಾ ಪ್ರದೇಶದಲ್ಲಿ ಭೂ ಸ್ವಾಧೀನದ ಸರ್ವೆಗಾಗಿ ಅಧಿಕಾರಿಗಳನ್ನು ನಮ್ಮ ಜಮೀನಿಗೆ ಕಾಲಿಡಲು ಬಿಡುವುದಿಲ್ಲ. ಯೋಜನೆಯಿಂದ ನಮ್ಮ ಗ್ರಾಮಗಳನ್ನು ಕೈ ಬಿಡಬೇಕು ಎಂದು ಆಗ್ರಹಿಸಿ ಸೆ. 11ರಿಂದ ಪ್ರತಿಭಟನೆ ಆರಂಭಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.ಯೋಜನಾ ವ್ಯಾಪ್ತಿಯ ಹೊಸೂರಿನ ಮದ್ದೂರಮ್ಮ ಮತ್ತು ಬಿಸಿಲಮ್ಮ ದೇವಿಯ ತೋಪಿನಲ್ಲಿ ಜಮಾಯಿಸಿದ ರೈತರು, ತೆಂಗಿನ ಮರಕ್ಕೆ ಹಾಲೆರೆದು ಪೂಜೆ ಸಲ್ಲಿಸುವ ಮೂಲಕ ಪ್ರತಿಭಟನಾ ಸಭೆ ನಡೆಸಿದರು. ಮುಂದಿನ ಹೋರಾಟದ ರೂಪುರೇಷೆಗಳ ಕುರಿತು, ರೈತರ ಅಭಿಪ್ರಾಯಗಳನ್ನು ಸಂಗ್ರಹಿಸಿದರು.

ಭೂ ಸ್ವಾಧೀನವಾಗುವ ಜಮೀನಿನಲ್ಲಿರುವ ಕಲ್ಪವೃಕ್ಷ ತೆಂಗಿನಮರಗಳನ್ನು ಕಡಿಯುವವರು ನಾಶವಾಗಿ ಹೋಗುತ್ತಾರೆ. ಅಂತಹವರಿಗೆ ಈ ದೇವಿ ಶಿಕ್ಷೆ ನೀಡಲಿ ಎಂದು ಯೋಜನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸೆ. 5ರಂದು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸುವಾಗ ತಮ್ಮನ್ನು ಭೇಟಿ ಮಾಡಿದ ಮುಖ್ಯಮಂತ್ರಿ



**ರೈತರು ಒಪ್ಪಿಗೆ ನೀಡಿದ್ದಾರೊ, ಇಲ್ಲವೊ ಎಂಬುದನ್ನು ರೈತರ ಬಹಿರಂಗ ಸಭೆ ನಡೆಸಿ ತೀರ್ಮಾನಿಸಲಿ ಎಂದು ಸವಾಲು ಹಾಕಿದರು. ನಾ ರಾಜಕಾರಣಕ್ಕಾಗಿ ಹೋರಾಟ ಮಾಡುತ್ತಿಲ್ಲ. ಪಿತ್ರಾರ್ಜಿತ ಆಸ್ತಿ ಉಳಿಸಿಕೊಳ್ಳಲು. ನಮ್ಮ ಬದುಕಿನ ಹಕ್ಕಿಹಾಗಿ ಹೋರಾಟ ಮಾಡುತ್ತಿದ್ದೇವೆ. ಪ್ರತಿಭಟನೆಯ ವೇಳೆ ರೈತರ ಮೇಲೆ ಹರಿಹಾಯ್ದ ಡಿಸಿಎಂ ನಡೆ ಸರಿಯಲ್ಲ. ಈ ಕುರಿತು, ಅವರು ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.**

ಡಿ.ಕೆ. ಶಿವಕುಮಾರ್ ಅವರ, ಯೋಜನೆಗೆ ಶೇ 70ರಷ್ಟು ರೈತರು ಒಪ್ಪಿಗೆ ನೀಡಿದ್ದಾರೆ ಎಂಬ ಹೇಳಿಕೆ ಖಂಡಿಸಿದರು.

## ಸಾಮಾಜಿಕ ಸಮಾನತೆ ಹರಿಕಾರ ದೇವರಾಜ ಅರಸು

• **ಉದಯವಾಹಿನಿ, ಗೌರಿಬಿದನೂರು**

ಸಿಎಂ ದಿವಂಗತ ದೇವರಾಜ ಅರಸು ಅವರು ಸಮಾಜದ ಎಲ್ಲಾ ವರ್ಗದ ಸಮುದಾಯಗಳನ್ನು ಒಂದುಗೂಡಿಸುವ ಮೂಲಕ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದಾರೆ ಎಂದು ತಹಶೀಲ್ದಾರ್ ಮಹೇಶ್ ಎಸ್. ಪತ್ರಿ ಹೇಳಿದರು.

ನಗರದಲ್ಲಿ ತಾಲ್ಲೂಕು ಆಡಳಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿದ್ದ ಡಿ. ದೇವರಾಜು ಅರಸು ಅವರು 108ನೇ ಜನ್ಮ ದಿನಾಚರಣೆ' ಸಮಾರಂಭದಲ್ಲಿ ಅರಸು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಅವರು ಮಾತನಾಡಿದರು.

'ದೇವರಾಜ ಅರಸು ಅವರು ಸಮಾಜದ ಎಲ್ಲಾ ವರ್ಗದ ಜನರ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದಾರೆ. ಉಳುವವನೇ ಭೂಮಿಯ



ಒಡೆಯ, ಶಿಕ್ಷಣ, ವಿದ್ಯಾರ್ಥಿವೇತನ, ವಿದ್ಯಾರ್ಥಿನಿಲಯ ಸೇರಿದಂತೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಜೀತ ಪದ್ಧತಿ ಮುಕ್ತ ರಾಜ್ಯವಾಗಬೇಕು ಎಂಬ ನಿಟ್ಟಿನಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಹಾಗಾಗಿ ಅರಸು ಅವರ ಆದರ್ಶ ಮೌಲ್ಯಗಳನ್ನು ನಾವೆಲ್ಲರೂ ಪಾಲಿಸೋಣ' ಎಂದು ಹೇಳಿದರು. ನಗರಸಭೆ ಆಯುಕ್ತ ಡಿ.ಎಂಗೀತಾ ಮಾತನಾಡಿ, ಅರಸು ಅವರ ಚಿಂತನೆ, ಆಲೋಚನೆ, ಶೋಷಿತರ ಮೇಲಿನ ಕಳಕಳಿಯಿಂದಾಗಿ ಅವರನ್ನು ಎಲ್ಲಾ ಮುಖ್ಯಮಂತ್ರಿಗಳಿಂದ ಪ್ರತ್ಯೇಕಿಸಿ ವಿಶೇಷ ಸ್ಥಾನದಲ್ಲಿ ಕೂರಿಸಲಾಗಿದೆ ಎಂದು ಹೇಳಿದರು.

**108ನೇ ಜನ್ಮ ದಿನಾಚರಣೆ ಸಮಾರಂಭ**

**ದೇವರಾಜ ಅರಸು ಅವರ ಜನ್ಮದಿನಾಚರಣೆ ನಮ್ಮೆಲ್ಲರಿಗೂ ಮಾದರಿ ಜಯಂತಿಯಾಗಬೇಕು. ಅರಸು ರಾಜ್ಯ ಕಂಡ ಅಪ್ರತಿಮ ರಾಜಕಾರಣಿ. ಸಾಮಾಜಿಕವಾಗಿ ಸಮಾನತೆ ತರುವ ಉದ್ದೇಶವಿಟ್ಟುಕೊಂಡು ಸಾಮಾಜಿಕ, ಆರ್ಥಿಕವಾಗಿ ಬದಲಾಣೆ ತರಲು ಕೆಲಸ ಮಾಡಿದ್ದರು' ಎಂದು ತಿಳಿಸಿದರು.**

## ನನೆಗುದಿಗೆ ಬಿದ್ದ ಶಾಲಾ ಕೊಠಡಿ ಕಾಮಗಾರಿ: ಅಧಿಕಾರಿಗಳ ಭೇಟಿ

• **ಉದಯವಾಹಿನಿ, ಹುಳಿಯಾರು**

ಮೂರು ವರ್ಷಗಳಿಂದ ಶಾಲಾ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿರುವ ಹೋಬಳಿಯ ಲಕ್ಕೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪಂಚಾಯತ್ ರಾಜ್ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ಒಳಗೊಂಡ ತಂಡ ಭೇಟಿ ನೀಡಿ ಪರಿಶೀಲಿಸಿತು. ವಿವೇಕಾ ಯೋಜನೆಯಡಿ 2022ರಲ್ಲಿ ಹೊಸ ಕಟ್ಟಡ ಮಂಜೂರಾಗಿ ಮೂರು ವರ್ಷ ಕಳೆದರೂ ಕಟ್ಟಡ ಪೂರ್ಣಗೊಳ್ಳದೆ ನೆನಗುದಿಗೆ ಬಿದ್ದಿತ್ತು.

ಕಟ್ಟಡದ ಕಳಪೆ ಕಾಮಗಾರಿ ಬಗ್ಗೆ ಲಂಚಮುಕ್ತ ಕರ್ನಾಟಕ ವೇದಿಕೆ ಸೇರಿದಂತೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿದ್ದರು. ಈ ಬಗ್ಗೆ 'ಮೂರು ವರ್ಷ ಕಳೆದರೂ ಪೂರ್ಣಗೊಳ್ಳದ ಕಟ್ಟಡ ಕಾಮಗಾರಿ ಶೀರ್ಷಿಕೆಯಡಿ ಕಳೆದ ವಾರ ವರದಿ ಪ್ರಕಟವಾಗಿತ್ತು. ಈ ಹಿಂದೆ ತಳಪಾಯ ಕಳಪೆ ಕಾಮಗಾರಿ ಬಗ್ಗೆ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಅಲ್ಲದೆ ಮಕ್ಕಳ ಹಕ್ಕು



**ಕಟ್ಟಡ ಸಂಪೂರ್ಣ ಕಳಪೆ ಎಂಬ ಆರೋಪದ ಮೇರೆಗೆ ಬೆಂಗಳೂರಿನ ಗುಣಮಟ್ಟ ಪರಿಶೀಲನೆ ತಂಡ ಸಂಬಂಧಪಟ್ಟ ಕಾಮಗಾರಿಯ ವಸ್ತುಗಳನ್ನು ಪರಿಶೀಲಿಸಿದರು. ಗುಣಮಟ್ಟ ಪರಿಶೀಲನೆ ತಂಡ ಕಟ್ಟಡ ಕಾಮಗಾರಿ ಗುಣಮಟ್ಟದ ಬಗ್ಗೆ ವರದಿ ನೀಡಲಿದ್ದು, ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುತ್ತದೆ ಎಂದು ಪಂಚಾಯತ್ ರಾಜ್ ಎಂಜನಿಯರಿಂಗ್ ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮೋಹನ್‌ಕುಮಾರ್ ತಿಳಿಸಿದ್ದಾರೆ.**

ರಕ್ಷಣೆ ಆಯೋಗ ಸದಸ್ಯರು ಕೂಡ ಭೇಟಿ ನೀಡಿದ್ದರು. ಕಾರ್ಯಪಾಲಕ ಎಂಜಿನಿಯರ್ ಹನುಮಂತಪ್ಪ ಅವರ ತಂಡ ಭೇಟಿ ನೀಡಿ ಕಾಮಗಾರಿ ಬಗ್ಗೆ ಮಾಹಿತಿ ಪಡೆದರು.

## ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ರೈತರ ಸಭೆ ಕರೆಯವಂತೆ ಒತ್ತಾಯ

• **ಉದಯವಾಹಿನಿ, ಕೆ.ಆರ್.ಪೇಟೆ.**

ತಾಲ್ಲೂಕಿನ ಹೇಮಗಿರಿ ಸಕ್ಕರೆ ಕಾರ್ಖಾನೆಯ ಕಬ್ಬು ಕಟಾವು ಮತ್ತು ಸಾಗಾಣಿಕೆ ಕುರಿತಂತೆ ತಹಶೀಲ್ದಾರ್ ಅವರು ತಕ್ಷಣವೇ ಕಾರ್ಖಾನೆಯ ಆಡಳಿತ ಮಂಡಳಿ, ರೈತರ ಸಭೆ ಕರೆಯುವಂತೆ ತಾಲ್ಲೂಕು ರೈತಸಂಘ ಒತ್ತಾಯಿಸಿದೆ.

ಪಟ್ಟಣದ ರೈತಸಂಘದ ಕಛೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ ಕಬ್ಬು ಸಾಗಾಣಿಕೆ ಸಮಯದಲ್ಲಿ ಕಟಾವು ಕಾರ್ಮಿಕರಿಂದ ರೈತರಿಗೆ ಉಂಟಾಗುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ತಾಲ್ಲೂಕಿನ ಮಾಕವಳ್ಳಿಯಲ್ಲಿರುವ ಹೇಮಗಿರಿ ಶುಗರ್ಸ್ ವಾರ್ಷಿಕ 08 ಲಕ್ಷ ಟನ್‌ಗಳಷ್ಟು ಕಬ್ಬು ಅರೆಯುತ್ತಿದೆ. ಕಬ್ಬು ಕಟಾವು ಕಾರ್ಮಿಕರನ್ನು ಹೊರಗಿನಿಂದ ಕರೆತಂದು ಅವರಿಗೆ ಸಾಕಷ್ಟು ಸವಲತ್ತುಗಳನ್ನು ನೀಡುತ್ತಿದೆ. ಆದರೂ ಕಬ್ಬು ಕಟಾವು ಕಾರ್ಮಿಕರು ಕಾರ್ಖಾನೆ ನಿಗಧಿ ಪಡಿಸಿದ ದರಕ್ಕಿಂತಲೂ ಅಧಿಕ ಹಣವನ್ನು ರೈತರಿಂದ ವಸೂಲಿ ಮಾಡುತ್ತಿದ್ದಾರೆ. ಈಗಾಗಲೇ ಒಂದು ಟನ್ ಕಬ್ಬು ಕಡಿಯಲು 700 ರೂ ಹಣ ವಸೂಲಿ ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಇದು ಒಂದು ಸಾವಿರ ಗಡಿ ದಾಟಲಿದೆ. ಪ್ರತಿವರ್ಷವೂ ರೈತರು ಕಬ್ಬು ಕಟಾವು ಕಾರ್ಮಿಕರ ಸುಲಿಗೆಗೆ ಒಳಗಾಗುತ್ತಿದ್ದು



ಕಾರ್ಖಾನೆಯ ಆಡಳಿತ ಮಂಡಳಿ ಇದನ್ನೂ ಕಂಡೂ ಕಾಣದಂತೆ ವ್ಯವಹರಿಸತ್ತಿದೆ. ಕಾರ್ಖಾನೆಯ ಕಬ್ಬು ಕಟಾವು ಸಾಗಣಿಕೆ ನೀತಿಯಿಂದ ಕಬ್ಬು ಬೆಳೆಗಾರರು ಸಾಲಗಾರರಾಗುತ್ತಿದ್ದಾರೆ. ಕಬ್ಬು ಬೆಳೆಯಿಂದ ಕಾರ್ಖಾನೆ ಲಾಭ ಮಾಡಿಕೊಳ್ಳುತ್ತಿದೆಯೇ ಹೊರತು ರೈತರು ಮಾತ್ರ ಸಾಲಗಾರರಾಗುತ್ತಿದ್ದಾರೆ. ಕಬ್ಬು ಕಟಾವು ಮತ್ತು ಸಾಗಣಿಕೆ ಜವಾಬ್ದಾರಿಯನ್ನು ಕಾರ್ಖಾನೆಯೇ ಹೊತ್ತುಕೊಳ್ಳಬೇಕೆಂದು ರೈತಸಂಘ ಮನವಿ ಮಾಡುತ್ತಿದ್ದರೂ ಈ ಕುರಿತು ತಾಲ್ಲೂಕು ಆಡಳಿತ ರೈತರು ಮತ್ತು ಕಾರ್ಖಾನೆಯ ಆಡಳಿತ ಮಂಡಳಿಯ ಮುಖಾಮುಖಿ ಸಭೆ ಕರೆಯುತ್ತಿಲ್ಲ. ತಾಲ್ಲೂಕು ಆಡಳಿತ ಕಬ್ಬು ಬೆಳೆಗಾರರ ರೈತರ ಹಿತಾಸಕ್ತಿಯ ದೃಷ್ಟಿಯಿಂದ ತಕ್ಷಣವೇ ಕಾರ್ಖಾನೆ ಮತ್ತು ರೈತರ ಸಭೆ ಕರೆಯುವಂತೆ ಪುಟ್ಟೇಗೌಡ ಆಗ್ರಹಿಸಿದರು.

## ಎಸ್‌ಟಿ ಕಲ್ಯಾಣ ಇಲಾಖೆಗೆ ಸಚಿವರ ನೇಮಿಸಲು ಆಗ್ರಹ

• **ಉದಯವಾಹಿನಿ, ಕೋಲಾರ**

ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆಗೆ ಕೂಡಲೇ ಸಚಿವರನ್ನು ನೇಮಕ ಮಾಡಿ ಮುಂದಿನ ವಾಲ್ಮೀಕಿ ಜಯಂತಿಯನ್ನು ಅವರ ಅಧ್ಯಕ್ಷತೆಯಲ್ಲಿಯೇ ನಡೆಸುವಂತೆ ಒತ್ತಾಯಿಸಿ ಸೆ.10 ರಂದು ಬೆಂಗಳೂರಿನ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲಾಗುತ್ತದೆ ಎಂದು ಜಿಲ್ಲಾ ವಾಲ್ಮೀಕಿ ಸಂಘದ ಅಧ್ಯಕ್ಷ ಕೋಟೆ ಶ್ರೀನಿವಾಸ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಸುಮಾರು ಎಂಟು ತಿಂಗಳ ಹಿಂದೆ ಸಚಿವರಾಗಿದ್ದ ಬಿ.ನಾಗೇಂದ್ರ ಅವರನ್ನು ಕುತಂತ್ರದಿಂದ ಇ.ಡಿ ದಾಳಿಯಲ್ಲಿ ಸಿಲುಕಿಸಿ ಕೆಳಗಿಳಿಸಲಾಯಿತು.

ಅಂದಿನಿಂದಲೂ ಸಚಿವರ ಸ್ಥಾನವು ಖಾಲಿಯಿದೆ. ಸಾಕಷ್ಟು ಬಾರಿ ಸಮುದಾಯದ ಮುಖಂಡರು



ಒತ್ತಾಯ ಮಾಡಲಾಗಿದೆ ಎಂದರು. ರಾಜ್ಯದ ಎಸ್‌ಟಿ ಮೀಸಲಿನ 14 ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದವರು ಗೆದ್ದಿದ್ದು, ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರವನ್ನು ವಾಲ್ಮೀಕಿ ಸಮುದಾಯವು ವಹಿಸಿದೆ ಎಂಬುದನ್ನು ಮರೆಯಬಾರದು ಎಂದು ಎಚ್ಚರಿಕೆ ನೀಡಿದರು. ಬೆಂಗಳೂರಿನ ಯಾವುದಾದರೂ ಒಂದು ಮೆಟ್ರೋ ರೈಲು ನಿಲ್ದಾಣಕ್ಕೆ ವಾಲ್ಮೀಕಿ ಹೆಸರು ನಾಮಕರಣ ಮಾಡಬೇಕು. ಬೆಂಗಳೂರು ಹೃದಯ ಭಾಗದಲ್ಲಿ ಬೃಹತ್ ಪ್ರತಿಮೆ ನಿರ್ಮಾಣ ಮಾಡಬೇಕು. ಜನಸಂಖ್ಯೆಗೆ ಅನುಗುಣವಾಗಿ ವಾಲ್ಮೀಕಿ ಸಮುದಾಯಕ್ಕೆ ಅನುದಾನ ಹಂಚಿಕೆ ಮಾಡಬೇಕು.

ಇಲ್ಲದೇ ಹೋದರೆ ವಾಲ್ಮೀಕಿ ಜಯಂತಿಯನ್ನು ಬಹಿಷ್ಕಾರ ಮಾಡಲಾಗುತ್ತದೆ ಎಂದದರು. ವಾಲ್ಮೀಕಿ ಮಹಿಳಾ ಒಕ್ಕೂಟದ ರಾಜ್ಯ ಅಧ್ಯಕ್ಷೆ ಮಂಜುಳಾ ಶ್ರೀನಿವಾಸ್ ಮಾತನಾಡಿದರು. ವಾಲ್ಮೀಕಿ ಸಮುದಾಯದ ಮುಖಂಡರಾದ ಕೋಟೆ ನಾಗರಾಜ್, ಹನುಮಂತಪ್ಪ, ಸಂತೋಷ್, ನರಸಿಂಹ, ಶ್ರೀನಿವಾಸ್ ಇದ್ದರು.

## 2200ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ

• **ಉದಯವಾಹಿನಿ, ಚಾಮರಾಜನಗರ**

ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110ನೇ ಜಯಂತಿ ಅಂಗವಾಗಿ ನಗರದ ಅನುಭವ ಮಂಟಪದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ನಡೆಯಿತು.ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಸಂಸ್ಥೆ ಹಾಗೂ ಕಿದ್ವಾಯಿ ಸ್ಮಾರಕ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ 2200ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. 61 ಮಂದಿ ರಕ್ತದಾನ ಮಾಡಿದರು.

ಹರವೆ ಮಠದ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಅಂಗವಾಗಿ ಆರೋಗ್ಯ ತಪಸಣೆ ಮತ್ತು ರಕ್ತದಾನ



ಶಿಬಿರ ಆಯೋಜಿಸಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ.

ಶಿವರಾತ್ರಿ ರಾಜೇಂದ್ರ ಶ್ರೀಗಳು ಬದುಕನ್ನೇ ಬಡವರ ಶಿಕ್ಷಣಕ್ಕಾಗಿ ಮುಡಿಪಾಗಿಟ್ಟಿದ್ದರು. ಅವರ ಆಶಯದಂತೆ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ ಎಂದರು.

## ಯುವ ಪೀಳಿಗೆಯಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ

• **ಉದಯವಾಹಿನಿ, ಸಂತೇಮರಹಳ್ಳಿ**

ಯುವಕರು ದುಶ್ಚಟಗಳಿಂದ ದೂರವಿದ್ದು, ಆರೋಗ್ಯವಂತ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದು ಸಮುದಾಯ ಆರೋಗ್ಯ ಕೇಂದ್ರದ ಆಪ್ತ ಸಮಾಲೋಚಕ ಮಂಜುನಾಥ್ ತಿಳಿಸಿದರು. ಸಮೀಪದ ಹೆಗ್ಗವಾಡಿಪುರ ಗ್ರಾಮದಲ್ಲಿ ಮನೋನಿಧಿ ನರ್ಸಿಂಗ್ ಕಾಲೇಜು ವತಿಯಿಂದ ಈಚೆಗೆ ಹಮ್ಮಿಕೊಂಡಿದ್ದ ಸಮುದಾಯ ಆರೋಗ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಧೂಮಪಾನ ಮತ್ತು ತಂಬಾಕು ಸೇವನೆ ಮಾಡಿದಾಗ ದೇಹದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇಂದಿನ ಯುವ ಪೀಳಿಗೆ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಲು ದುಶ್ಚಟಗಳಿಂದ ದೂರ ಇರಬೇಕು. ಮಾದಕ ವಸ್ತುಗಳನ್ನು ಸೇವಿಸಿದಾಗ ವ್ಯಕ್ತಿಗಳು ಸಮಾಜಕ್ಕೆ ಕಂಟಕವಾಗಿ ಬದುಕುತ್ತಾರೆ. ಜತೆಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತೊಂದರೆಗೆ ಒಳಗಾಗಬೇಕಾಗುತ್ತದೆ ಎಂದರು. ಬೀದಿಬದಿ ಆಹಾರ ಪದಾರ್ಥಗಳನ್ನು ಸೇವನೆ ಮಾಡಿದಾಗ ದೇಹವು ಹದಗೆಡುತ್ತದೆ. ಬೀದಿಯಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥಗಳಿಗೆ ರುಚಿ ಸಿಗುವ ರಸಾಯನಿಕ ಮಿಶ್ರಣ ಮಾಡಿ ಮಾರಾಟ ಮಾಡುತ್ತಾರೆ. ಬೀದಿಯಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥಗಳನ್ನು ಸೇವಿಸಿದಾಗ ರಕ್ತಹೀನತೆ, ಅನೀಮಿಯಾ ಉಂಟಾಗಿ ಹಿಮೋಗ್ಲೋಬಿನ್ ಅಂಶ ಕಡಿಮೆಯಾಗುತ್ತದೆ. ಹೀಗಾಗಿ ಮನೆಯಲ್ಲಿಯೇ ತಯಾರು ಮಾಡುವ ಆಹಾರ ಪದಾರ್ಥಗಳನ್ನು ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಮತಾ ಮಾತನಾಡಿ, ವಾಸ ಮಾಡುವ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡಿಕೊಂಡಾಗ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಭಿವೃದ್ಧಿಯಲ್ಲಿ ಮುಂದೆ ಸಾಗುತ್ತಿರುವ ಪ್ರಸ್ತುತದಲ್ಲಿ ನಾಗರಿಕತೆ ಕಡೆಗೆ ಗಮನ ಹರಿಸಬೇಕು.

## ಹೈಕೋರ್ಟ್‌ಗೆ ಅರ್ಜಿ; ಬಲಗೈ ಸಮುದಾಯ ಮುಖಂಡರ ನಿರ್ಣಯ

### ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅವಕಾಶ ವಂಚಿತವಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದರು


• **ಉದಯವಾಹಿನಿ, ಮೈಸೂರು**

ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪರಿಹಾರಾತ್ಮಕ ಅರ್ಜಿ ಸಲ್ಲಿಸಬೇಕು' ಎಂಬ ನಿರ್ಣಯವನ್ನು ಮುಖಂಡರು ಕೈಗೊಂಡರು.

ನಗರದ ಸರ್ಕಾರಿ ಅತಿಥಿಗೃಹದಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ, ಒಳಮೀಸಲಾತಿ ಒಂದು ಕುತಂತ್ರ ಮತ್ತು ಬಲಗೈ ಸಮುದಾಯದ ಸಾಂವಿಧಾನಿಕ ಹಕ್ಕು ಭಾದ್ಯತೆಗಳ ರಕ್ಷಣೆ' ಕುರಿತು ಚರ್ಚಿಸಿದ ನಂತರ ರಾಜ್ಯ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್ ಅವರು ಸಭೆಯ 9 ಅಂಶಗಳ ನಿರ್ಣಯವನ್ನು ಮಂಡಿಸಿದರು.

'ಮೀಸಲಿನಲ್ಲಿ ಬಲಗೈ ಸಮುದಾಯವನ್ನು ಪ್ರವರ್ಗ 'ಬಿ'ಗೆ ಸೇರಿಸಿರುವುದರಿಂದ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅವಕಾಶ ವಂಚಿತವಾಗಲಿದೆ' ಎಂದು ಕಳವಳ ವ್ಯಕ್ತಪಡಿಸಿದರು. 2026-27ನೇ ಸಾಲಿನಲ್ಲಿ ನಡೆಯುವ ಜಾತಿಗಣತಿಯಲ್ಲಿ ಬಲಗೈ ಸಮುದಾಯವು ಒಂದೇ ಜಾತಿ ಸೂಚಕ ಪದ ನಮೂದಿಸಬೇಕು. ನ್ಯಾ.ನಾಗಮೋಹನ ದಾಸ್ ವರದಿಯ ಲೋಪದೋಷಗಳ ಸರ್ಕಾರಕ್ಕೆ ಗಮನಕ್ಕೆ ತರಬೇಕು' ಎಂದರು.

ಹಿಂದುಳಿದ ವರ್ಗದ ಶಾಶ್ವತ ಆಯೋಗ ನಡೆಸುವ ಸಾಮಾಜಿಕ



ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬಲಗೈ ಸಮುದಾಯಗಳ ಸಮೀಕ್ಷೆಯನ್ನೂ ಕೈಗೊಳ್ಳಲು ಗೃಹ ಸಚಿವ ಡಾ.ಜಿ.ಪರಮೇಶ್ವರ ನೇತೃತ್ವದಲ್ಲಿ ರಾಜ್ಯ ಸಮಿತಿ ರಚಿಸಬೇಕು' ಎಂದು ಹೇಳಿದರು.

ಬೆಂಗಳೂರು, ಪಾಲಿಕೆಗಳಿರುವ ನಗರ ಪ್ರದೇಶದಲ್ಲಿ ಸಮರ್ಪಕ ಸಮೀಕ್ಷೆ ನಡೆಸಲು ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಡಾ.ಜಿ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಒಳಗೊಂಡ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಬೇಕು' ಎಂದು ಒತ್ತಾಯಿಸಿದರು.

'ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಜಾತಿಗಳನ್ನು 101 ಪರಿಶಿಷ್ಟ ಜಾತಿಯಿಂದ ಸಂವಿಧಾನದ 341 (2) ವಿಧಿ ಅಡಿ ಕೈ ಬಿಡುವ ಪ್ರಸ್ತಾವವನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಬೇಕು. 2026ರಲ್ಲಿ ನಡೆಯುವ ಜಾತಿ ಜನಗಣತಿಯಲ್ಲಿ 98 ಜಾತಿಗಳನ್ನು ಪರಿಗಣಿಸುವಂತೆ ಮಾಡಬೇಕು' ಎಂದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಮತ್ತು ಜೈ ಭೀಮ ಸಾಮಾಜಿಕ ಪರಿವರ್ತನಾ ವೇದಿಕೆ ಸಭೆ ಆಯೋಜಿಸಿದ್ದವು.ರಾಜ್ಯ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಪ್ರೊ. ಚಂದ್ರಶೇಖರ ಐಜೂರ್, ಹರಕುಮಾರ್, ಸಿದ್ದಸ್ವಾಮಿ, ಮಹೇಶ್ ಇರಸವಾಡಿ, ಒಳಮೀಸಲಾತಿ ಜಾಗೃತಿ ವೇದಿಕೆ ಸಂಚಾಲಕ ನವೀನ್ ಮುನಿಯ, ನಿವೃತ್ತ ಐಎಎಸ್ ಅಧಿಕಾರಿ ಆರ್.ರಾಜು, ಮೈಸೂರು ವಿ.ವಿ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ, ಮುಖಂಡರಾದ ಹರಿಹರ ಆನಂದಸ್ವಾಮಿ, ಆರ್.ಸಿದ್ದಪ್ಪ, ಪ್ರದೀಪ್ ಚಂದ್ರ, ಅಶ್ವಿನಿ, ಪಲ್ಲವಿ ಬೇಗಂ, ಪಿ.ಎಸ್.ಕೆಂಪರಾಜು, ನೆಲೆ ಹಿನ್ನೆಲೆ ಗೋಪಾಲ್, ಗೋವಿಂದರಾಜು, ವಕೀಲರಾದ ಪುಟ್ಟಸ್ವಾಮಿ, ಉಮೇಶ್, ತಿಮ್ಮಯ್ಯ ಪಾಲ್ಗೊಂಡಿದ್ದರು.

**ಪಟ್ಟಿಗೆ ಹೊಸ ಜಾತಿ ಸೇರ್ಪಡೆ**

**ಉಲ್ಲಂಘನೆ ಲೇಖಕ ಸೂರ್ಯದೇವ್ ಮಾತನಾಡಿ ನಾಗಮೋಹನ್ ದಾಸ್ ವರದಿಯಲ್ಲಿ ಜಾತಿಗಳ ಪಟ್ಟಿಯಲ್ಲಿ 101 ಜಾತಿಗಳ ಜೊತೆ ರಾಯಚೂರಿನ ಮಾದಿಗ ದಾಸರಿ ಅನ್ನೂ ಸೇರಿಸಿದ್ದು 102 ಜಾತಿಯಾಗಿದೆ. ಜಾತಿಗಳನ್ನು ಪಟ್ಟಿಗೆ ಸೇರಿಸಲು ಅವರಿಗೆ ಅಧಿಕಾರವೇ ಇಲ್ಲ. ಸಂವಿಧಾನದ 341(2) ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದರು. ಪರಿಶಿಷ್ಟ ಜಾತಿಗೆ ಕಲ್ಪಿಸಿರುವ ಮೀಸಲಾತಿ ಕಿತ್ತುಕೊಳ್ಳಲು ಆರ್ ಎಸ್‌ಎಸ್ ಒಳಮೀಸಲಾತಿ ಹುನ್ನಾರ ನಡೆಸಿತು. 2015ರಲ್ಲಿ ಮಾದಾರ ಚೆನ್ನಯ್ಯ ಮಠದಲ್ಲಿ ಆರ್ ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ 4 ಜನ ವಾಸ್ತವ್ಯ ಹೂಡಿದ್ದರು. ಇದಾದ ತಿಂಗಳಲ್ಲೇ ಮಾದಿಗ ಹೋರಾಟ ಸಮಿತಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು' ಎಂದರು.**

ಅಂತರಾಳದಿಂದ.. EDITORIAL

# ಬಿಡಿಎಗೆ ಬೇಕು ಹೆಚ್ಚು ಜವಾಬ್ದಾರಿ; ನಿಯಂತ್ರಣದ ವಿನಾಯಿತಿ ಸಲ್ಲದು



ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ-ರೇರಾ) ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವ 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'ದ (ಬಿಡಿಎ) ಬೇಡಿಕೆ ನ್ಯಾಯಸಮ್ಮತವಾದುದಲ್ಲ. ಬಿಡಿಎ ಸಲ್ಲಿಸಿರುವ ಬೇಡಿಕೆ ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಅಪಾಯಕರ ಕೂಡ. ಶಾಸನಬದ್ಧ ಸಂಸ್ಥೆಯಾಗಿರುವ ಹಾಗೂ ರಿಯಲ್ ಎಸ್ಟೇಟ್ ಪ್ರವರ್ತಕ ಸಂಸ್ಥೆ ಆಗದಿರುವ ಕಾರಣದಿಂದಾಗಿ 'ಕೆ-ರೇರಾ' ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವುದು ಬಿಡಿಎ ವಾದ. ಖಾಸಗಿ ಸಂಸ್ಥೆಗಳಂತೆ ಲಾಭಕ್ಕಾಗಿ ಕಾರ್ಯನಿರ್ವಹಿಸದೆ, ಬಡ ಹಾಗೂ ಮಧ್ಯಮವರ್ಗಕ್ಕೆ ತಾನು ಸೇವೆ ಸಲ್ಲಿಸುತ್ತಿರುವುದಾಗಿಯೂ ಬಿಡಿಎ ಹೇಳಿಕೊಂಡಿದೆ. ವಿರೋಧಾಭಾಸದ ಸಂಗತಿಯೆಂದರೆ, ಬಿಡಿಎ ಯಾವೆಲ್ಲ ಕಾರಣಗಳಿಂದಾಗಿ 'ಕೆ-ರೇರಾ' ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎಂದು ವಾದಿಸುತ್ತಿದೆಯೋ, ಅದೇ ಕಾರಣಗಳಿಗಾಗಿ ಅದನ್ನು ನಿಯಂತ್ರಣ ಪ್ರಾಧಿಕಾರದ ವ್ಯಾಪ್ತಿಗೆ ತರಬೇಕಾಗಿದೆ. ಸರ್ಕಾರಿ ಸಂಸ್ಥೆಯಲ್ಲಿ ನಂಬಿಕೆಯಿಟ್ಟು ತಮ್ಮ ಜೀವಮಾನದ ಉಳಿತಾಯವನ್ನು ತೊಡಗಿಸುವವರಿಗೆ ದುರ್ಬಲ ರಕ್ಷಣೆಯ ಬದಲಾಗಿ ಹೆಚ್ಚಿನ ಸುರಕ್ಷತೆಯನ್ನು ಒದಗಿಸುವುದಕ್ಕಾಗಿ ಈ ನಿಯಂತ್ರಣ ಅಗತ್ಯವಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಯಂತ್ರಣ ಯಾಕಾಗಿ ಬೇಕು ಎನ್ನುವುದಕ್ಕೆ ನಿದರ್ಶನವಾಗಿ, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಪಡೆದವರ ಸ್ಥಿತಿಗತಿ ಗಮನಿಸಬಹುದು. 2010ರಲ್ಲಿ ಘೋಷಣೆಗೊಂಡ ಈ ಬಡಾವಣೆಯಲ್ಲಿ, ಆರು ವರ್ಷಗಳ ನಂತರ ನಿವೇಶನಗಳ ಹಂಚಿಕೆ ಆರಂಭಗೊಂಡಿತು.

> **ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಸಾರ್ವಜನಿಕರಿಗೆ ಒದಗಿಸುವ ಭರವಸೆಯನ್ನು ಈಡೇರಿಸಲು ವಿಫಲವಾದಲ್ಲಿ, ಖಾಸಗಿ ಸಂಸ್ಥೆಗಳಿಗೆ ಅನ್ವಯಿಸುವ ನಿಯಮ ನಿಬಂಧನೆಗಳು ಸರ್ಕಾರಿ ಸಂಸ್ಥೆಗೂ ಅನ್ವಯಿಸಬೇಕು. 'ಕೆ-ರೇರಾ' ವ್ಯಾಪ್ತಿಯಿಂದ ತನ್ನನ್ನು ಹೊರಗಿಡಬೇಕು ಎನ್ನುವ ಬಿಡಿಎ ತರ್ಕ ಹೊಣೆಗಾರಿಕೆಯಿಂದ ನುಣುಚಿ ಕೊಳ್ಳುವ ಪ್ರಯತ್ನ ಆಗಿರುವಂತೆಯೇ, ಸಿನಿಕತನದಿಂದಲೂ ಕೂಡಿದೆ. ನಾಗರಿಕ ಸೇವೆ ಸಲ್ಲಿಸುತ್ತಿರುವುದಾಗಿ ಹೇಳಿಕೊಳ್ಳುತ್ತಲೇ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು 'ಕೆ-ರೇರಾ' ವ್ಯಾಪ್ತಿಗೆ ತರುವುದು ಮಾತ್ರವಲ್ಲ, ಇನ್ನೂ ಹೆಚ್ಚಿನ ಉತ್ತರದಾಯಿತ್ವಕ್ಕೆ ಒಳಪಡಿಸಬೇಕಾಗಿದೆ.**

2018ರ ವೇಳೆಗೆ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದೆಂದು ಭರವಸೆ ನೀಡಲಾಗಿತ್ತು. ಆದರೆ, ರಸ್ತೆ, ಒಳಚರಂಡಿ, ನೀರು ಹಾಗೂ ವಿದ್ಯುತ್ ಸಂಪರ್ಕವಿಲ್ಲದೆ ಸಾವಿರಾರು ನಿವೇಶನದಾರರು ಪರಿತಪಿಸುತ್ತಿದ್ದಾರೆ. ಸಾಲ ಮಾಡಿ ನಿವೇಶನ ಕೊಂಡವರು, ಮೂಲ ಸೌಕರ್ಯಗಳಿಲ್ಲದ ಕಾರಣದಿಂದಾಗಿ ಮನೆಯನ್ನು ಕಟ್ಟಲಾರದ ಸ್ಥಿತಿಯಲ್ಲಿದ್ದಾರೆ.

ಸಾಲದ ಕಂತಿನ ಜೊತೆಗೆ ಮನೆ ಬಾಡಿಗೆಯನ್ನೂ ಭರಿಸಬೇಕಾದ ಅನಿವಾರ್ಯ ಅವರದಾಗಿದೆ. ಅವರ ಕನಸಿನ ನಿವೇಶನಗಳು ಕಸವನ್ನು ಭರ್ತಿ ಮಾಡುವ ಸ್ಥಳಗಳಾಗಿ ಬದಲಾಗಿವೆ. ಬಿಡಿಎ ಪದೇಪದೇ ನೀಡುತ್ತಿರುವ ಭರವಸೆ ಹಾಗೂ ಗಡುವುಗಳಿಂದಾಗಿ ನಿವೇಶನದಾರರ ಸಂಕಟ ಉಲ್ಬಣಗೊಳ್ಳುತ್ತಿದೆಯೇ ಹೊರತು, ಯಾವುದೇ ಉಪಯೋಗವಾಗಿಲ್ಲ. ಇಂಥ ಸಂದಿಗ್ಧದ ಸಮಯದಲ್ಲಿ 'ಕೆ' ರೇರಾ' ಇಲ್ಲದೇ ಹೋದರೆ, ಸಂತ್ರಸ್ತರು ತ್ವರಿತ ನ್ಯಾಯಕ್ಕಾಗಿ ಬೇರೇನು ಮಾಡಲು ಸಾಧ್ಯವಿದೆ ನಾಡಪ್ರಭು ಕೆಂಪೇಗೌಡ ಬಡಾವಣೆಯದು ಒಂದು ಉದಾಹರಣೆಯಷ್ಟೇ; ಇಂಥ ಅನೇಕ ಹಗರಣಗಳಲ್ಲಿ ಬಿಡಿಎ ಸಿಲುಕಿಕೊಂಡಿದೆ. ಇಬ್ಬರಿಗೆ ಒಂದೇ ನಿವೇಶನದ ಹಂಚಿಕೆ, ಉದ್ಯಾನ ಹಾಗೂ ಆಟದ ಮೈದಾನಕ್ಕಾಗಿ ಮೀಸಲಿರಿಸಿದ ಜಾಗವನ್ನು ವಾಣಿಜ್ಯ ಸ್ಥಳವಾಗಿ ಪರಿವರ್ತಿಸಿರುವುದು ಸೇರಿದಂತೆ ಬಿಡಿಎ ಮೇಲೆ ಹಲವು ದೂರುಗಳಿವೆ. ಸರ್ಕಾರಿ ಅಧಿಕಾರಿಗಳು ಭೂಗಳ್ಳರೊಂದಿಗೆ ಶಾಮೀಲಾಗಿ, ನಗರದ ಅಮೂಲ್ಯವಾದ ಹಸಿರು ಪ್ರದೇಶಗಳನ್ನು ಕಬಳಿಸುವುದರ ಮೂಲಕ, ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿ ನಷ್ಟ ಉಂಟುಮಾಡಿದ್ದಾರೆ. ಸಾಂದರ್ಭಿಕ ತನಿಖೆಗಳಿಂದ ಅವ್ಯವಹಾರಗಳು ಬಯಲಿಗೆ ಬಂದಿದ್ದರೂ, ವ್ಯವಸ್ಥಿತ ಭ್ರಷ್ಟಾಚಾರ ಪಿಡುಗಿನ ರೂಪದಲ್ಲಿ ಮುಂದುವರಿದೇ ಇದೆ. ಖಾಸಗಿ ನಿರ್ಮಾಣ ಸಂಸ್ಥೆಗಳಿಗಿಂತಲೂ ತನ್ನನ್ನು ಭಿನ್ನ ಎಂದು ಬಿಂಬಿಸಿಕೊಳ್ಳಲು ಹೊರಟಿರುವ ಬಿಡಿಎ ವಾಸ್ತವದಲ್ಲಿ ಕೆಲವು ಖಾಸಗಿ ಸಂಸ್ಥೆಗಳಿಗಿಂತಲೂ ಹೆಚ್ಚು ಕುಖ್ಯಾತವಾಗಿದೆ. 'ಕೆ-ರೇರಾ' ವ್ಯಾಪ್ತಿಯಿಂದ ಬಿಡಿಎಯನ್ನು ಹೊರಗಿಡುವುದೆಂದರೆ, ಅವ್ಯವಸ್ಥೆ ಮತ್ತು ಅವ್ಯವಹಾರಗಳನ್ನು ಮುಂದುವರಿಸುವುದಕ್ಕೆ ಪರವಾನಗಿ ನೀಡುವುದೇ ಆಗಿದೆ. ಉತ್ತರದಾಯಿತ್ವ ಎನ್ನುವುದು ಆಯ್ಕೆಗೆ ಸಂಬಂಧಿಸಿದ್ದಾಗಿರಬಾರದು. ವಿಳಂಬವನ್ನು ತಪ್ಪಿಸುವುದು ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಸೇರಿದಂತೆ, ನಿವೇಶನ ಅಥವಾ ಮನೆಯನ್ನು ಕೊಳ್ಳುವವರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಕೆ-ರೇರಾ ಸ್ಥಾಪಿಸಲಾಗಿದೆ. ಹಿತಾಸಕ್ತಿ ರಕ್ಷಣೆಗೆ ಸಂಬಂಧಿಸಿದಂತೆ ಖಾಸಗಿ ಅಥವಾ ಶಾಸನಬದ್ಧ ಸಂಸ್ಥೆ ಎನ್ನುವ ವ್ಯತ್ಯಾಸವೇನೂ ಇರುವುದಿಲ್ಲ.



# ಪಿತೃಪಕ್ಷ ಮಹಾಲಯ

ವಿಶ್ವಾಸ್.ಡಿ.ಗೌಡ
ಉದಯವಾಹಿನಿ, ವಿಶೇಷ

ಮರಣಾನಂತರ ಜೀವಿಗೆ ತನ್ನ ಕರ್ಮಾನುಸಾರ ಸ್ವರ್ಗವೋ, ನರಕವೋ ಪ್ರಾಪ್ತಿ. ಸ್ವರ್ಗವಾದರೆ ಮೋಕ್ಷ, ಅಮರತ್ವ. ಪುನರ್ಜನ್ಮವಿಲ್ಲವೆಂದು ನಂಬಿಕೆ.

ಅವರಿಗೆ ಶ್ರಾದ್ಧಕರ್ಮಗಳಲ್ಲಿನ ತರ್ಪಣಗಳು ಏಕೆ ಬೇಕು? ನರಕವಾದರೆ ಪಾಪದ ಫಲ ಅನುಭವಿಸಿದ ನಂತರ ಪುನರ್ಜನ್ಮ. ಯಾವುದೋ ರೂಪದಲ್ಲಿ ಬೇರೆಯಲ್ಲಿಯೋ ಜನ್ಮ ಪಡೆದ ಪಿತೃಗಳಿಗೆ ನಾವು ಪಿಂಡಪ್ರದಾನ ಮಾಡುವುದರ ಅವಶ್ಯಕತೆಯೇನು? ದೇಹತ್ಯಾಗದ ನಂತರ ಆತ್ಮ ಪರಮಾತ್ಮನಲ್ಲಿ ಐಕ್ಯವಾದ ಮೇಲೆ ಜೀವಿಯ ಆತ್ಮಕ್ಕೆ ಪ್ರತ್ಯೇಕ ಅಸ್ತಿತ್ವವೆಲ್ಲಿದೆ? ಹೀಗಾಗಿ ಇಲ್ಲಿಯೂ ಶ್ರಾದ್ಧದ ಪ್ರಮೇಯವೇನು?

ಸಾಮಾನ್ಯವಾಗಿ ವೈದಿಕ ಸಮಾಜದಲ್ಲಿ ಆಸಕ್ತರಿಗೆ ಪಿತೃಶ್ರಾದ್ಧಾದಿ ಕಾರ್ಯ ಒಂದು ಕರ್ತವ್ಯವೆಂತಲೂ, ಅದನ್ನು ಶ್ರದ್ಧೆಯಿಂದ ಮಾಡಬೇಕೆಂತಲೂ ನಂಬಿಕೆಯಿದೆ. ಇದು ಸಾರ್ಥಕ ನಂಬಿಕೆ. ತಲತಲಾಂತರದಿಂದ ಆಚರಿಸಿಕೊಂಡು ಬರುತ್ತಿದ್ದಾರೆ ಆಸ್ತಿಕ ಜನರು. ಆದರೆ ಆಚರಣೆಗಳನ್ನು ನೋಡಿ ಹೀಗೆಳೆಯುವ, ನಿಂದೆ ಮಾಡುವ ವರ್ಗವೂ ಇದೆ. ಇದೇಕೆ ಮಾಡಬೇಕು ಇದರಿಂದೇನು ಉಪಯೋಗ ಎಂದು ಹಾಸ್ಯ ಮಾಡುವ ಜನರಿಗೂ ಕೊರತೆ ಇಲ್ಲ. ಅವರಿಗೆ ಉತ್ತರಿಸುವ ಉದ್ದೇಶವೂ ನನ್ನದಲ್ಲ. ಆಸ್ತಿಕರಾದ ಜನರಿಗೆ ಅವರ ಪಿತೃಭಕ್ತಿಯ ಜೊತೆಯಲ್ಲಿ ಶ್ರದ್ಧೆ ಹೆಚ್ಚಾಗಲಿ ಎನ್ನುವ ಉದ್ದೇಶದಿಂದ ಶ್ರಾದ್ಧ ಸಾಫಲ್ಯತೆಯ ಕುರಿತು ಈ ಎರಡು ಮಾತನ್ನು ಬರೆಯುತ್ತಿದ್ದೇನೆ. ಇದನ್ನು ಓದಿದ ಪಿತೃಭಕ್ತಿ ಪರಾಯಣರಾದ ಶ್ರದ್ಧಾಳುಗಳು ಇನ್ನೂ ಹೆಚ್ಚಿನ ಶ್ರದ್ಧೆಯಿಂದ ತಮ್ಮ ತಂದೆತಾಯಿಯರ ಮೃತತಿಥ ಅಥವಾ ಪುಣ್ಯತಿಥಿ ಆಚರಿಸೋಣ.

**ಪಿತೃಶ್ರಾದ್ಧದ ಮುಖ್ಯ ಉದ್ದೇಶವೇನು?:** ಇಲ್ಲಿ ಪಿತೃವೆಂದರೆ ಯಾರು? ಯಾವುದು? ಅದೇಕೆ ಗೌರವಾನ್ವಿತ ಹಾಗೂ ಪೂಜನೀಯವಾಯ್ತು? ಅದು ವ್ಯಕ್ತಿಯೇ? ದೇಹವೇ? ಶಕ್ತಿಯೇ? ತತ್ವವೇ? ಚಿಂತಿಸೋಣ. ಸಾಮಾನ್ಯವಾಗಿ ಸೂತ್ರಕಾರರ ಅಭಿಮತದಂತೆ ಪಿತೃ ಎಂಬುದು ಒಂದು ಸ್ಥಾನ, ಹುದ್ದೆ. ಅದಕ್ಕೆ ಅದರದ್ದೇ ಆದ ಜವಾಬ್ದಾರಿ, ಬದ್ಧತೆ ಇರುತ್ತದೆ. ಅದನ್ನು ಹುಟ್ಟಿದ ಪ್ರತಿಯೊಂದು ಜೀವಿಯೂ ಹೊಂದಲೇ ಬೇಕಾದ ಹುದ್ದೆ. ಅದನ್ನು ಪಡೆಯಲು, ಜವಾಬ್ದಾರಿಯುತವಾಗಿ ನಿರ್ವಹಿಸಲು ಅಸಮಾನ್ಯ ಜ್ಞಾನವು ಬೇಕು.




ಆ ಜ್ಞಾನವು ಅನುಭವದಿಂದ ಮಾತ್ರ ಪ್ರಾಪ್ತವಾಗುವಂತಹದ್ದು. ಕಲಿಕೆಯಿಂದ ಬರುವಂತಹದ್ದಲ್ಲ. ಅಂತಹಾ ಹುದ್ದೆಯನ್ನು ಅಲಂಕರಿಸಿದ್ದಾರೆ ನಮ್ಮ ಭೌತಿಕ ವ್ಯಾವಹಾರಿಕ ಪ್ರಪಂಚದ ಪಿತೃಗಳು. ಅಂದರೆ ಭಾವನಾತ್ಮಕ ತಂದೆಯೆಂದು ಅರ್ಥ. ವ್ಯಕ್ತಿಗತವಾಗಿ ಆ ಸ್ಥಾನವನ್ನು ಸಮರ್ಥವಾಗಿ ಅವರು ನಿರ್ವಹಿಸಿದ್ದಾರೆ ಎಂದು ಹೇಳುವ ಅರ್ಹತಾ ಪತ್ರವೇ ನಾವು. ಹಾಗಿದ್ದಾಗ ಅವರ ನಿರ್ವಹಣೆಯಲ್ಲಿ ಅನರ್ಹರು ಎಂದರೆ ನಾವು ಅನರ್ಹರು ಎಂದೇ ಅರ್ಥ. ಇನ್ನು ಮೃತಾನಂತರ ಪುನರ್ಜನ್ಮ. ಅವರಿಗೇಕೆ ತರ್ಪಣ ಪಿಂಡಪ್ರಧಾನ ಎಂಬ ಪ್ರಶ್ನೆಗಳಿವೆ. ಜನರೇ, ಈ ದೃಷ್ಟಿಯಿಂದ ಚಿಂತಿಸಬೇಕು ತಂದೆಯು ಮೃತನಾಗುವುದಿಲ್ಲ, ದೇಹ ಮಾತ್ರ ನಾಶವಾಗಿದೆ. ತಂದೆಯು ಪುನರ್ಜನ್ಮ ಪಡೆದಿಲ್ಲ, ಆತ್ಮವು ಮಾತ್ರ ಪಡೆದಿದೆ. ತಂದೆ ಎಂಬ ಸ್ಥಾನ ಅಸ್ತಿತ್ವ ಕಳೆದುಕೊಳ್ಳುವುದಿಲ್ಲ, ತಂದೆಯಾಗಿಯೇ ಉಳಿದಿರುತ್ತಾರೆ. ಆತ್ಮವು ಮಾತ್ರ ಪುನರ್ಜನ್ಮ ಪಡೆದು ಹುಟ್ಟಿಬರಬಹುದು. ಆದರೆ ಅದು ಪ್ರಾಣಿಯಾಗಿ ಹುಟ್ಟಿತು ಎಂದು ಯಾರೂ ಪ್ರಸಕ್ತಕಾಲದ ವಿಳಾಸ ಹೇಳುವಾಗ ತನ್ನ ತಂದೆಯು ಪ್ರಾಣಿಯಾಗಿ ಪುನರ್ಜನ್ಮ ಪಡೆದಿದ್ದಾರೆ ಎಂದು ಗೊತ್ತಿದ್ದರೂ ತಾನು ಪ್ರಾಣಿಯ ಮಗನೆಂದು ತನ್ನ ಹೆಸರಿನ ಮುಂದೆ ಸೇರಿಸಿಕೊಳ್ಳುವುದಿಲ್ಲ. ಪುನರ್ಜನ್ಮ ಸಿಕ್ಕಿದೆಯೋ, ಬಿಟ್ಟಿದೆಯೇ ಅದು ಬೇರೆಯ ವಿಚಾರ. ಈ ಶ್ರಾದ್ಧವನ್ನು ಮಾಡಬೇಕಾದ ಮಗನು ಬದುಕಿರುವವರೆಗೆ, ತಂದೆ ಎಂಬ ಭಾವನಾತ್ಮಕ ಅಸ್ತಿತ್ವವು ಪುನರ್ಜನ್ಮ ಪಡೆಯುವುದಿಲ್ಲ. ಆ ಪಟ್ಟ ಈ ಮಗನಿಗೆ ಸಿಗದೇ ಇರಬಹುದು. ಅಲ್ಲಿಂದ ಮುಂದೆ ಹುಟ್ಟಿದ ಆ ಮಗನಿಂದ ಶ್ರಾದ್ಧವಿಲ್ಲ, ಬೇಕಿಲ್ಲ. ಆದರೆ ತಂದೆಯ ಸ್ಥಾನ ನಿರ್ವಹಿಸಿದ ಈ ಬ್ರಹ್ಮಚಾರೀ ಮಗನನ್ನಾದರೂ ಈ ಭೂಮಿಗೆ ಕೊಟ್ಟ ತಂದೆಯು ತನ್ನ ಸ್ಥಾನ ನಿರ್ವಹಣೆ ಮಾಡಿದ್ದಾರೆ. ಅಲ್ಲಿಯವರೆಗೆ ಶ್ರಾದ್ಧ ಸಾಧುವೇ, ಸತ್ಯವೇ, ನ್ಯಾಯವೇ ಆಗಿರುತ್ತದೆ. ಅದು ಈ ಮಗನ ಅಸ್ತಿತ್ವವನ್ನು ಉಳಿಸಿಕೊಡುತ್ತದೆ ನೆನಪಿರಲಿ. ಇಲ್ಲಿಯವರೆಗೆ ಪಿತೃಸ್ಥಾನ ಮತ್ತು ಮಗನ ಕರ್ತವ್ಯ ನಿರ್ವಹಣೆ. ಪ್ರತೀ ಜೀವಿಯೂ ಒಂದೊ ತಂದೆಯಾಗಿ ಅಥವಾ ತಾಯಿಯಾಗಿ ಸಾಫಲ್ಯತೆ ಕಾಣುವ ನಮ್ಮ ಆಧ್ಯಾತ್ಮಿಕ, ದೈವೀಕ ನೆಲೆಗಟ್ಟಿನ ಸಮಾಜ ಜೀವನದ ಪರಮೋನ್ನತ ಪದವಿ ತಂದೆ-ಯಾ- ತಾಯಿ. ಈ ಪದವಿಗಾಗಿ ಪ್ರತೀಜೀವಿಯೂ ಹಾರೈಸುತ್ತದೆ. ಅಂತಹಾ ಪದವಿ ಆಕಾಂಕ್ಷೆಯಾದ ಪ್ರತೀಜೀವಿಯೂ ಆ ಸ್ಥಾನವನ್ನು ಶ್ರದ್ಧೆಯಿಂದ ಗೌರವಿಸಿದರೆ ನಿಸ್ತಂತುವಾಗಿ ವಂಶ ಬೆಳೆಯುತ್ತದೆ. ಇಲ್ಲವಾದರೆ ಮುಂದೆ ಸಂತಾನ ಲಭ್ಯವಿಲ್ಲದೆ ವಂಶ ನಿಂತು ಹೋಗಬಹುದು. ಆದ್ದರಿಂದ ಶ್ರಾದ್ಧ, ತರ್ಪಣ, ಪ್ರತಿಯೊಬ್ಬರ ಮುಖ್ಯ ಕರ್ತವ್ಯ. ಅದು ಆ ಸ್ಥಾನವನ್ನು ಗೌರವಿಸಿದಂತೆ. ಕಚ್ಚಾಡುವ ಮನೆ, ಕಾದಾಡುವ ಮಕ್ಕಳು, ಅಶಾಂತಿ-ಅತೃಪ್ತಿಯ ಗೃಹವಾಸ, ಇವೆಲ್ಲವುಗಳಿಗೆ ಕಾರಣ ಪಿತೃಶಾಪ ಎನ್ನುತ್ತದೆ ಜ್ಯೋತಿಃಶಾಸ್ತ್ರ. ಪಿತೃಕಾರ್ಯಗಳು ಸರಿಯಾಗಿ ನಡೆಯದಿದ್ದರೆ ಮೇಲ್ಕಂಡ ಸ್ಥಿತಿ ಏರ್ಪಡುತ್ತದೆ ಎಂದರ್ಥ. ಸಂವತ್ಸರ ಪೂರ್ತಿ ಪಿತೃದೇವತೆಗಳು ಸಂತುಷ್ಟರಾಗಿರಬೇಕಾದರೆ ಭಾದ್ರಪದಮಾಸದ ಕೃಷ್ಣಪಕ್ಷದಲ್ಲಿ ಪಿತೃಗಳನ್ನು ಎಲ್ಲಾರೂ ನೆನೆಯಬೇಕು .

> **ಅಂತಹಾ ಪಿತೃಸ್ಥಾನ ಪಟ್ಟವು ಪ್ರತಿಯೊಬ್ಬ ಜೀವಿಯೂ ಬಯಸಿ ಪಡೆಯುವ ಪಟ್ಟ. ಅದರ ಮಹತ್ವವೆಷ್ಟಿರಬಹುದು ಚಿಂತಿಸಿ? ಅದನ್ನು ಪಡೆದು ನಿರ್ವಹಿಸಿ, ಯಶಸ್ವಿಯಾಗಿ ನಮ್ಮನ್ನು ಈ ಲೋಕಕ್ಕೆ, ಸಮಾಜಕ್ಕೆ ಕೊಟ್ಟು ತಾವು ತೇರ್ಗಡೆಯಾಗಿ ವಿರಮಿಸಿದ ತಂದೆತಾಯಿಯ ಸ್ಥಾನ ಪೂಜಾರ್ಹವಲ್ಲವೇ ಚಿಂತಿಸಿ? ಅಂತಹಾ ಸ್ಥಾನವನ್ನು ಗೌರವಿಸುವುದು ಧರ್ಮವಲ್ಲವೇ? ಇದು ಶ್ರಾದ್ಧದ ಹಿನ್ನಲೆಯಲ್ಲಿರುವ ಮಾನವೀಯ ಧರ್ಮ.**



# ಇತರ ಗಣೇಶೋತ್ಸವಗಳಿಗೆ ಭದ್ರತೆ ಒದಗಿಸಿ!

ಶ್ರೀ. ಮೋಹನ ಗೌಡ,



ಭಾನುವಾರ ರಾತ್ರಿ ಚೆನ್ನೇಗೌಡ ಬಡಾವಣೆಯ ನಿವಾಸಿಗಳ ಗಣೇಶೋತ್ಸವ ಮೆರವಣಿಗೆಯು ಮಸೀದಿ ಬಳಿ ಬಂದಾಗ ಏಕಾಏಕಿ ಲೈಟ್ ಆಫ್ ಮಾಡಿ ಗಣಪತಿ ಮೆರವಣಿಗೆ ಮೇಲೆ ಮಸೀದಿಯಿಂದ ಕಲ್ಲು ತೂರಾಟ ಮಾಡಲಾಗಿದೆ. ಮತಾಂಧರ ಈ ನಡೆಯನ್ನು ನೋಡಿದಾಗ ಈ ದಾಳಿ ಸಂಪೂರ್ಣ ಪೂರ್ವ ನಿಯೋಜಿತವಾಗಿದ್ದು ಗಲಭೆ ಸೃಷ್ಟಿಸಲೆಂದೇ ಈ ಷಡ್ಯಂತ್ರವನ್ನು ರೂಪಿಸಿದ್ದಾರೆ. ಈ ಘಟನೆಯನ್ನು ಹಿಂದೂ ಜನಜಾಗೃತಿ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಕಳೆದ ವರ್ಷ ನಾಗಮಂಗಲದಲ್ಲಿ ಗಣೇಶೋತ್ಸವ ಮೆರವಣಿಗೆ ವೇಳೆ ಸಂಭವಿಸಿದ್ದ ಗಲಭೆಯಲ್ಲಿ ಕಲ್ಲು ತೂರಾಟ ಪೆಟ್ರೋಲ್ ಬಾಂಬ್ ಗಳನ್ನು ಹಿಂದೂ ಅಂಗಡಿಗಳ ಮೇಲೆ ಹಾಕಿ ಕೋಟ್ಯಾಂತರ ರೂಪಾಯಿ ನಷ್ಟ ಮಾಡಿರುವ ಕಹಿ ಘಟನೆಯ ನೆನಪುಗಳು ಇರುವಾಗಲೇ ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಎಲ್ಲಾ ಗಣೇಶ ಮಂಡಳಿಯು ಸುರಕ್ಷತಾ ಭದ್ರತೆಯನ್ನು ಒದಗಿಸಲು ಮನವಿ ಮಾಡಿದ ನಂತರವೂ ಹಿಂದೂ ಗಣೇಶೋತ್ಸವದ ಮೆರವಣಿಗೆಯ ಮೇಲೆ ಮಾರಣಾಂತಿಕ ಆಕ್ರಮಣವಾಗಿರುವುದು ಅತ್ಯಂತ ಖಂಡನೀಯವಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಏನಾಗಿದೆ ಸಾರ್ವಜನಿಕ ಗಣೇಶೋತ್ಸವ, ನವರಾತ್ರಿ, ರಾಮನವಮಿ, ಹನುಮಾನ್ ಜಯಂತಿ ಪ್ರತಿಯೊಂದು ಮೆರವಣಿಗೆ ಮೇಲೆಯೂ ಕಲ್ಲು ತೂರಾಟ ಆಗುತ್ತಿದೆ. ಇದರಿಂದ ಗಮನಕ್ಕೆ ಬರುವುದೇನೆಂದರೆ ಅಲ್ಪಸಂಖ್ಯಾತರ ಓಲೈಕೆ ನೀತಿಯಿಂದಾಗಿ ಬಹು ಸಂಖ್ಯಾತ ಹಿಂದೂಗಳ ಮೇಲೆ ಮಾರಣಾಂತಿಕ ಅಕ್ರಮಗಳಾಗುತ್ತಿದೆ. ಆದುದರಿಂದ ರಾಜ್ಯ ಸರ್ಕಾರವು ಈ ಕೃತ್ಯಕ್ಕೆ ಕಾರಣಕರ್ತರಾದವರ ಮೇಲೆ ಕೂಡಲೇ ಕ್ರಮಕ್ಕೆಗೊಳ್ಳಬೇಕು ಮತ್ತು ರಾಜ್ಯಾದ್ಯಂತ ಇನ್ನೂ ಅನೇಕ ಜಿಲ್ಲೆಗಳಲ್ಲಿ ಗಣೇಶ ವಿಸರ್ಜನೆ ಬಾಕಿ ಇದ್ದು ಎಲ್ಲಾ ಜಿಲ್ಲೆಗಳಲ್ಲಿ ಪೊಲೀಸ್ ಇಲಾಖೆ ಇಂತಹ ಘಟನೆಗಳು ನಡೆಯದಂತೆ ಕಟ್ಟೆಚ್ಚರವಹಿಸಬೇಕೆಂದು ಸಮಿತಿಯು ಆಗ್ರಹಿಸುತ್ತದೆ.

# ಹೋಮ್ ಅಡುಗೆಮನೆ ಬಾಯಲ್ಲಿ ಇಟ್ಟರೆ ಕರಗುವ ತೆಂಗಿನಕಾಯಿ ಪೂರಿ..!

ನೀವು ಬೆಳಗ್ಗೆ ತಿಂಡಿಯ ಸಮಯಕ್ಕೆ ಯಾವುದಾದರು ವಿಶೇಷವಾದ ಹಾಗೆ ಅಪರೂಪಕ್ಕೆ ಮಾಡುವಂತಹ ಹಬ್ಬದ ವಾತಾವರಣ ಸೃಷ್ಟಿಸುವಂತಹ ತಿಂಡಿಯನ್ನು ಮಾಡಿ ಸವಿಯಲು ಇಷ್ಟಪಡುವ ಮಂದಿ ಆಗಿರಬಹುದು. ಆದ್ರೆ ನಿತ್ಯ ಒಂದೇ ರೀತಿ ತಿಂಡಿಗಳು, ಒಂದೇ ರುಚಿಯ ತಿಂಡಿಗಳು ಅಂದ್ರೆ ಕೂಡ ಯಾರಿಗೂ ಇಷ್ಟವಾಗೋದಿಲ್ಲ. ಆದ್ರೆ ನಾವಿಂದು ಸುಲಭವಾಗಿ ಹಾಗೆ ವಿಶೇಷ ರುಚಿಯ ತಿಂಡಿ ಮಾಡಿ ಸವಿಯುವ ಕುರಿತು ತಿಳಿದುಕೊಳ್ಳೋಣ.

ಅದ್ರಲ್ಲೂ ಪೂರಿ ಮಾಡಿ ಸವಿಯೋದು ಅಂದ್ರೆ ಎಲ್ಲಾರಿಗೂ ಇಷ್ಟವಾಗುಯತ್ತೆ. ಪೂರಿ ಮಾಡಿದ್ರೆ ಮನೆ ಮಂದಿಗೆಲ್ಲಾ ಇಷ್ಟವಾಗುತ್ತೆ. ತೆಳುವಾದ ಪೂರಿಯು ಬಾಯಲ್ಲಿ ಇಟ್ಟರೆ ಕರಗುವಂತಿರಬೇಕು. ಹಾಗೆ ಪೂರಿಯೊಂದಿಗೆ ಸಾಗು ಮಾಡಿ, ಚಟ್ನಿ ಮಾಡಿ ಸವಿಯೋದು ಕೂಡ ನೋಡಬಹುದು. ಹಾಗೆ ಪೂರಿಯನ್ನು ಮಾಡುವುದು ಕೂಡ ಬಹಳ ತಯಾರಿ ಬೇಕಾಗುತ್ತದೆ. ಗೋಧಿ ಹಿಟ್ಟು ಹಾಗೆ ಮೈದಾ ಹಿಟ್ಟು ಬಳಸಿ ಮಾಡುವ ಪೂರಿಯನ್ನು ನೀವು ಸವಿದಿರುತ್ತೀರಿ, ಆದ್ರೆ ನಾವಿಂದು ತೆಂಗಿನಕಾಯಿ ಬಳಸಿ ಮೃದುವಾದ ಪೂರಿ ಮಾಡೋದು ಹೇಗೆ ಅನ್ನೋದನ್ನು ತಿಳಿದುಕೊಳ್ಳೋಣ. ಕಾಯಿ ಬಳಸಿ ಮಾಡುವ ಈ ಪೂರಿ ಬಹಳ ರುಚಿಕರವಾಗಿರಲಿದೆ. ಹಾಗೆ ಮೃದುವಾಗಿ ಚಟ್ನಿಯೊಂದಿಗೆ ಸವಿಯುತ್ತಿದ್ದರೆ ಬಾಯಲ್ಲಿ ನೀರು ಬರುವುದು ಖಚಿತ. ಹಾಗಾದ್ರೆ ತೆಂಗಿನಕಾಯಿ ಪೂರಿ ಮಾಡುವುದು ಹೇಗೆ? ಈ ಪೂರಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು?, ಮಾಡುವ ವಿಧಾನವೇನು? ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಲ್ಲಿ ತಿಳಿಯೋಣ.

**ತೆಂಗಿನಕಾಯಿ ಪೂರಿ ಮಾಡುವ ವಿಧಾನವೇನು:** ಮೊದಲು 1 ಕಪ್ ಅಕ್ಕಿಯ್ನು ನೆನೆಯಲು ಬಿಡಿ ಸುಮಾರು 3 ಗಂಟೆ ನೆನೆಯಲು ಬಿಡಿ. ಈಗ ಒಂದು ಕಪ್ ತೆಂಗಿನಕಾಯಿ ತುರಿ ರೆಡಿ ಮಾಡಿ ಕೊಳ್ಳಿ. ಈಗ ಒಂದು ಮಿಕ್ಸಿ ಜಾರ್‌ಗೆ ಮೊದಲು ನೆನೆಸಿಟ್ಟ ಅಕ್ಕಿ ಹಾಕಿಕೊಂಡು ಬಳಿಕ ತುರಿದುಕೊಂಡಿರುವ ತೆಂಗಿನಕಾಯಿ ಸಹ ಹಾಕಿಕೊಳ್ಳಿ. ನಂತರ 1 ಕಪ್ ನೀರು ಹಾಕಿಕೊಂಡು ರುಬ್ಬಿಕೊಳ್ಳಿ. ಆಗಾಗ ನೀರು ಹಾಕಿಕೊಂಡು ನುಣ್ಣಗೆ ರುಬ್ಬಿಕೊಳ್ಳಬೇಕು. ಈಗ ಬಾಣಲೆ ಒಲೆ ಮೇಲೆ ಇಟ್ಟು ಅದಕ್ಕೆ 2 ಕಪ್ ನೀರು ಹಾಕಿ ಉಪ್ಪು ಹಾಕಿ ಕುದಿಬರಲು ಬಿಡಿ. ಈಗ ರುಬ್ಬಿಕೊಂಡಿದ್ದ ಹಿಟ್ಟನ್ನು ಈ ಬಾಣಲೆಗೆ ಹಾಕಿ ಮಿಕ್ಸ್ ಮಾಡುತ್ತಾ ಇರಿ. 2 ನಿಮಿಷದಲ್ಲಿ ಗಟ್ಟಿಯಾಗಲು ಆರಂಭಿಸಲಿದೆ. ಹಿಟ್ಟು ಹದವಾಗಲು ಆರಂವಾಗುತ್ತದೆ. ಈ ಹಿಟ್ಟು ಬೆಣ್ಣೆಯಂತೆ ಮೃದುವಾಗಿ ಬರಲಿದೆ. ನಂತರ ಬಾಣಲೆ ಮುಚ್ಚಳ ಮುಚ್ಚಿ 1 ನಿಮಿಷ ಬಿಡಿ. ನಂತರ ಮತ್ತೆ ಮಿಕ್ಸ್ ಮಾಡಿ ಒಲೆ ಆಫ್ ಮಾಡಿಕೊಳ್ಳಿ. ಈಗ ಈ ಹಿಟ್ಟನ್ನು ಉಂಡೆ ಮಾಡಬೇಕು. ಕೈಗೆ ಎಣ್ಣೆ ಹಚ್ಚಿಕೊಂಡು ನಿಂಬೆ ಗಾತ್ರದಲ್ಲಿ ಉಂಡೆ ಕಟ್ಟಿಕೊಳ್ಳಿ. ಈಗ ಪ್ಲಾಸ್ಟಿಕ್ ಇಟ್ಟು ಅದಕ್ಕೆ ಎಣ್ಣೆ ಹಾಕಿ ನಂತರ ಉಂಡೆ ಇಟ್ಟು ಮೇಲೆ ಪ್ಲಾಸ್ಟಿಕ್ ಇಟ್ಟು ಒತ್ತಿಕೊಳ್ಳಿ. ಪೂರಿ ಒತ್ತಿಕೊಂಡ ಬಳಿಕ ಬಾಣಲೆಯಲ್ಲಿ ಎಣ್ಣೆ ಕಾಯಿಸಿಕೊಂಡು ಅದಕ್ಕೆ ಇಳಿ ಬಿಟ್ಟುಕೊಳ್ಳಿ. ದೊಡ್ಡ ಉರಿಯಲ್ಲಿ ಪೂರಿಯನ್ನು ಕರಿದುಕೊಂಡರೆ ನಿಮ್ಮ ಮುಂದೆ ರುಚಿ ರುಚಿಯ ತೆಂಗಿನಕಾಯಿ ಪೂರಿ ರೆಡಿಯಾಗುತ್ತದೆ. ನೀವು ಕೂಡ ಬೆಳಗ್ಗೆ ತಿಂಡಿಗೆ ಇದನ್ನು ಮಾಡಿ ನೋಡಿ. ಬಹಳ ಸುಲಭವಾಗಿ ಮಾಡಬಹುದು.

ಇದರ ಜೊತೆ ಸವಿಯಲು ತೆಂಗಿನಕಾಯಿ ಚಟ್ನಿ ಇದ್ದರೆ ರುಚಿ ದುಪ್ಪಟ್ಟಾಗುತ್ತೆ. ಮಕ್ಕಳು ಕೂಡ ಇದನ್ನು ಬಹಳ ಇಷ್ಟಪಟ್ಟು ಸವಿಯೋದು ಖಚಿತ.



**ತೆಂಗಿನಕಾಯಿ ಪೂರಿ ಮಾಡಲು ಯಾವೆಲ್ಲಾ ವಸ್ತುಗಳು ಬೇಕು?**

- ಅಕ್ಕಿ
- ತೆಂಗಿನಕಾಯಿ ತುರಿ
- ಉಪ್ಪು
- ಎಣ್ಣೆ

# ಖಗ್ರಾಸ ಚಂದ್ರ ಗ್ರಹಣ ಶಾಂತಿ, ಗುರುರಾಯರ ಸನ್ನಿಧಿಯಲ್ಲಿ ನವಗ್ರಹ ಶಾಂತಿ ಹೋಮ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಲೋಕಕಲ್ಯಾಣಕ್ಕಾಗಿ ಮತ್ತು ಭಕ್ತರಿಗಾಗಿ ಖಗ್ರಾಸ ಚಂದ್ರ ಗ್ರಹಣದ



ಪ್ರಯುಕ್ತ ಸಂಕಲ್ಪದೊಂದಿಗೆ ರಾತ್ರಿ 10 ಗಂಟೆಯಿಂದ ಮಧ್ಯರಾತ್ರಿ, 1:30ರವರೆಗೆ ಋತ್ವಿಜರಿಂದ ವಿಶೇಷ ನವಗ್ರಹ ಹೋಮ ಚಂದ್ರನಿಗೆ ಮತ್ತು ರಾಹುಗೆ ವಿಶೇಷ ತುಪ್ಪದಿಂದ ಆಹುತಿ ಮತ್ತು ಗುರುರಾಯರ ಅಷ್ಟೋತ್ತರ ಪಾರಾಯಣ ನವಗ್ರಹ ಮಂಡಲಾರಾಧನೆ ಕಳಶಾರಾಧನೆ ಶ್ರೀ ನರಸಿಂಹ ದೇವರ ವಿಶೇಷ ರಂಗೋಲಿಯ ಮಂಡಲದಲ್ಲಿ ಪೂಜೆ ಜಪತಪಾದಿಗಳು ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಅಷ್ಟೋತ್ತರ ಪಾರಾಯಣದೊಂದಿಗೆ ಮಹಾ ಮಂಗಳಾರತಿ ನೆರವೇರಿತು ಎಂದು ಶ್ರೀ ನಂದಕಿಶೋರಾಚಾರ್ಯರು ತಿಳಿಸಿದರು.

ಈ ಪೂಜಾ ಕಾರ್ಯಕ್ರಮದ ಹೋಮದಲ್ಲಿ ನೂರಾರು ಭಕ್ತರು ಭಾಗವಹಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಜಪದೊಂದಿಗೆ ಸ್ಮರಣೆಯನ್ನು ಮಾಡುತ್ತಾ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.



# ರಾಮಾಯಣ

## ಜಟಾಯುವಿನ ವೃತ್ತಾಂತ

• ಹಿಂದಿನ ಸಂಚಿಕೆಯಿಂದ
119 ನೆಯ ಅಧ್ಯಾಯ

ಶ್ರೀರಾಮ, ನೀನು ಸೀತಾಲಕ್ಷ್ಮಣಸಮೇತನಾಗಿ ಇಲ್ಲಿಗೆ ಬಂದದ್ದರಿಂದ ಈ ಆಶ್ರಮಕ್ಕೆ ಒಂದು ಬಗೆಯ ಸೌಂದರ್ಯ ಬಂದಿತು ಎಂದು ನುಡಿದನು.

ಶ್ರೀರಾಮನು ಕೈ ಮುಗಿದುಕೊಂಡು ತಪೋಜ್ವಾಲೆಯಿಂದ ಪ್ರಜ್ವಲಿಸುತ್ತಿದ್ದ ಆ ಮುನೀಶ್ವರನನ್ನು ಕುರಿತು ಮಹರ್ಷಿಗಳೆ, ನೀವು ನಮ್ಮನ್ನು ಕೃಪಾದೃಷ್ಟಿಯಿಂದ ನೋಡಿ ನಮ್ಮ ಕುಶಲವನ್ನು ಕೇಳಿ ಸತ್ಕಾರ ಮಾಡಿದ್ದರಿಂದ ನಾವು ಕೃತಾರ್ಥರಾದೆವು. ನಾವು ವಾಸವಾಗಿರುವುದಕ್ಕೆ ಕಂದಮೂಲ ಫಲಾದಿಗಳಿಂದ ಯುಕ್ತವಾಗಿ ಸ್ವಾದೋದಕವುಳ್ಳ ಒಂದು ಆಶ್ರಮವನ್ನು ತೋರಿಸಿದರೆ ನಾವು ಆ ಆಶ್ರಮದಲ್ಲಿ ಪರ್ಣಶಾಲೆಯನ್ನು ಮಾಡಿಕೊಂಡು ಸುಖವಾಗಿರುವೆವು ಎಂದು ಹೇಳಿದನು. ಆಗಸ್ತಮುನೀಶ್ವರನು ಒಂದು ಕ್ಷಣಮಾತ್ರ ಧ್ಯಾನಾಸಕ್ತನಾಗಿದ್ದು ಶ್ರೀರಾಮನನ್ನು ನೋಡಿ ಶ್ರೀರಾಮ ಇಲ್ಲಿಗೆ ಎರಡು ಗಾವುದ ದೂರದಲ್ಲಿ ಅನೇಕ ಕಂದಮೂಲಫಲಗಳುಳ್ಳದ್ದಾಗಿ ಸ್ವಾದೋದಕವುಳ್ಳ ಪಂಚವಟಿ ಎಂಬ ಸ್ಥಾನವಿದೆ. ನೀನು ಸೀತಾಲಕ್ಷ್ಮಣಸಮೇತನಾಗಿ ಅಲ್ಲಿಗೆ ಹೋಗು. ನಿಮ್ಮ ತಂದೆಯಾದ ದಶರಥರಾಯನ ಸ್ನೇಹಾತಿಶಯದಿಂದ ನಿನ್ನ ಸಮಸ್ತ ವೃತ್ತಾಂತವನ್ನೂ ನಿನ್ನ ಇಷ್ಟಾರ್ಥವನ್ನೂ ನಾನು ಬಲ್ಲೆನು ನೀನು ಪಂಚವಟಿಯಲ್ಲಿ ಆಶ್ರಮವನ್ನು ಮಾಡಿಕೊಂಡು ನಿನ್ನ ತಂದೆಗೆ ಮಾಡಿದ ಪ್ರತಿಜ್ಞೆಯನ್ನು ಪರಿಪಾಲಿಸು ಪಂಚವಟೀ ಕ್ಷೇತ್ರವು ರಮಣೀಯವಾದದ್ದು. ಅದರ ಸಮೀಪದಲ್ಲಿ ಗೋದಾವರೀನದಿಯಿದೆ. ಅದು ಅನೇಕ ಕಂದಮೂಲ ಫಲಾದಿಗಳಿಂದ ಪರಿಪೂರ್ಣವಾಗಿ ನಾನಾ ಪಕ್ಷಿಸಮೂಹಗಳಿಂದ ಇಟ್ಟಣಿಸಿ ಏಕಾಂತವಾಸಕ್ಕೆ ಯೋಗ್ಯವಾಗಿದೆ. ಆ ಕ್ಷೇತ್ರದಲ್ಲಿ ವಾಸವಾಗಿದ್ದುಕೊಂಡು ನಿಖಿಲ ಋಷಿಗಳನ್ನೂ ಪರಿಪಾಲಿಸು, ಇಲ್ಲಿಗೆ ಉತ್ತರದಲ್ಲಿ ಒಂದು ಹಿಪ್ಪೆಮರಗಳ ವನವು ಕಾಣಿಸುವುದು. ಆ ವನದ ಬಡಗಣ ಭಾಗದಲ್ಲಿಯೇ ಹೋದರೆ ಮುಂದೆ ಒಂದು ಆಲದ ಮರವಿದೆ. ಅಲ್ಲಿಂದ ಮುಂದೆ ಇರುವ ಒಂದು ತಿಟ್ಟನ್ನು ಹತ್ತಿ ನೋಡಿದರೆ ಸಮೀಪದಲ್ಲಿ ಒಂದು ಪರ್ವತವು ಕಾಣಿಸುವುದು ಸಮೀಪದಲ್ಲಿ ಪಂಚವಟೀ ಕ್ಷೇತ್ರವಿರುವುದು ಎಂದು ಹೇಳಿದನು. ಆ ಪರ್ವತದ ಆ ಮಾತನ್ನು ಕೇಳಿ ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ಆಗಸ್ತ್ಯಮುನೀಶ್ವರನಿಗೆ ಅತ್ಯಂತ ಭಯಭಕ್ತಿ ವಿನಯಗಳಿಂದ ಅಭಿನಂದಿಸಿದನು: ಆತನು ಕೊಟ್ಟ ಬಿಲ್ಲು ಬಾಣ ಖಡ್ಗಗಳನು ತೆಗೆದುಕೊಂಡು ಹರ್ಷದಿಂದ ಪಂಚವಟೀ ಕ್ಷೇತ್ರಕ್ಕೆ ತೆರಳಿದನು.

**ಜಟಾಯುವಿನ ವೃತ್ತಾಂತ**

ಆಮೇಲೆ ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ಪಂಚವಟಿ ಕ್ಷೇತ್ರಕ್ಕೆ ಹೋಗುತ್ತ ಒಂದು ಆಲದ ಮರದ ಮೇಲೆ ದೊಡ್ಡ ದೇಹವನ್ನು ಹೊಂದಿದ ಭೀಮಪರಾಕ್ರಮವುಳ್ಳ ಒಂದು ಹದ್ದನ್ನು ಕಂಡನು. ಅದು ರಾಕ್ಷಸಮಾಯೆಯೆಂದೆಣಿಸಿ ಆ ಹದ್ದನ್ನು ನೀನು ಯಾರು ? ಎಂದು ಕೇಳಿದನು ಆ ಹದ್ದು ಮಧುರವಾದ ನುಡಿಯಿಂದ ರಾಮಲಕ್ಷ್ಮಣರ ಮನಸ್ಸಿಗೆ ಸಂತೋಷವಾಗುವ ಹಾಗೆ ಅವರನ್ನು ಕುರಿತು ಎಲೈ ರಾಜಕುಮಾರರೆ, ನಾನು ನಿಮ್ಮ ತಂದೆಯಾದ ದಶರಥರಾಜನ ಸಖನು ಎಂದು ನುಡಿಯಿತು.

**ಮುಂದುವರಿಯುವುದು...**

# ಬಿಳಿ ಕೂದಲು ಕಪ್ಪಾಗಿಸಲು ಮನೆಯಲ್ಲೇ ಇದೆ ಸುಲಭ ದಾರಿ!




ಸಾಮಾನ್ಯವಾಗಿ ಇತ್ತೀಚಿಗೆ ಯುವ ಸಮಯದಾಯದ ಬಹುದೊಡ್ಡ ಸಮಸ್ಯೆ ಅಂದ್ರೆ ಕೂದಲು ಬಹುಬೇಗ ಬಿಳಿಯಾಗುವುದು. ಸಾಮಾನ್ಯವಾಗಿ 40 ಇಲ್ಲವೆ 45 ವರ್ಷದ ದಾಟಿದ ಬಳಿಕೆ ಬಿಳಿ ಕೂದಲು ಕಾಣಿಸಿಕೊಳ್ಳಬೇಕು. ಆದರೆ ಈಗ ಚಿಕ್ಕ ಮಕ್ಕಳಿಂದ ಹಿಡಿದು ಮಧ್ಯ ವಯಸ್ಕರಲ್ಲೂ ಕೂದಲು ಬಿಳಿಯಾಗುವ ಸಮಸ್ಯೆಯನ್ನು ನೋಡಬಹುದು. ಈ ಸಮಸ್ಯೆಗೆ ಹತ್ತಾರು ಕಾರಣಳಿಗೆ ಹಾಗೆ ಪರಿಹಾರಗಳು ಕೂಡ ಹೆಚ್ಚಾಗಿವೆ. ಬಿಳಿ ಕೂದಲು ಕಪ್ಪಾಗಿಸಲು ಸುಲಭದ ಉಪಯಾವಾಗಿ ಮಾರುಕಟ್ಟೆಯಲ್ಲಿ ಸಿಗುವಂತಹ ಕಪ್ಪು ಬಣ್ಣವನ್ನು ಬಹುತೇಕರು ಹಚ್ಚಿಕೊಳ್ಳುತ್ತಾರೆ. ಇದು 30 ದಿನಗಳ ಕಾಲ ಕೂದಲಿಗೆ ಬಣ್ಣ ನೀಡಬಹುದು. ಆದ್ರೆ ನೀವು ನೈಸರ್ಗಿಕವಾಗಿ ಕಪ್ಪು ಕೂದಲು ಬರುವುದನ್ನೇ ಶಾಶ್ವತವಾಗಿ ತಡೆಯುವುದು ಬಹಳ ಉತ್ತಮ. ಹಾಗೆ ಮನೆಯಲ್ಲೇ ನಾವು ಈ ರೀತಿಯ ಉಪಾಯ ಮಾಡುವ ಮೂಲಕ ಬಿಳಿ ಕೂದಲಿಗೆ ಕಡಿವಾಣ ಹಾಕಬಹುದು. ವಯಸ್ಸಿಗೂ ಮುನ್ನವೇ ಬಿಳಿ ಕೂದಲು ಬಂದರೆ ಎಲ್ಲಾರಲ್ಲೂ ಆತಂಕ ಮನೆ ಮಾಡೋದು ಕಾಮನ್. ವಯಸ್ಸಾದಂತೆ ಕಾಣಿಸಲು ಆರಂಭಿಸುತ್ತಾರೆ ಎಂಬ ಭಯದಲ್ಲೇ ಕಳೆಯುಬೇಕಾಗುತ್ತೆ. ಹಾಗೆ ಸಿಕ್ಕ ಸಿಕ್ಕ ಔಷಧಿಗಳು, ಕ್ರೀಮ್‌ಗಳು, ಚಿಕಿತ್ಸೆ, ಶಾಂಪೂ, ನಾಟಿ ಔಷಧಿ ಬಳಸುವುದು ನೋಡಬಹುದು. ಇದರಿಂದ ಮತ್ತಷ್ಟು ಸಮಸ್ಯೆಗಳು ಉಂಟಾಗುವುದು ಕೂಡ ಇದೆ. ಆದ್ರೆ ನಾವಿಂದು ಬಿಳಿ ಕೂದಲು ಸಮಸ್ಯೆಗೆ ಸುಲಭವಾಗಿ ಮನೆಯಲ್ಲೇ ಒಂದು ನೈಸರ್ಗಿಕ ಚಿಕಿತ್ಸೆ ಅಥವಾ ನೈಸರ್ಗಿಕ ಪರಿಹಾರ ಮಾಡಿಕೊಳ್ಳುವ ಕುರಿತಾಗಿ ತಿಳಿದುಕೊಳ್ಳೋಣ. ಇದರಿಂದ ಬಿಳಿ ಕೂದಲು ಸಮಸ್ಯೆಗೆ ಪರಿಹಾರ ಪಡೆಯುವುದು ಹೇಗೆ ಎಂಬುದನ್ನು ತಿಳಿಯೋಣ. ಅದ್ರಲ್ಲೂ ಮೆಹಂದಿಯನ್ನು ಬಳಸಿಕೊಂಡು ಹೇಗೆ ಕೂದಲನ್ನು ಕಪ್ಪು ಮಾಡಬಹುದು ಎಂಬುದನ್ನು ನಾವಿಂದು ತಿಳಿಯೋಣ. ಅಂಗಡಿಯಲ್ಲಿ ಸಿಗುವ 100% ಪ್ಯೂರ್ ಮೆಹಂದಿ ಪೌಡರ್ ತೆಗೆದುಕೊಳ್ಳಬೇಕು. ಹಾಗೆ ನೆಲ್ಲಿಕಾಯಿ ಪುಡಿ ಸಹ ಖರೀದಿಸಿ ತರಬೇಕು. ನಂತರ ಈಗ ಒಲೆ ಒಂದು ಪಾತ್ರೆ ಇಟ್ಟು ಅದಕ್ಕೆ ಒಂದು ಲೋಟ ನೀರು ಹಾಕಿ 2 ಸ್ಪೂನ್ 1 ಟೀ ಪುಡಿ 1 ಸ್ಪೂನ್ ಕಾಫಿ ಪುಡಿ ಹಾಕಿ ಕುದಿಬರಲು ಬಿಡಿ. ಈಗ ಒಂದು ದೊಡ್ಡ ಪಾತ್ರೆಯಲ್ಲಿ ಮೆಹಂದಿ ಪುಡಿ ಹಾಗೆ ಅರ್ಧ ಕಪ್ ನೆಲ್ಲಿಕಾಯಿ ಪುಡಿ ಹಾಕಿ ಮಿಕ್ಸ್ ಮಾಡಿಕೊಳ್ಳಿ. ಡ್ರೈ ಮಿಕ್ಸ್ ಮಾಡಿಕೊಂಡು ಇಟ್ಟುಕೊಳ್ಳಿ. ಈಗ ಒಲೆಯಲ್ಲಿ ಕುದಿಬರುತ್ತಿರುವ ಮಿಶ್ರಣ ಆಗಾಗ ಮಿಕ್ಸ್ ಮಾಡಿ. ಬಹಳ ಸಮಯ ಕುದಿಸಿ. ನೀರು ಅರ್ಧವಾಗುವಷ್ಟು ಕಡಿಮೆಯಾಗಬೇಕು. ಇದು ಕಹಿ ಕಾಫಿಯಂತೆ ಬರಬೇಕು. ನಂತರ ಒಲೆ ಆಫ್ ಮಾಡಿಕೊಂಡು ಜರಡಿ ಹಿಡಿದು ಬರೀ ನೀರನ್ನು ತೆಗೆದುಕೊಳ್ಳಿ. ನಂತರ ಇದನ್ನು ತಣ್ಣಗಾಗಲು ಬಿಡಿ. ಈಗ ಈ ಕಪ್ಪು ಬಣ್ಣದ ನೀರನ್ನು ಪಾತ್ರೆಯಲ್ಲಿನ ಮೆಹಂದಿ ನಿಂಬೆ ಪುಡಿಯ ಮಿಶ್ರಣಕ್ಕೆ ಹಾಕಿಕೊಳ್ಳಿ. ನಂತರ ಚೆನ್ನಾಗಿ ಕಲಸಿಕೊಳ್ಳಿ. ಗಂಟುಗಳು ಇಲ್ಲದಂತೆ ಇಟ್ಟನಂತೆ ಅದು ಬರಬೇಕು. ಗಟ್ಟಿ ಮೊಸರಿನ ಹದದಲ್ಲಿ ಇದು ಬರುವಂತೆ ಮಿಕ್ಸ್ ಮಾಡಿಕೊಳ್ಳಿ.

ಇದು ಮಿಕ್ಸ್ ಆದ ಬಳಿಕ 6 ರಿಂದ 7 ಗಂಟೆಗಳ ಕಾಲ ಹಾಗೆಯೇ ಬಿಡಬೇಕು. ಬೆಳಗ್ಗೆ ಈ ಮಿಕ್ಸ್ ಮಾಡಿದ್ರೆ ಸಂಜೆ ಬಳಸಬಹುದು. ಈಗ ಇದನ್ನು ಒಮ್ಮೆ ಮಿಕ್ಸ್ ಮಾಡಿಕೊಂಡು ತಲೆ ಕೂದಲಿಗೆ ಹಚ್ಚಬೇಕು.

ಕೈಗೆ ಗ್ಲೌಸ್ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿಕೊಂಡು ತಲೆ ಕೂದಲಿಗೆ ಹಚ್ಚಿಕೊಳ್ಳಬೇಕು. ಹೀಗೆ ಹಚ್ಚಿಕೊಂಡ ಬಳಿಕ 2 ಗಂಟೆಯಾದರು ಬಿಟ್ಟು ತಲೆ ಸ್ನಾನ ಮಾಡಬೇಕು. ತಲೆ ಸ್ನಾನ ಮಾಡುವಾಗ ಯಾವುದೇ ಸೋಪು ಅಥವಾ ಶಾಂಪೂ ಬಳಸಬೇಡಿ. ಹಾಗೆಯೆ ಚೆನ್ನಾಗಿ ನೀರಿನಿಂದ ತೊಳೆದುಕೊಳ್ಳಿ. ಸ್ನಾನದ ಬಳಿಕ ತಲೆಗೆ ಕೊಬ್ಬರಿಯನ್ನು ಕೈಗೆ ಸವರಿಕೊಂಡು ಮೆಲ್ಲಗೆ ಹಚ್ಚಿಕೊಳ್ಳಿ. ಇದರಿಂದ ಕೂದಲು ಮತ್ತಷ್ಟು ಕಪ್ಪಗೆ ಬರಲಿದೆ. ಈ ರೀತಿಯಾಗಿ ವಾರದಲ್ಲಿ 1 ಬಾರಿ ಮಾಡಿ ನೋಡಿ.

# ಉಜ್ಜನಿ ಚಲುವಯ್ಯರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



• ಉದಯವಾಹಿನಿ, ವಿಶೇಷ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಸಾಹಿತಿಗಳು, ಪರಿಸರ ಚಿಂತಕರು, ಕೃಷಿಕರು,ಈ ನಾಡು ಕಂಡಂತಹ ಸದ್ವಿಚಾರವಾದಿಗಳು, ತುಂಬಿದ ಕೊಡದಂತಹ ಪರಿಸರ ಪ್ರೇಮಿಗಳು....ಹೀಗೆ ಬಹುಮುಖ ಪ್ರತಿಭೆಯ ಮಹಾ ಸಂಗಮವಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಜನ್ಮದಿನದಂದು ಈ ನಾಡಿನೆಲ್ಲರ ಮೂಲಕ ಗೌರವದ ನಮನಗಳು. ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್ ಸೇರಿದಂತೆ ಮುಂತಾದ ಜನಪ್ರಿಯ ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡಿದ ಮಹಾನ್ ಚೇತನ. ನವೋದಯ, ನವ್ಯ, ನವ್ಯೋತ್ತರ, ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃತಿ ರಚಿಸಿದ ಅನನ್ಯ ಸಾಧಕರು ಇವರು.

**ಚನ್ನೇಗೌಡ ಉಜ್ಜನಿ ಚಲುವಯ್ಯ**

# ಹದಗೆಟ್ಟ ರಸ್ತೆಗಳು: ಜನರ ಹಿಡಿಶಾಪ

## ನಿರಂತರಮಳೆಯಿಂದಕಿತ್ತು ಹೋದಡಾಂಬರು: ಅಪಘಾತಕ್ಕೆ ಆಹ್ವಾನ: ಕಾಮಗಾರಿ ವಿರುದ್ಧ ಜನಾಕ್ರೋಶ

• ಉದಯವಾಹಿನಿ, ಹಾವೇರಿ

ಕಿತ್ತು ಹೋದ ಡಾಂಬರು. ಹೆಚ್ಚಾದ ತಗ್ಗು-ಗುಂಡಿಗಳು. ನೀರು ನಿಂತು ಹೊಂಡದಂತಾದ ದಾರಿಗಳು. ವಾಹನ ಚಲಾಯಿಸಲು ಭಯಪಡುವ ಚಾಲಕರು. ಗುಂಡಿ ಕಾಣದೇ ವಾಹನಗಳು ಉರುಳಿ ಬಿದ್ದಿದ್ದರಿಂದ ಗಾಯಗೊಂಡ ಸವಾರರು. ಕೆಸರಿನಲ್ಲಿ ಸಾಗುವಾಗ ಕಾಲು ಜಾರಿ ಬೀಳುವ ಪಾದಚಾರಿಗಳು..... ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಕಂಡುಬರುವ ರಸ್ತೆಗಳ ದುಸ್ಥಿತಿಯಿದು. ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ, ಗ್ರಾಮೀಣ ಪ್ರದೇಶದ ರಸ್ತೆಗಳು ಇತ್ತೀಚಿನ ದಿನಗಳಲ್ಲಿ ತೀರಾ ಹದಗೆಟ್ಟಿವೆ. ಇದರಿಂದಾಗಿ ಜನರಿಗೆ ಸಂಚಾರ ಕಂಟಕ ಎದುರಾಗಿದೆ. ನಿರಂತರ ಮಳೆ, ಅವೈಜ್ಞಾನಿಕ, ಕಳಪೆ ಕಾಮಗಾರಿಯಿಂದಾಗಿ ರಸ್ತೆಗಳು ಹಾಳಾಗಿವೆ. ಅಪಘಾತಕ್ಕೂ ಆಹ್ವಾನ ನೀಡುತ್ತಿವೆ. ರಸ್ತೆಯ ಅಕ್ಕ-ಪಕ್ಕದ ಕಾಲುವೆಗಳು ಹೂಳು ತುಂಬಿಕೊಂಡಿವೆ. ಮಳೆ ಬಂದ ಸಂದರ್ಭದಲ್ಲಿ ಕಾಲುವೆ ನೀರು, ರಸ್ತೆಯಲ್ಲಿ ಹರಿಯುತ್ತಿದೆ. ಇದು ಸಹ ರಸ್ತೆ ಹಾಳಾಗಲು ಕಾರಣವಾಗಿದೆ. ಮಳೆಗಾಲದ ಆರಂಭದಿಂದಲೇ ಹಲವು ರಸ್ತೆಗಳಲ್ಲಿ ಡಾಂಬರೀಕರಣ, ಸೇತುವೆ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಅದಕ್ಕಾಗಿ ರಸ್ತೆಯನ್ನು ಅಗೆಯಲಾಗಿದ್ದು, ಅದೇ ಸ್ಥಳದಲ್ಲಿ ನೀರು ನಿಂತು ಕೆಸರು ಹೆಚ್ಚಾಗುತ್ತಿದೆ. ಜಿಲ್ಲಾ ಕೇಂದ್ರ, ಹಾವೇರಿಯ ಜಿಲ್ಲಾಧಿಕಾರಿ ಕಚೇರಿ ಬಳಿಯ ದೇವಗಿರಿ ರಸ್ತೆಯೇ ತೀರಾ ಹದಗೆಟ್ಟಿದೆ. ಜೊತೆಗೆ, ನಗರದೊಳಗಿನ ಮಾರುಕಟ್ಟೆ, ಹಾನಗಲ್ ರಸ್ತೆ, ರೈಲ್ವೆ ನಿಲ್ದಾಣ, ಪುರದ ಓಣಿ ಸೇರಿದಂತೆ ಬಹುತೇಕ ಕಡೆಯ ರಸ್ತೆಗಳು ಗುಂಡಿಮಯ ಆಗಿವೆ. ಎಲ್ಲಿ ರಸ್ತೆ ಹದಗೆಟ್ಟಿದೆ ಎನ್ನುವುದಕ್ಕಿಂತ, ಎಲ್ಲಿ ರಸ್ತೆ ಚೆನ್ನಾಗಿದೆ ಎಂದು ಹುಡುಕುವ ಸ್ಥಿತಿಯಿದೆ. ಹಾನಗಲ್-ಹಾವೇರಿ ಪ್ರಮುಖ ರಸ್ತೆಯಲ್ಲಿಯೂ ಅಲ್ಲಲ್ಲಿ ಡಾಂಬರು ಕಿತ್ತು ಹೋಗಿದೆ. ಇದರಿಂದಾಗಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿವೆ. ಕೆಶಿಪ್‌ನವರು ಈ ರಸ್ತೆ ನಿರ್ವಹಣೆ


ಉದಯವಾಹಿನಿ ಚಿತ್ರ

ರಸ್ತೆ ಹಾಳಾಗಲು ಕಾರಣ

ಮಾಡುತ್ತಿದ್ದು, ದುರಸ್ತಿಗೆ ನಿರ್ಲಕ್ಷ್ಯ ವಹಿಸಿದ್ದಾರೆ. ಜಿಲ್ಲಾ ಕೇಂದ್ರ ಮಾತ್ರವಲ್ಲದೆ ರಾಣೆಬೆನ್ನೂರು, ಹಾನಗಲ್, ಬ್ಯಾಡಗಿ, ಹಿರೇಕೆರೂರು, ರಟ್ಟಿಹಳ್ಳಿ, ಶಿಗ್ಗಾವಿ ಹಾಗೂ ಸವಣೂರು ತಾಲ್ಲೂಕಿನಲ್ಲೂ ರಸ್ತೆಗಳು ಹದಗೆಟ್ಟಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿದರೆ, ಗುಂಡಿಗಳೇ ಕಣ್ಣಿಗೆ ರಾಚುತ್ತವೆ. ನೀರು ನಿಂತ ಸಂದರ್ಭದಲ್ಲಂತೂ ವಾಹನಗಳು ಉರುಳಿಬಿದ್ದು, ಸವಾರರು ಗಾಯಗೊಂಡು ಆಸ್ಪತ್ರೆಗೆ ಸೇರುತ್ತಿದ್ದಾರೆ.

**ಹಾನಗಲ್‌ನಲ್ಲೂ ಹದಗೆಟ್ಟ ರಸ್ತೆ:** ಹಾನಗಲ್ ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿಯೂ ರಸ್ತೆಯಲ್ಲಿ ತಗ್ಗುಗಳು ಬಿದ್ದು, ನೀರು ನಿಂತು ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಗಿದೆ. ತಾಲ್ಲೂಕಿನ ಹಲವು ಗ್ರಾಮಗಳ ರಸ್ತೆಯೂ ಹದಗೆಟ್ಟಿದ್ದು, ದುರಸ್ತಿಗೆ ಜನರು ಆಗ್ರಹಿಸುತ್ತಿದ್ದಾರೆ. ಹಾನಗಲ್‌ನಿಂದ 24 ಕಿ.ಮೀ. ದೂರದಲ್ಲಿರುವ ತಿಳವಳ್ಳಿ ಗ್ರಾಮದ ಕೆರೆಯ ದಡದಲ್ಲಿರುವ ರಸ್ತೆಯೂ ತೀರಾ ಹದಗೆಟ್ಟಿದೆ. ತಿಳವಳ್ಳಿ ಬಸ್ ನಿಲ್ದಾಣ ಎದುರಿನ ರಸ್ತೆಯ ಸ್ಥಿತಿ ಶೋಚನೀಯ ಆಗಿದೆ. ಇಡೀ ಡಾಂಬರ್ ಕಿತ್ತುಹೋಗಿ, ಮಣ್ಣು ಹೊರಗೆ ಬಂದು ತಗ್ಗು ಬಿದ್ದಿವೆ. ಬಸ್ ನಿಲ್ದಾಣ ಎದುರೇ ಗುಂಡಿಗಳು ಬಿದ್ದಿದ್ದು, ನೀರು ನಿಂತುಕೊಂಡಿದೆ. ಈ ರಸ್ತೆಯಲ್ಲಿ ಸಾಗುವಾಗ ಹಲವು ಬೈಕ್ ಸವಾರರು, ಆಯತಪ್ಪಿ ಬಿದ್ದು ಗಾಯ ಮಾಡಿಕೊಂಡಿರುವ ಘಟನೆಗಳೂ ನಡೆದಿವೆ. ನಿಲ್ದಾಣ ಬಳಿಯೇ ನಾಯರ್ ಪೆಟ್ರೋಲ್ ಬಂಕ್ ಇದ್ದು, ಅದರ ಎದುರಿನ ರಸ್ತೆಯಂತೂ ತೀರಾ ಹದಗೆಟ್ಟಿದೆ. ಡಾಂಬರ್ ಮಾಯವಾಗಿ, ಗುಡ್ಡುಗಾಡು ಪ್ರದೇಶದ ರಸ್ತೆಯಂತೆ ಗೋಚರಿಸುತ್ತಿದೆ. ಹದಗೆಟ್ಟ ರಸ್ತೆ ಬಗ್ಗೆ ಗೊತ್ತಿರುವ ಚಾಲಕರು, ರಸ್ತೆಯ ಪಕ್ಕದಲ್ಲಿರುವ ಪೆಟ್ರೋಲ್ ಬಂಕ್ ಜಾಗದಿಂದ ಸಂಚರಿಸುತ್ತಿದ್ದಾರೆ. ರಸ್ತೆ ಹದಗೆಟ್ಟಿರುವುದರಿಂದ ಬಂಕ್ ಸಿಬ್ಬಂದಿಗೂ ಕಿರಿಕಿರಿ ಉಂಟಾಗುತ್ತಿದೆ. ರೈತರು ಕೃಷಿ ಉತ್ಪನ್ನವನ್ನು ಹೊಲದಿಂದ ಮನೆಗೆ ಕೊಂಡೊಯ್ಯುವ ಸಂದರ್ಭದಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ. ಗುಂಡಿಗಳಿಂದಾಗಿ ರಸ್ತೆಯಲ್ಲಿಯೇ ಕೃಷಿ ಉತ್ಪನ್ನಗಳು ಬಿದ್ದು ಚೆಲ್ಲಾಪಿಲ್ಲಿಯಾಗುತ್ತಿವೆ.

ಗುಂಡಿಯಿಂದ ಮಹಿಳೆ ಸಾವು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಂಕಾಪುರ ಬಳಿ ರಸ್ತೆಯ ಗುಂಡಿಯಿಂದ ಅಪಘಾತ ಸಂಭವಿಸಿ ಬೈಕ್ ಹಿಂಬದಿ ಕುಳಿತಿದ್ದ ಅನ್ನಪೂರ್ಣಾ ಕರೆಗೌಡ್ರ (45) ಎಂಬುವವರು ಮೃತಪಟ್ಟಿದ್ದಾರೆ. ಹಾನಗಲ್ ತಾಲ್ಲೂಕಿನ ವರ್ದಿ ಗ್ರಾಮದ ಅನ್ನಪೂರ್ಣಾ ಅವರು ಪತಿ ಕರೆಗೌಡ (55) ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿತ್ತು. ರಸ್ತೆಯಲ್ಲಿದ್ದ ಗುಂಡಿಯೇ ಕಾರಣವೆಂಬುದು ಪೊಲೀಸರು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

### ಸಮೀಕ್ಷೆ ಮಾಡಿಸಿ ಅಭಿವೃದ್ಧಿ ಮಾಡಿ

ಜಿಲ್ಲೆಯ ಬಹುತೇಕ ಕಡೆಗಳಲ್ಲಿ ರಸ್ತೆಗಳು ಹಾಳಾಗಿವೆ. ಅಂಥ ರಸ್ತೆಗಳ ಬಗ್ಗೆ ಜಿಲ್ಲಾಡಳಿತ ಸಮೀಕ್ಷೆ ನಡೆಸಬೇಕು. ಮಳೆಗಾಲ ಮುಗಿಯುತ್ತಿದ್ದಂತೆ ಶಾಶ್ವತ ಪರಿಹಾರವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು, ರಸ್ತೆ ಹದಗೆಟ್ಟಿರುವುದರಿಂದ ಓಡಾಡಲು ಆಗುತ್ತಿಲ್ಲ. ಎ ಕಡೆಯೂ ಗುಂಡಿಗಳಿವೆ. ವಾಹನಗಳು ಹಾಳಾಗುತ್ತಿವೆ. ಇದರ ಜೊತೆಯಲ್ಲಿ ಅಪಘಾತಗಳು ಸಂಭವಿಸಿ ಹಲವರು ಗಾಯಗೊಳ್ಳುತ್ತಿದ್ದಾರೆ, ಗ್ಯಾರಂಟಿ ಯೋಜನೆಗಳಿಗೆ ಹಣ ಹೋಗುತ್ತಿರುವುದರಿಂದ ಕ್ಷೇತ್ರದ ಅಭಿವೃದ್ಧಿಗೆ ಹಣ ಸಿಗುತ್ತಿಲ್ಲವೆಂದು ಕೆಲ ಶಾಸಕರು ದೂರುತ್ತಿದ್ದಾರೆ. ಜಿಲ್ಲೆಯ ಶಾಸಕರಾದರೂ ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದರು.

> ಶಿವಮೊಗ್ಗ-ತಡಸ ರಾಜ್ಯ ಹೆದ್ದಾರಿ ಹಾದು ಹೋಗಿರುವ ಹಾನಗಲ್‌ನ ರಾಣಿ ಚನ್ನಮ್ಮ ವೃತ್ತದ ರಸ್ತೆಯೇ ತೀರಾ ಹದಗೆಟ್ಟಿದೆ. ಅಧಿಕಾರಿಗಳು ಜನಪ್ರತಿನಿಧಿಗಳು ತಿರುಗಿಯೂ ನೋಡುತ್ತಿಲ್ಲ.
>
> -ಸುಭಾಷ್ ಎಂ. ಹಾನಗಲ್ ನಿವಾಸಿ

# ವೀರಶೈವ ಲಿಂಗಾಯತ ಧರ್ಮ ಒಡೆಯುವ ಷಡ್ಯಂತ್ರ ಕೈಬಿಡಿ

• ಉದಯವಾಹಿನಿ, ಗುಳೇದಗುಡ್ಡ

ಶಿವಯೋಗಮಂದಿರದ ಕುಮಾರಶಿವಯೋಗಿಗಳು ತತ್ವ ಪ್ರಧಾನವಾಗಿ ಧರ್ಮ ಇರಬೇಕೆಂದಿದ್ದಾರೆ. ಆದರೆ, ವೀರಶೈವ ಲಿಂಗಾಯತರಲ್ಲಿ ಭಿನ್ನತೆ ತಂದು ಕೇವಲ ಲಿಂಗಾಯತ ಧರ್ಮದ ಹೆಸರಿನಲ್ಲಿ ಧರ್ಮ ಒಡೆಯುವ ಹುನ್ನಾರ, ಪಿತೂರಿಯನ್ನು ಕಾಣದ ಕೈಗಳು ಮಾಡುತ್ತಿವೆ ಎಂದು ಮುರುಘಾಮಠದ ಕಾಶಿನಾಥ ಶ್ರೀ ಆರೋಪಿಸಿದರು.

ಮುರುಘಾಮಠದಲ್ಲಿ ವೀರಶೈವ ಲಿಂಗಾಯತ ಧರ್ಮ ಒಕ್ಕೂಟ ವತಿಯಿಂದ ಹಮ್ಮಿಕೊಂಡಿದ್ದ ಸಭೆ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಇದು ಕಾಂಗ್ರೆಸ್ ಸರ್ಕಾರದ ಪಾಯೋಜಕತ್ವದಂತಿದೆ. ಸರ್ಕಾರವೇ ಮುಂದೆ ನಿಂತು ವೀರಶೈವ ಲಿಂಗಾಯತ ಧರ್ಮ ಒಡೆಯುವ ಷಡ್ಯಂತ್ರ ಮಾಡುತ್ತಿದೆ. ಅದಕ್ಕಾಗಿ ಸೆ.10 ರಂದು ಬಾಗಲಕೋಟೆಯಲ್ಲಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ರಚಿಸಿಕೊಂಡು ಹಮ್ಮಿಕೊಂಡಿರುವ ಬಸವ ಸಂಸ್ಕೃತಿ ಅಭಿಯಾನಕ್ಕೆ ವೀರಶೈವ ಲಿಂಗಾಯತ ಧರ್ಮದವರು ಕಡ್ಡಾಯವಾಗಿ ಯಾರೂ ಹೋಗಬಾರದು ಎಂದು ಹೇಳಿದರು. ವೀರಶೈವ ಎನ್ನುವ ಪದ ಬಳಸದೇ ಕೇವಲ


ಉದಯವಾಹಿನಿ ಚಿತ್ರ

ಲಿಂಗಾಯತ ಎಂಬ ಪದ ಬಳಸಿ ಎಲ್ಲರಲ್ಲಿ ಸಂಕುಚಿತ ಮನೋಭಾವನೆ ಮೂಡಿಸುವುದು ಸರಿಯಲ್ಲ. ಎಂದರು.

ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶ್ರೀ ಮಾತನಾಡಿ, ಬಸವಾದಿ ಪ್ರಮಥರ ಆಶಯಕ್ಕೆ ದಕ್ಕೆ ಬರದಂತೆ ಎಲ್ಲರೂ ನಡೆದುಕೊಳ್ಳಬೇಕು ಎಂದರು. ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ವೀರಶೈವ, ಲಿಂಗಾಯತ ಬೇರೆಯಲ್ಲ. ಎಲ್ಲರೂ ಒಂದು ಎಂದು ಬಸವಣ್ಣನವರು ಎಲ್ಲಾ ಶ್ರಮ ವರ್ಗದವರನ್ನು ವೀರಶೈವ ಲಿಂಗಾಯತ ಧರ್ಮದಡಿ ತಂದಿದ್ದಾರೆ. ವೀರಶೈವ ಲಿಂಗಾಯತ ಎನ್ನುವ ಪದದಲ್ಲಿ ವಿಶಾಲವಾದ ಅರ್ಥವಿದೆ ಎಂದರು. ಬಸವ ಸಂಸ್ಕೃತಿಗೆ ವಿರೋಧ ವ್ಯಕ್ತಪಡಿಸಿ, ಆ ಕಾರ್ಯಕ್ರಮಕ್ಕೆ ಹೋಗದಿರಲು ನಿರ್ಧರಿಸಲಾಯಿತು.

# ಬಸವತತ್ವ ಕೇವಲ ಪ್ರಚಾರಕ್ಕೆ, ರಾಜಕೀಯ ಬಳಕೆ

• ಉದಯವಾಹಿನಿ, ವಿಜಯಪುರ

ಬಸವಣ್ಣ ಪ್ರತಿಪಾದಿಸಿದ ಬಸವತತ್ವ ಪಾಲನೆ ಅತ್ಯಂತ ಕಠಿಣವಾಗಿದೆ. ನನ್ನನ್ನೂ ಸೇರಿದಂತೆ ನಾಡಿನ ಯಾವೊಬ್ಬ ಸ್ವಾಮೀಜಿ, ವಿದ್ವಾಂಸರು, ನಾಯಕರೂ ಬಸವ ತತ್ವವನ್ನು ಪಾಲನೆ ಮಾಡುತ್ತಿಲ್ಲ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವ ತತ್ವ ಪಾಲನೆ ಮಾಡಿದವರು ಮಹಾ ಪುರುಷರಾಗುತ್ತಾರೆ. ಕೇವಲ ಪ್ರಚಾರಕ್ಕೆ, ರಾಜಕೀಯಕ್ಕೆ ಬಸವತತ್ವ ಬಳಕೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು

**ಹಿಂದೂಗಳಲ್ಲ:** ವೀರಶೈವ, ಲಿಂಗಾಯತ ಹಿಂದೂ ಧರ್ಮದ ಅಂಗವಲ್ಲ. ಇದೊಂದು ಸ್ವತಂತ್ರ ಧರ್ಮ. ವೀರಶೈವ-ಲಿಂಗಾಯತರು ನಮ್ಮ ಅಸ್ಮಿತೆಗಾಗಿ, ನಮ್ಮ ಸಿದ್ಧಾಂತಕ್ಕಾಗಿ, ನಮ್ಮ ಆಚರಣೆಗಾಗಿ ಸ್ವತಂತ್ರ ಧರ್ಮದವರಾಗಬೇಕೇ ಹೊರತು, ಹಿಂದೂ ಧರ್ಮದ ವಿರೋಧಿಗಳಾಗಬೇಕಾಗಿಲ್ಲ, ಹಿಂದೂ ಧರ್ಮ ಬಿಟ್ಟುಕೊಡಲು ಬರುವುದಿಲ್ಲ ಎಂದರು.

ಪ್ರತ್ಯೇಕ ಧರ್ಮ ಮಾನ್ಯತೆಯನ್ನು ವೀರಶೈವ, ಲಿಂಗಾಯತ ಇಬ್ಬರೂ ಒಟ್ಟುಗೂಡಿಯೇ ಪಡೆದು



ಕೊಳ್ಳಬೇಕು ಎಂದು ಸಲಹೆ ನೀಡಿದರು.

**ಭಿನ್ನಾಭಿಪ್ರಾಯ ಬಗೆಹರಿಸಿ:** ಕೇಂದ್ರ ಸರ್ಕಾರ ಜಾತಿ ಗಣತಿ ಆರಂಭಿಸುವ ಮುನ್ನವೇ ವೀರಶೈವ-ಲಿಂಗಾಯತ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ವೀರಶೈವ ಲಿಂಗಾಯತ ಮಹಾಸಭೆಯು ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ ಶ್ರಮಿಸಬೇಕಿದೆ ಎಂದು ಒತ್ತಾಯಿಸಿದರು.

ವೀರಶೈವ-ಲಿಂಗಾಯತ ನಡುವಿನ ಭಿನ್ನಾಭಿಪ್ರಾಯ 12ನೇ ಶತಮಾನದಿಂದ ಆರಂಭಗೊಂಡು ಇಂದಿನ ವರೆಗೂ ಬಗೆಹರಿದಿಲ್ಲ. ಈ ನಿಟ್ಟಿನಲ್ಲಿ ವೀರಶೈವ ಲಿಂಗಾಯತ ಮಹಾಸಭೆಯು ಪಂಚ ಪೀಠಾಧೀಶರು, ವಿರಕ್ತವರ್ಗದ ಸ್ವಾಮೀಜಿಗಳು, ಸಮಾಜದ ಹಾಲಿ, ಮಾಜಿ ರಾಜಕೀಯ ನಾಯಕರು, ವಿದ್ವಾಂಸರು, ತಜ್ಞರು, ವೈದ್ಯರು, ಎಂಜಿನಿಯರ್, ಸಾಧಕರು, ಗಣ್ಯರನ್ನು ಒಂದೆಡೆ ಸೇರಿಸಿ ಅವರಿಂದ ಅಭಿಪ್ರಾಯ ಪಡೆದು ಒಮ್ಮತಕ್ಕೆ ಬರಬೇಕು ಹಾಗೂ ಸಮಾಜ ಅದನ್ನು ಒಪ್ಪಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಹುಪಾಲು ಜನ ವೀರಶೈವ-ಲಿಂಗಾಯತ ಒಟ್ಟಾಗಿ ಹೋಗಬೇಕು ಎಂಬ ಒಲವು ಹೊಂದಿದ್ದಾರೆ. ಸಮಾಜದ ಹಿತ ದೃಷ್ಟಿಯಿಂದ ಆದಷ್ಟು ಶೀಘ್ರ ಸೂಕ್ತ ತೀರ್ಮಾನ ಕೈಗೊಳ್ಳಬೇಕಾಗಿದೆ ಎಂದರು.

### ಅಭ್ಯಂತರ ಬೇಡ

ಮೈಸೂರು ದಸರಾ ಉತ್ಸವ ಇಡೀ ಕನ್ನಡ ನಾಡ ಉತ್ಸವವಾಗಿ ವ್ಯಾಪಿಸಿದೆ. ಕನ್ನಡ ನಾಡು, ನುಡಿಗೆ ಗೌರವ ತಂದವರು ಹಾಗೂ ದಸರಾ ಸಂಪ್ರದಾಯವನ್ನು ಗೌರವದಿಂದ ಒಪ್ಪಿ ಬರುವವರು ಯಾರೇ ಆಗಿರಲಿ ಅವರಿಂದ ಉದ್ಘಾಟಿಸುವುದಕ್ಕೆ ಅಭ್ಯಂತರ ಸರಿಯಲ್ಲ ಎಂದರು.

# ನಿರಂತರ ಮಳೆ: ಯೂರಿಯಾಗೆ ಅಧಿಕ ಬೇಡಿಕೆ

• ಉದಯವಾಹಿನಿ, ಹೊಸದುರ್ಗ:

ಒಂದೂವರೆ ತಿಂಗಳಿನಿಂದ ಆಗಾಗ ಸೋನೆ ಮಳೆಯಾಗುತ್ತಿದ್ದು, ರಾಗಿ, ಮುಸುಕಿನ ಜೋಳ ಬೆಳೆಗೆ ಯೂರಿಯಾ ರಸಗೊಬ್ಬರ ಖರೀದಿಸಲು ರೈತರು ಅಂಗಡಿಗಳ ಮುಂದೆ ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಮಳೆಗಾಲದ ಬೆಳೆಗಳಿಗೆ ಈಗ ರಸಗೊಬ್ಬರ ಹಾಕಲು ಸಕಾಲವಾಗಿದೆ. ರಸಗೊಬ್ಬರ ಹಾಕಲು ಯಾವುದೇ ಅಂಗಡಿಗಳಲ್ಲಿಯೂ ರಸಗೊಬ್ಬರ ದಾಸ್ತಾನು ಇಲ್ಲ. ಪಟ್ಟಣದ ಎಪಿಎಂಸಿ ಆವರಣ, ಸೊಸೈಟಿ ಅಥವಾ ರೈತ ಉತ್ಪಾದಕರ ಸಂಸ್ಥೆಗಳಿಗೆ ಯೂರಿಯಾ ಗೊಬ್ಬರ ಬಂದರೆ ಸಾಕು ಸಾವಿರಾರು ಜನರು ಸರದಿ ಸಾಲಿನಲ್ಲಿ ನಿಲ್ಲುತ್ತಾರೆ. ಮುಂಜಾನೆ 5 ಗಂಟೆಯಿಂದ ನಿಂತು ಮಧ್ಯಾಹ್ನ 2 ಗಂಟೆಗೆ ಗೊಬ್ಬರ ಪಡೆದು ಮನೆಗೆ ತೆರಳುತ್ತಿದ್ದಾರೆ. ರೈತರಿಗೆ ನಿತ್ಯ ಕಾಯುವುದೇ ಕೆಲಸವಾಗಿಬಿಟ್ಟಿದೆ.

ಸರ್ಕಾರ ರಾಗಿ ಬೆಳೆಗೆ ಬೆಂಬಲ ಬೆಲೆ ಘೋಷಿಸಿದೆ. ತಾಲ್ಲೂಕಿನ ಕೃಷಿ ಭೂಮಿ ರಾಗಿ ಬೆಳೆಗೆ ಯೋಗ್ಯವಾಗಿದೆ. ಹವಾಮಾನವೂ ಉತ್ತಮವಾಗಿದ್ದು, ರಾಗಿ ಬೆಳೆ ವಿಸ್ತೀರ್ಣಗೊಂಡಿದೆ. ಇಷ್ಟೇ ಅಲ್ಲದೇ ನಿರಂತರ ಮಳೆಯ ಕಾರಣದಿಂದ ಯೂರಿಯಾ ಬೆಳೆಗೆ ಬೇಡಿಕೆ ಹೆಚ್ಚಾಗಿದೆ. ರಾಗಿಗೆ ಸಮಯಕ್ಕೆ ಸರಿಯಾಗಿ ಗೊಬ್ಬರ ಹಾಕದಿದ್ದರೆ, ತೇವಾಂಶ ಹೆಚ್ಚಾಗಿ ಹಳದಿ ಬಣ್ಣಕ್ಕೆ ತಿರುಗುತ್ತಿವೆ. ಒಬ್ಬ ರೈತನಿಗೆ 2 ಚೀಲ ಮಾತ್ರ ಯೂರಿಯಾ ನೀಡುತ್ತಿರುವುದು ಸಾಕಾಗುತ್ತಿಲ್ಲ. ಎರಡು ಎಕರೆಗೆ ಮೂರು ಚೀಲವಾದರೂ ಯೂರಿಯಾ ಬೇಕು. ರಾಗಿ ಬಿತ್ತಿದಾಗಿನಿಂದಲೂ ಒಂದೆರಡು ದಿನ ಬಿಟ್ಟು ನಿರಂತರವಾಗಿ ಮಳೆ ಸುರಿಯುತ್ತಿದೆ. ಸದ್ಯ ಯೂರಿಯಾ ಹಾಕದಿದ್ದರೆ ರಾಗಿ ಹಾಗೂ ಮುಸುಕಿನ ಜೋಳ ಕೈಗೆಟುಕುವುದೇ ಅನುಮಾನವಾಗಿದೆ. ಅಗತ್ಯ ರಸಗೊಬ್ಬರ ನೀಡಲು ಸರ್ಕಾರ ಕ್ರಮ ವಹಿಸಬೇಕು. ತಪ್ಪಿದ್ದಲ್ಲಿ ರಾಗಿ ಮುಸುಕಿನ ಜೋಳ ಇಳುವರಿ ಕುಂಠಿತವಾಗಬಹುದು ಎಂದು ಬಾಗೂರು ಗ್ರಾಮದ ರೈತ ವೆಂಕಟೇಶ್ ಬೇಸರ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

> ಕಾಳಸಂತೆಯಲ್ಲಿ ಯೂರಿಯಾ ಮಾರಾಟ ಆಗದಂತೆ ತಡೆಗಟ್ಟಬೇಕು. ಗೊಬ್ಬರದ ಸಮಸ್ಯೆಯಾಗಲು ಸರ್ಕಾರದ ನಿರ್ಲಕ್ಷ್ಯವೇ ಕಾರಣ. ನ್ಯಾನೋ ಯೂರಿಯಾವನ್ನು ರೈತರ ಎಲ್ಲಾ ಜಮೀನುಗಳಿಗೆ ಸರ್ಕಾರವೇ ಡ್ರೋನ್ ಮೂಲಕ ಸಿಂಪಡಿಸಲಿ.
>
> -ಕೆ.ಸಿ. ಮಹೇಶ್ವರಪ್ಪ
> ರೈತ ಸಂಘದ ಪ್ರಧಾನ ಕಾರ್ಯದರ್ಶಿ

# ಮನೆಗಳಿಗೆ ಇ-ಸ್ವತ್ತು: ಡಿ.ಸಿ ಪರಿಶೀಲನೆ

• ಉದಯವಾಹಿನಿ, ಹೂವಿನಹಡಗಲಿ

ತಾಲ್ಲೂಕಿನ ಹಿರೇಹಡಗಲಿ ನಾಡ ಕಚೇರಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಭೇಟಿ ನೀಡಿ ಸಾರ್ವಜನಿಕರ ಅಹವಾಲು ಆಲಿಸಿದರು. ಕಂದಾಯ ದಾಖಲೆಗಳ ತಿದ್ದುಪಡಿ, ಜಮೀನುಗಳಿಗೆ ದಾರಿ, ವಸತಿ, ನಿವೇಶನ, ಪಿಂಚಣಿ ಸೌಲಭ್ಯ, ರಸ್ತೆ, ಚರಂಡಿಯ ಸಮಸ್ಯೆಗಳಿಗೆ ಕಿವಿಯಾದ ಡಿಸಿ, ಕೆಲ ಅರ್ಜಿಗಳನ್ನು ಸ್ಥಳದಲ್ಲೇ ಪರಿಹರಿಸಿದರು. ಹಿರೇಹಡಗಲಿ ಗ್ರಾಮಠಾಣಾ ಸರಹದ್ದಿನ ಸರ್ಕಾರಿ ಭೂಮಿಯಲ್ಲಿ ದಶಕಗಳ ಹಿಂದೆ ನಿರ್ಮಿಸಿಕೊಂಡಿರುವ ಮನೆಗಳಿಗೆ ಗ್ರಾಮ ಪಂಚಾಯಿತಿಯವರು ಆಸ್ತಿ ದಾಖಲೆ ನೀಡುತ್ತಿಲ್ಲ. ಬೇರೆಡೆ ನಿವೇಶನ ಇಲ್ಲ, ವಾಸವಿರುವ ಜಾಗಕ್ಕೆ ಭದ್ರತೆಯಿಲ್ಲ. ಈ ಸಮಸ್ಯೆ ಹರಿಪರಿಸಬೇಕು ಎಂದು ಕೆಲವರು ಮನವಿ ಮಾಡಿದರು.

ಸರ್ಕಾರಿ ಭೂಮಿಯಲ್ಲಿ ಹಲವು ವರ್ಷಗಳಿಂದ ಮನೆ, ಗುಡಿಸಲು ಹಾಕಿಕೊಂಡವರಿಗೆ ಉಪಗ್ರಾಮ ಯೋಜನೆ ಅಡಿ ಇ-ಸ್ವತ್ತು ನೀಡಲು ಅವಕಾಶವಿದೆ. ಗ್ರಾಮಠಾಣಾ ಸರ್ವೆ ಮಾಡಿಸಿ ಸರ್ಕಾರಿ ಭೂಮಿಯಲ್ಲಿ ವಾಸವಿರುವ ನೈಜ ಫಲಾನುಭವಿಗಳಿಗೆ ಇ-ಸ್ವತ್ತು ಕೊಡಿಸಲು ಪರಿಶೀಲಿಸುತ್ತೇವೆ ಎಂದು ಜಿಲ್ಲಾಧಿಕಾರಿ


ಉದಯವಾಹಿನಿ ಚಿತ್ರ

ಹೇಳಿದರು. ಹಿರೇಹಡಗಲಿ ಕೆರೆ ಅಭಿವೃದ್ಧಿ ಕಾಮಗಾರಿ ಅವೈಜ್ಞಾನಿಕವಾಗಿದೆ. 11.50 ಕೋಟಿ ವೆಚ್ಚದ ಕಾಮಗಾರಿ ಕೈಗೊಂಡಿದ್ದರೂ ಸಣ್ಣ ನೀರಾವರಿ ಇಲಾಖೆಯವರು ಮಾಹಿತಿ ಫಲಕ ಹಾಕಿಲ್ಲ. ಕುಡುಗೋಲು ಮಟ್ಟಿ ಏತ ನೀರಾವರಿ ಯೋಜನೆಗೆ ಹತ್ತಾರು ಕೋಟಿ ಖರ್ಚಾಗಿದ್ದರೂ ಅಧಿಕಾರಿಗಳ ಇಚ್ಛಾಸಕ್ತಿ ಕೊರತೆಯಿಂದ ಯೋಜನೆ ಚಾಲನೆ ಆಗಿಲ್ಲ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಅಧ್ಯಕ್ಷ ಚಂದ್ರಶೇಖರ ದೊಡ್ಡಮನಿ ದೂರಿದರು.

**ಆಸ್ಪತ್ರೆ ನಿರ್ವಹಣೆಗೆ ಪ್ರಶಂಸೆ:** ಹಿರೇಹಡಗಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ ನೀಡಿ ಪರಿಶೀಲಿಸಿದರು. ಆಸ್ಪತ್ರೆಯ ಸಾಮರ್ಥ್ಯ ಮೀರಿ ದಾಖಲಾಗಿದ್ದ ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುತ್ತಿರುವುದನ್ನು ವೀಕ್ಷಿಸಿ ಆಸ್ಪತ್ರೆಯ ವೈದ್ಯ ಡಾ. ವಿನೋದ ಅವರನ್ನು ಪ್ರಶಂಸಿಸಿದರು. ಖಾಲಿಯಾಗಿದ್ದ ಔಷಧಿ ದಾಸ್ತಾನನ್ನು ತಕ್ಷಣ ಪೂರೈಸುವಂತೆ ಡಿಎಚ್‌ಒ ಅವರಿಗೆ ಸೂಚಿಸಿದರು.

### ಕೃಷಿಭೂಮಿಗೆ ಮೈಲಾರ ಶುಗರ್ಸ್ ತ್ಯಾಜ್ಯ


ಮೈಲಾರ ಶುಗರ್ಸ್ ಕಾರ್ಖಾನೆ ರಾಸಾಯನಿಕ ತ್ಯಾಜ್ಯವು ಸುತ್ತಮುತ್ತಲ ರೈತರ ಜಮೀನುಗಳಲ್ಲಿ ಹರಿಯುತ್ತಿದ್ದು, ಕೃಷಿಭೂಮಿ ಸತ್ವ ಕಳೆದುಕೊಳ್ಳುತ್ತಿದೆ. ಕಾರ್ಖಾನೆ ಸುತ್ತಮುತ್ತಲ ಪ್ರದೇಶ ಕಲುಷಿತಗೊಳ್ಳುತ್ತಿದ್ದರೂ ಬಾಧಿತ ಪ್ರದೇಶದಲ್ಲಿ ಸಿಎಸ್ ಆರ್ ನಿಧಿಯನ್ನು ಖರ್ಚು ಮಾಡುತ್ತಿಲ್ಲ ಎಂದು ಮುಖಂಡ ಗುಂಡಿ ಚರಣರಾಜ್ ಗಮನ ಸೆಳೆದರು. ಕಾರ್ಖಾನೆಗೆ ನೋಟಿಸ್ ನೀಡಲು ಡಿಸಿ ಸೂಚಿಸಿದರು.

# ಗರಗಪಳ್ಳಿ ಗ್ರಾ.ಪಂ.ಜನಪ್ರತಿನಿಧಿಗಳಿಂದ ವಿವಿಧ ಬೇಡಿಕೆಗಳು ಈಡೇರಿಸಲು, ಕಾರ್ಖಾನೆ ಎದುರು ಪ್ರತಿಭಟನೆ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಗರಗಪಳ್ಳಿ ಗ್ರಾಮ ಪಂಚಾಯತ ಜನಪ್ರತಿನಿಧಿಗಳಿಂದ 2025-26ನೇ ಸಾಲಿನ ತೆರಿಗೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಚೆಟ್ಟಿನಾಡು ಸಿಮೆಂಟ್ ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಚೆಟ್ಟಿನಾಡು ಕಾರ್ಖಾನೆಯ ಎದುರು ಗರಗಪಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ಗ್ರಾಮದ ಮುಖಂಡರು ಧರಣಿ ಸತ್ಯಾಗ್ರಹ ನಡೆಸಿ ಪ್ರಮುಖ ಬೇಡಿಕೆಗಳಾದ ಗರಗಪಳ್ಳಿ ಪ್ರೌಢಶಾಲೆಯ ಆಟದ ಮೈದಾನ ನಿರ್ಮಾಣ, ಗರಗಪಳ್ಳಿ ಪ್ರೌಢಶಾಲೆಯ ವಿದ್ಯುತ್ ಪರಿವರ್ತಕ ಅಳವಡಿಸಿ, ಕುಂಚಾವರಂ ವೃತ್ತದಿಂದ ಗಣಾಪೂರವರೆಗೆ ಸಿಸಿರಸ್ತೆ ನಿರ್ಮಿಸಿ, ಗರಗಪಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಬುಲೇನ್ಸ್ ವ್ಯವಸ್ಥೆ, ಗ್ರಾ.ಪಂ.ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಿ, ಹಳ್ಳಿಗಳಲ್ಲಿ ಸಿಸಿರಸ್ತೆ ಚರಂಡಿ ನಿರ್ಮಿಸಿಕೊಡಿ, ರಾಮತೀರ್ಥ, ಪರದಾರ ಮೋತಕಪಳ್ಳಿ, ಬೆಡಕಪಳ್ಳಿ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿ, ಗ್ರಾಮದಲ್ಲಿ ಗ್ರಾಂಥಾಲಯ ವ್ಯವಸ್ಥೆ, ಎಲ್ಲಾ ಹಳ್ಳಿಗಳ ಶಾಲೆಗಳಿಗೆ ಕಾರ್ಖಾನೆಯಿಂದ ಅತಿಥಿ ಶಿಕ್ಷಕರಿಗೆ ನೇಮಿಸಿ, ಗ್ರಾ.ಪಂ.ವ್ಯಾಪ್ತಿಯ ಎಲ್ಲಾ ಗ್ರಾಮಗಳು ದತ್ತು ಪಡೆದು ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಎಲ್ಲಾ ಬೇಡಿಕೆಗಳನ್ನು ಶೀಘ್ರದಲ್ಲೇ ಈಡೇರಿಸುವಂತೆ ಒತ್ತಾಯಿಸಿದ ಮನವಿಪತ್ರವನ್ನು ಗ್ರಾ.ಪಂ.ಸದಸ್ಯ ಕೆ.ಮಹೇಶಕುಮಾರ ಓದಿ ಚೆಟ್ಟಿನಾಡು ಸಿಮೆಂಟ್ ಕಾರ್ಖಾನೆ ವ್ಯವಸ್ಥಾಪಕ ಶೇಖರ ಬಾಬು ಅವರಿಗೆ ಸಲ್ಲಿಸಿದರು.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಗ್ರಾ.ಪಂ.ಅಧ್ಯಕ್ಷೆ ಪಾರ್ವತಿ, ಉಪಾಧ್ಯಕ್ಷೆ ಶಾಂತಮ್ಮ, ರೇವಣಸಿದ್ದಯ್ಯ ಸ್ವಾಮಿ, ಸಂಜೀವಕುಮಾರ, ಶ್ರೀ ದೇವಿ, ಚೆನ್ನಮ್ಮ, ದೇವೇಂದ್ರ, ಜಗಜೀವನರೆಡ್ಡಿ, ನೀಲಕಂಠ ಕೆಕೆ, ಮಾಲಾಶ್ರೀ, ಕೃಷ್ಣರಾಜ, ಚಂದ್ರಶೇಖರ ರೆಡ್ಡಿ, ಮಹೇಶ ಸೇರಿದಂತೆ ಅನೇಕರಿದ್ದರು.

# ಮತೀಯ ಶಕ್ತಿಗಳಿಂದ ಕವಿಗಳು, ಜನ ಎಚ್ಚರದಿಂದಿರಿ

## ಅಖಿಲ ಕರ್ನಾಟಕ ದ್ವಿತೀಯ ಗಜಲ್ ಸಮ್ಮೇಳನದಲ್ಲಿ ಕವಿ ಕಾಶಿನಾಥ ಅಂಬಲಗೆ ಸಲಹೆ

• ಉದಯವಾಹಿನಿ, ಬೀದರ್:

ಮತೀಯ ಶಕ್ತಿಗಳಿಂದ ಕವಿಗಳು ಹಾಗೂ ಜನ ಬಹಳ ಎಚ್ಚರದಿಂದ ಇರುವ ಅಗತ್ಯವಿದೆ ಎಂದು ಅಖಿಲ ಕರ್ನಾಟಕ ದ್ವಿತೀಯ ಗಜಲ್ ಸಮ್ಮೇಳನದ ಸರ್ವಾಧ್ಯಕ್ಷ, ಕವಿ ಕಾಶಿನಾಥ ಅಂಬಲಗೆ ಸಲಹೆ ನೀಡಿದರು. ಕರ್ನಾಟಕ ಗಜಲ್ ಅಕಾಡೆಮಿ, ಅತಿವಾಳೆ ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದಲ್ಲಿ ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಅಖಿಲ ಕರ್ನಾಟಕ ದ್ವಿತೀಯ ಗಜಲ್ ಸಮ್ಮೇಳನದ ಸರ್ವಾಧ್ಯಕ್ಷತೆ ಭಾಷಣದಲ್ಲಿ ಹೇಳಿದರು. ದೇಶದಲ್ಲಿ ಮತೀಯ ಶಕ್ತಿಗಳು ಅಧಿಕಾರಕ್ಕೆ ಬಂದು ಕುಳಿತಿವೆ. ಅದೇ ಶಕ್ತಿಗಳು ದೇಶದಲ್ಲಿ ಕೋಮುವಾದ ಬಿತ್ತುತ್ತಿದ್ದಾರೆ. ಅವರಿಂದ ಎಚ್ಚರದಿಂದ ಇರಬೇಕಾದ ಅಗತ್ಯವಿದೆ ಎಂದರು. ಗಜಲ್ ಮೂಲಕ ದಯೆ, ಕರುಣೆ, ಕ್ಷಮೆ, ಸಮತೆ, ಸಹೃದಯತೆಗಳಿಗೆ ಶರಣಾಗಿ ಬುದ್ಧ, ಬಸವ, ಅಂಬೇಡ್ಕರ್, ಕಬೀರ ಹಾಗೂ ಇತರೆ ಸಂತ ಮಹಾಂತರ ದಾರಿಯ ಪಯಣಿಗರಾಗಲು ಪ್ರಯತ್ನಿಸೋಣ ಎಂದರು. ಇಂದು ನಮ್ಮ ಬದುಕಿನಲ್ಲಿ ಜನಪರ, ಜೀವಪರ ಭಾವಗಳೆಲ್ಲ ಮಾಯವಾಗಿ ಮನುಷ್ಯರಲ್ಲಿ ಮನುಷ್ಯತ್ವದ ವಿರುದ್ಧವೆ ಒಳಸಂಚು ನಡೆಯುತ್ತಿದೆಯೇ ಎಂಬ ಭಾವ ಬರತೊಡಗಿದೆ. ಸುಳ್ಳಿನ ಭ್ರಮೆಗಳ ಸಮೃದ್ಧ ಬೆಳೆ ಬೆಳೆಯಲಾಗುತ್ತಿದೆ. ಬೆವರು ಸುರಿಸದವರು ಬೆವರಿನ ಫಲ ತಮ್ಮದಾಗಿಸಿಕೊಳ್ಳಲು ಹವಣಿಸುತ್ತಿದ್ದಾರೆ ಎಂದು ವಿಷಾದಿಸಿದರು.

ಸಮಾಜದಿಂದ ಕವಿ ಬೆಳೆಯುತ್ತಾನೆ. ಅದೇ ರೀತಿ ಸಮಾಜದ ಹಿತಕ್ಕಾಗಿ ಕವಿಗಳಾದವರು ಕೆಲಸ ಮಾಡಬೇಕು. ಅದು ಕವಿಯ ಕರ್ತವ್ಯ ಕೂಡ ಹೌದು. ಗಜಲ್ ಕಾವ್ಯ ವಿಶ್ವ ಪರ್ಯಟನೆ ಕೈಗೊಂಡು ಜಾಗತೀಕವಾದ ಪ್ರೀತಿ, ಪ್ರೇಮಗಳ ಸುಗಂಧ ಹೊತ್ತುಕೊಂಡು ಕನ್ನಡ ಕಾವ್ಯಲೋಕದಲ್ಲಿ ನೆಲೆನಿಂತ ಬೆರುಗು ಗಜಲ್ ಅಫ್ಘಾನಿಸ್ತಾನದ ಯಾವುದೋ ನಾಡಿನಲ್ಲಿ ಜನ್ಮ ತಳೆದ ಕಾವ್ಯ. ಅಲ್ಲಿಂದ ಇರಾನ್ ತೆರಳಿ ಅಲ್ಲಿ ಆಗಲೇ ಇದ್ದಿರಬಹುದಾದ ರಣಗೀತೆಗಳ ಜಾನಪದೀಯ ಪಲಕುಗಳಿಂದ ಒಂದಿಷ್ಟು ಪಡೆದುಕೊಂಡು, ಕೊಟ್ಟುಕೊಂಡು ಭಾರತ ಪ್ರವೇಶಿಸಿದೆ. ಇಲ್ಲಿ ಉರ್ದು, ಹಿಂದಿಯೊಂದಿಗೆ ಸರಡವಾಡಿ ಕನ್ನಡಕ್ಕೆ ಪ್ರವೇಶಿಸಿದೆ ಎಂದು ವಿವರಿಸಿದರು.



ಉದಯವಾಹಿನಿ ಚಿತ್ರ

> ಕಾವ್ಯ ಯುದ್ಧ ವಿರೋಧಿ ಹಿಂಸೆಯ ವಿರೋಧಿಯಾಗಿರುತ್ತದೆ. ಅದು ಒಟ್ಟಂದದಲ್ಲಿ ಅಹಿಂಸಾಪರವಾಗಿರುತ್ತದೆ. ಪ್ರಶ್ನಾತೀತ ಪ್ರೀತಿಯಿಂದ ತುಂಬಿ ತುಳುಕುತ್ತದೆ. ಕವಿತೆ ಎನ್ನುವುದು ಬಹಳ ಖತರ್‌ನಾಕ್ ಕೂಡ ಆಗಿರುತ್ತದೆ. ಆದರೆ ಸರ್ವಾಧಿಕಾರಿ ಆಳುವ ವರ್ಗಕ್ಕಷ್ಟೇ.
>
> -ಕಾಶಿನಾಥ ಅಂಬಲಗೆ ಕವಿ

ಕನ್ನಡ ಕಾವ್ಯದಲ್ಲಿ ಈಗ ಗಜಲ್ ಬಿರುಗಾಳಿ ಎದ್ದಿದೆ. ಕನ್ನಡದಲ್ಲಿ ಈಗ ಸಾವಿರಕ್ಕೂ ಹೆಚ್ಚು ಗಜಲ್ ಕವಿಗಳಿದ್ದಾರೆ. ಹನ್ನೆರಡನೇ ಶತಮಾನದಲ್ಲಿ ಕಾಯಕ ಜೀವಿಗಳು ಕಟ್ಟಿಕೊಟ್ಟ ವಚನ ಚಳವಳಿ ದುಡಿಯುವ ವರ್ಗದ ಸಾಹಿತ್ಯ ಸಾಂಸ್ಕೃತಿಕ ಕೊಡುಗೆಯಾಗಿದೆ. ವಚನ ಸಾಹಿತ್ಯದಿಂದ ಕನ್ನಡ ಸಾಹಿತ್ಯ ಶ್ರೀಮಂತಗೊಂಡಿದೆ. ಇಂತಹ ಸಮೃದ್ಧ ಕನ್ನಡ ಕಾವ್ಯ ಪರಂಪರೆಯ ನಾವುಗಳು ಗಜಲ್ ಕಾವ್ಯ ಸಮ್ಮೇಳನ ನಡೆಸುತ್ತಿರುವುದು ಶ್ಲಾಘನಾರ್ಹ ಎಂದು ವರ್ಣಿಸಿದರು.

ಗಜಲ್, ಭಾಷೆಯನ್ನು ಪರೀಕ್ಷೆಗೆ ಒಡ್ಡಬಲ್ಲ ಪ್ರಕಾರ. ಭಾಷೆಯೊಂದು ದಕ್ಕಿಸಿಕೊಂಡಿರುವ ಮಾಧುರ್ಯ, ರೂಪಕ ಶಕ್ತಿ, ನಾದ ಇತ್ಯಾದಿಗಳನ್ನು ಸೂರೆ ಮಾಡುವ ಶಕ್ತಿಯಿದೆ ಎಂದರು.

ಸಮ್ಮೇಳನದ ಉದ್ಘಾಟನೆ ನೆರವೇರಿಸಿದ ಮಂಗಳೂರಿನ ಹಿರಿಯ ಗಜಲ್ ಕವಿ ಮುಹಮ್ಮದ್ ಬಡ್ಡರು ಮಾತನಾಡಿ, ಕೆಡುಕರು ಸಾಹಿತಿಗಳಾಗುತ್ತಿರುವುದು ದುರಂತದ ಸಂಗತಿ. ಸಾಹಿತ್ಯದ ಪ್ರಕಾರದಲ್ಲಿ ಅತ್ಯಂತ ಕಠಿಣವಾದುದು ಕಾವ್ಯ, ಅದರಲ್ಲೂ ಗಜಲ್. ಇಂತಹ ಸಾಹಿತ್ಯ ಹೆಚ್ಚೆಚ್ಚ ಬೆಳೆಯುವ ಅಗತ್ಯವಿದೆ ಎಂದು ತಿಳಿಸಿದರು.

### ಪುಸ್ತಕ ಓದಿದರೆ ಜ್ಞಾನಿಗಳ ಒಡನಾಟದಂತೆ

ಪುಸ್ತಕಗಳು ಜ್ಞಾನದ ಭಂಡಾರ. ಪುಸ್ತಕಗಳನ್ನು ಓದಿರೆ ಜ್ಞಾನಿಗಳು ಚಿಂತಕರೊಂದಿಗೆ ಒಡನಾಡಿದ ಅನುಭವ ಆಗುತ್ತದೆ. ನಮ್ಮ ಜ್ಞಾನ ವಿಸ್ತಾರವಾಗುತ್ತದೆ' ಎಂದು ಕವಿ ಕಾಶಿನಾಥ ಅಂಬಲಗೆ ಹೇಳಿದರು. ಪುಸ್ತಕ ಬರೆಯುವುದು ಓದುವುದು ಅದರ ಬಗ್ಗೆ ಚರ್ಚಿಸುವ ಕಾರ್ಯಕ್ರಮಕ್ಕಿಂತ ದೊಡ್ಡ ಕಾರ್ಯಕ್ರಮ ಮತ್ತೊಂದಿಲ್ಲ. ಒಂದು ಉತ್ತಮ ಕಾವ್ಯದಿಂದ ಉತ್ತಮ ಸಮಾಜ ರೂಪುಗೊಳ್ಳಲು ಸಾಧ್ಯವಿದೆ. ಇದರಿಂದ ಸಾಹಿತ್ಯ ಪುಸ್ತಕಗಳ ಮಹತ್ವ ಅರಿಯಬಹುದು ಎಂದರು.

## ಮಿನಿ ನ್ಯೂಸ್

### ಮನೆಯಂಗಳವೇ ಸುಸ್ಥಿರ ಜೀವನದ ನೆಲೆ ತಾರಸಿ ತೋಟದ ಮಹತ್ವ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮುದ್ದೇಬಿಹಾಳ

ಮನೆಮೇಲ್ಚಾವಣಿ, ಅಂಗಣದಲ್ಲಿ ತಾರಸಿ ತೋಟ ಬೆಳೆಸುವುದರಿಂದ ನಾವು ಆರೋಗ್ಯಕರ, ರೋಗಮುಕ್ತ ಜೀವನ ನಡೆಸಬಹುದು ಎಂದು ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯ ಸದಸ್ಯ ರಾಜೇಂದ್ರ ಹೆಗಡೆ ಹೇಳಿದರು. ಪಟ್ಟಣದ ಲಯನ್ಸ್ ಕ್ಲಬ್, ವೀರಶೈವ ಲಿಂಗಾಯತ ಮಹಾಸಭಾ, ಹಸಿರು ತೋರಣ ಗೆಳೆಯರ ಬಳಗದ ಆಶ್ರಯದಲ್ಲಿ ನಡೆದ ಸುಸ್ಥಿರ ಜೀವನಕ್ಕೆ ತಾರಸಿ ತೋಟ ವಿಷಯದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಮಾರುಕಟ್ಟೆಯ ತರಕಾರಿ ಹಣ್ಣುಗಳಲ್ಲಿ ರಾಸಾಯನಿಕ, ಕೀಟನಾಶಕ, ಮಲೀನ ನೀರಿನ ಬಳಕೆಯಿಂದ ಆರೋಗ್ಯ ಹಾಳಾಗುತ್ತಿದೆ. ಪ್ರತಿದಿನ 40ಕ್ಕೂ ಹೆಚ್ಚು ವಿಷಪದಾರ್ಥಗಳು ನಮ್ಮ ಹೊಟ್ಟೆಗೆ ಸೇರುತ್ತಿವೆ. ಇದನ್ನು ತಡೆಗಟ್ಟಲು ಮನೆಯಂಗಳ, ತಾರಸಿನಲ್ಲಿ ಮಡಿಕೆ, ಕುಂಡಗಳಲ್ಲಿ ತರಕಾರಿ ಬೆಳೆದು ಸಾವಯವ ಆಹಾರ ಸೇವಿಸುವುದು ಉತ್ತಮ. ಆರೋಗ್ಯಕರ ಪರಿಸರಕ್ಕಾಗಿ ಪ್ರತಿಯೊಬ್ಬರೂ ಕನಿಷ್ಠ ಏಳು ಮರಗಳನ್ನು ಬೆಳೆಸಬೇಕು ಎಂದು ಅವರು ಸಲಹೆ ನೀಡಿದರು. ಕಾರ್ಯಕ್ರಮವನ್ನು ಹಸಿರು ತೋರಣ ಬಳಗದ ಸಂಚಾಲಕ ಮಹಾಬಲೇಶ್ವರ ಗಡೇದ ಉದ್ಘಾಟಿಸಿದರು. ಲಯನ್ಸ್ ಕ್ಲಬ್ ಅಧ್ಯಕ್ಷ ವೆಂಕನಗೌಡ ಪಾಟೀಲ, ಶಸ್ತ್ರಚಿಕಿತ್ಸಕ ಡಾ.ಉತ್ಕರ್ಷ ನಾಗೂರ ಮಾರ್ಗದರ್ಶನ ನೀಡಿದರು. ಅನೇಕ ಸಂಘಟನೆಗಳ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಲಯನ್ ಮಲ್ಲಿಕಾರ್ಜುನ ಬಿದರಕುಂದಿ ನಿರೂಪಿಸಿದರು.

### ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳ್ಳತನ ಮೂವರು ಕಳ್ಳರು ಅರೆಸ್ಟ್

• ಉದಯವಾಹಿನಿ, ದಾವಣಗೆರೆ

ಮನೆ ಬೀಗ ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, ನಗದು ದೋಚಿದ್ದ ಮೂವರು ಕುಖ್ಯಾತ ಅಂತರರಾಜ್ಯ ಕಳ್ಳರನ್ನು ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಗಳನ್ನು ರಾಜಸ್ಥಾನ ಮೂಲದ ಶ್ಯಾಮ್ ಸಿಂಗ್ (28) ಕವರ್ ಪಾಲ್(24) ಪ್ರತಾಪ್ ಸಿಂಗ್ (33) ಎಂದು ಗುರುತಿಸಲಾಗಿದೆ.



ಆರೋಪಿಗಳಿಂದ 15.37 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಬೆಳ್ಳಿ ಆಭರಣಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿಗಳು ಆ.30ರಂದು ವಿದ್ಯಾನಗರ ನಿವಾಸಿ ರಂಗನಾಥ ಎಂಬವರ ಮನೆಯ ಇಂಟರ್ ಲಾಕ್ ಒಡೆದು ನುಗ್ಗಿ ಚಿನ್ನಾಭರಣ, ಬೆಳ್ಳಿ ಆಭರಣ ದೋಚಿ ಪರಾರಿಯಾಗಿದ್ದರು. ರಂಗನಾಥ ಅವರು ಸೆ.1 ರಂದು ಬೆಂಗಳೂರಿಂದ ಮನೆಗೆ ವಾಪಸ್ ಆದ ವೇಳೆ ಪ್ರಕರಣ ಬೆಳಕಿಗೆ ಬಂದಿತ್ತು. ಈ ಸಂಬಂಧ ವಿದ್ಯಾನಗರ ಪೊಲೀಸ್ ಠಾಣೆಗೆ ಅವರು ದೂರು ನೀಡಿದ್ದರು.

ಆರೋಪಿಗಳ ಪತ್ತೆಗೆ ವಿದ್ಯಾನಗರ ಠಾಣೆ ಸಿಪಿಐ ಶಿಲ್ಪಾ ವೈ.ಎಸ್ ಅವರ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿತ್ತು. ಗುಜರಾತ್‌ನ ಸೂರತ್ ಸಿಟಿ ಸಾರೋಲಿ ಪೊಲೀಸ್ ಠಾಣೆಯ ಪೊಲೀಸರ ಸಹಕಾರದಿಂದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಬಂಧಿತರಿಂದ 12.97 ಲಕ್ಷ ರೂ. ಮೌಲ್ಯದ 162.150 ಗ್ರಾಂ ತೂಕದ ಬಂಗಾರದ ಆಭರಣಗಳು, 1.08 ಲಕ್ಷ ಮೌಲ್ಯದ 1350 ಗ್ರಾಂ ತೂಕದ ಬೆಳ್ಳಿ ವಸ್ತುಗಳು, 95 ನಗದು, 34 ಸಾವಿರ ರೂ. ಬೆಲೆಯ 6 ಮೊಬೈಲ್, 3 ಸಾವಿರ ಬೆಲೆಯ ಎರಡು ವಾಚ್‌ಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ದಾವಣಗೆರೆ ಜಿಲ್ಲೆಯ ಹರಿಹರ ನಗರ ಠಾಣೆ, ಹಳಿಯಾಳ ಠಾಣೆ, ಧಾರವಾಡ, ತುಮಕೂರು ಬಡಾವಣೆ, ತಿಪಟೂರು, ಮದ್ಯಪ್ರದೇಶದ ಭೂಪಾಲ್ ಸೇರಿದಂತೆ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ತನಿಖೆ ವೇಳೆ ಗೊತ್ತಾಗಿದೆ.

### ಕಲಾವಿದರಿಗೆ ಪ್ರೋತ್ಸಾಹ ಅಗತ್ಯ

• ಉದಯವಾಹಿನಿ, ಮಹಾಲಿಂಗಪುರ

ಆಧುನಿಕತೆ ಪ್ರಭಾವದಿಂದ ಗ್ರಾಮೀಣ ಭಾಗದ ಕಲಾವಿದರು ತೆರೆಮರೆಗೆ ಸರಿಯುತ್ತಿದ್ದು, ಅವರಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಚಿಮ್ಮಡ ವಿರಕ್ತ ಮಠದ ಪ್ರಭು ಸ್ವಾಮೀಜಿ ಹೇಳಿದರು. ಸಮೀಪದ ಚಿಮ್ಮಡ ಗ್ರಾಮದಲ್ಲಿ ಪ್ರಭುಲಿಂಗೇಶ್ವರ ಜಾತ್ರೆ ಅಂಗವಾಗಿ, ರಾತ್ರಿ ಪ್ರಭುಲಿಂಗೇಶ್ವರ ಕಲೆ ಮತ್ತು ಸಾಂಸ್ಕೃತಿಕ ನಾಟ್ಯ ಸಂಘದಿಂದ ಹಮ್ಮಿಕೊಂಡ ಶೆರೆ ಅಂಗಡಿ ಸಂಗವ್ವ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು. ನಾಟಕಗಳಿಗೆ ಸಂಗೀತ ಕಲಾವಿದರೇ ಜೀವಾಳವಾಗಿದ್ದಾರೆ. ನಾಟಕದ ಪ್ರತಿ ಸನ್ನಿವೇಶಗಳಿಗೆ ತಕ್ಕಂತೆ ಸುಶ್ರಾವ್ಯವಾಗಿ ಹಾಡಿ, ಸಂದರ್ಭಕ್ಕೆ ತಕ್ಕಂತೆ ಸಂಗೀತದ ಮೂಲಕ ಮನಸು ಮುದಗೊಳಿಸುವ ಕಲಾವಿದರ ಸಂಖ್ಯೆ ಕ್ಷೀಣಿಸುತ್ತಿದೆ ಎಂದರು.

### ಕನ್ನಡದ ಕೆಲಸಗಳಿಗೆ ಕಷ್ಟಗಳು ಬರದಿರಲಿ

• ಉದಯವಾಹಿನಿ, ತೇರದಾಳ

ನಾಡು ನುಡಿ, ಇಲ್ಲಿನ ಜಲ ಗಡಿ ವಿಚಾರಗಳಲ್ಲಿ ಕನ್ನಡಿಗರು ಬಹಳ ಹೋರಾಟ ಮಾಡಿದ್ದೇವೆ. ಹಾಗಾಗಿ ಕನ್ನಡದ ಕೆಲಸಗಳಿಗೆ ಕಷ್ಟಗಳು ಬರದಂತೆ ಸಾಗಲಿ ಎಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು. ಪಟ್ಟಣದ ಪ್ರಭುಲಿಂಗೇಶ್ವರ ಪ್ರಸಾದ ಸಮಿತಿ ಸಭಾ ಭವನದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತು ತೇರದಾಳ ತಾಲ್ಲೂಕು ಘಟಕದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಅವರು ಮಾತನಾಡಿದರು.

ಎಲೆ ಮರೆಯ ಕಾಯಿಯಂತೆ ಕನ್ನಡ ಮಾತೆಯ ಸೇವೆ ಮಾಡುವ ಕನ್ನಡಾಭಿಮಾನಿಗಳನ್ನು ಗುರುತಿಸುವ ಮೂಲಕ ಪರಿಷತ್ತು ಬೆಳೆಯಬೇಕು ಎಂದರು. ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ ಮಾತನಾಡಿ, ಬೆಡಗಿನ ವಚನಕಾರ ಅಲ್ಲಮಪ್ರಭುಗಳ ನಾಡಿನಲ್ಲಿ ಸಾಹಿತ್ಯ ಚಟುವಟಿಕೆಗಳು ಇನ್ನಷ್ಟು ಹೆಚ್ಚಬೇಕು. ಜಗತ್ತಿನೆಲ್ಲೆಡೆ ಅಲ್ಲಮರ ವಚನಗಳು ಪಸರಿಸಿದಂತೆ ಇಲ್ಲಿನ ಸಾಹಿತಿಗಳು ರಚಿಸುವ ಸಾಹಿತ್ಯ ವಿಶ್ವದಾದ್ಯಂತ ಹೆಸರು ಮಾಡಲಿ, ತೇರದಾಳ ತಾಲ್ಲೂಕು ಘಟಕದಿಂದ ಇನ್ನಷ್ಟು ಸಾಹಿತ್ಯ ಕೃಷಿ ಜರುಗಲಿ ಎಂದರು. ಪುರಸಭೆ ಅಧ್ಯಕ್ಷೆ ಶಿಲ್ಪಾ ಗೌತಮ ರೋಡಕರ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯನ್ನು ವಿವರಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣವನ್ನು ಗಳಿಸುವಿರಿ.

**ವೃಷಭ** ನಿಮ್ಮ ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ. ಧಾರ್ಮಿಕ ಸ್ಥಳಕ್ಕೆ, ಸಂಬಂಧಿಗಳ ಭೇಟಿ ಸಾಧ್ಯವಿದೆ. ನಿಮ್ಮ ಇಡೀ ಜೀವನದಲ್ಲಿ ಈ ದಿನವನ್ನು ಎಂದಿಗೂ ಮರೆಯುವುದಿಲ್ಲ.

**ಮಿಥುನ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ನಿಮ್ಮ ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ. ನೆರೆಮನೆಯವರ ಜೊತಗಿನ ಜಗಳ ನಿಮ್ಮ ಮನಸ್ಸು ಕೆಡಿಸುತ್ತದೆ. ಆದರೆ ನಿಮ್ಮ ಸಹನೆ ಕಳೆದುಕೊಳ್ಳಬೇಡಿ.

**ಕರ್ಕಾಟಕ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ. ಸಂಬಂಧಿಕರು, ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.

**ಸಿಂಹ** ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡಬಹುದು. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು.

**ಕನ್ಯಾ** ಕೆಲಸ, ಮನೆಯಲ್ಲಿನ ಕೆಲವು ಒತ್ತಡ ನಿಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಆರ್ಥಿಕ ಯೋಜನೆಯನ್ನು ಮಾಡಬಹುದು, ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಆನಂದದ ಕ್ಷಣಗಳನ್ನು ತೆರೆದಿಡುತ್ತದೆ.

**ತುಲಾ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ, ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಇಂದು ನೀವು ಲಾಭ ಪಡೆಯುತ್ತೀರಿ

**ವೃಶ್ಚಿಕ** ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ಮನೆಯಲ್ಲಿನ ಪರಿಸ್ಥಿತಿಗಳಿಂದ ನಿಮಗೆ ಅಸಮಾಧಾನ ಉಂಟಾಗಬಹುದು. ಸ್ನೇಹ ಆಳವಾದ ಹಾಗೆ ಪ್ರಣಯ ನಿಮ್ಮೆಡೆ ಬರುತ್ತದೆ.

**ಧನಸ್ಸು** ಕೆಲವು ಅನಿವಾರ್ಯ ಸಂದರ್ಭ ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು, ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ಹಳೆಯ ಸಂಪರ್ಕಗಳು, ಸ್ನೇಹಿತರು ಸಹಾಯ ಮಾಡುತ್ತಾರೆ.

**ಮಕರ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಆಹ್ವಾನಿಸದ ಯಾವುದೇ ಅತಿಥಿ ಇಂದು ಮನೆಗೆ ಬರಬಹುದು ಆದರೆ ಈ ಅತಿಥಿಯ ಅದೃಷ್ಟದ ಕಾರಣದಿಂದ ಇಂದು ನೀವು ಆರ್ಥಿಕ ಲಾಭವನ್ನು ಪಡೆಯಬಹುದು. ಕುಟುಂಬ ಮತ್ತು ಸ್ನೇಹಿತರೊಂದಿಗೆ ಆಹ್ಲಾದಕರ ಸಮಯ ಶ್ರಮಪಡಿ.

**ಕುಂಭ** ಮಾನಸಿಕವಾಗಿ ದುರ್ಬಲರಾಗಿರುತ್ತೀರಿ, ನೀವು ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರ ಉಳಿಯಿರಿ. ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು, ಅವರಿಗೆ ಸಾಲ ಕೊಡುವುದಕ್ಕಿಂತ ಮುಂಚೆ ಅವರ ನಂಬಿಕೆಯನ್ನು ಅಗತ್ಯವಾಗಿ ಪರೀಕ್ಷಿಸಿ.

**ಮೀನ** ಮನೋಬಲದ ನಿಮ್ಮ ಕೊರತೆ ನಿಮ್ಮನ್ನು ಭಾವನಾತ್ಮಕ, ಮಾನಸಿಕ ವರ್ತನೆಯ ಬಲಿಪಶುವಾಗಿ ಮಾಡಬಹುದು. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ, ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ಒಬ್ಬ ಹಳೆಯ ಸ್ನೇಹಿತರು ಸಂಜೆ ನಿಮಗೆ ಕರೆ ಮಾಡುತ್ತಾರೆ, ಹಳೆಯ ನೆನಪುಗಳನ್ನು ತೆರೆದಿಡುತ್ತಾರೆ.


# ಬಡವರ ಬದುಕಿಗೆ ಸಂಕಷ್ಟ ಒಡ್ಡುತ್ತಿದ್ದಾರೆ: ಅಬ್ದುಲ್ ರೌಫ್

## ಪದೇಪದೇ ಗಣಿಗಾರಿಕೆ ಮೇಲೆ ದಾಳಿ ನಡೆಸಿ ಭಯದ ವಾತಾವರಣ ಸೃಷ್ಟಿ: ಸಂಸದ ಖಂಡ್ರೆಗೆ ಮನವಿ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಮಿರಿಯಾಣ, ಬೈರಂಪಳ್ಳಿ, ಕಿಷ್ಟಾಪೂರ ಗ್ರಾಮಗಳಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ ಆದರೆ ಜೇಸ್ಕಾಂ ಜಾಗೃತ ದಳ ಹಾಗೂ ಜೇಸ್ಕಾಂ ಇಲಾಖೆಯವರು ಪದೇಪದೇ ಗಣಿಗಾರಿಕೆಗೆ ಮೇಲೆ ದಾಳಿ ನಡೆಸಿ ಭಯದ ವಾತಾವರಣ ನಿರ್ಮಿಸಿ ಬಡವರ ಬದುಕಿಗೆ ಸಂಕಷ್ಟ ಒಡ್ಡುತ್ತಿದ್ದಾರೆ ಎಂದು ಆರೋಪಿಸಿ ಬೀದರ ಸಂಸದ ಸಾಗರ್ ಖಂಡ್ರೆ ಎದುರು ಮಿರಿಯಾಣ ಗ್ರಾಮದ ಕಾರ್ಮಿಕ ಮುಖಂಡ ಅಬ್ದುಲ್ ರೌಫ್ ಮನವಿಪತ್ರ ಸಲ್ಲಿಸಿದರು.

ತಾಲ್ಲೂಕಿಗೆ ಬೀದರ ಸಂಸದ ಬೆಳೆ ವಿಕ್ಷಣೆಗೆ ಆಗಮಿಸಿದ ಸಂದರ್ಭ ಕುಂಚಾವರಂ ಕ್ರಾಸ್ ಹತ್ತಿರ ಸಂಸದ ಸಾಗರ್ ಖಂಡ್ರೆಗೆಯವರಿಗೆ ನಿಯೋಗ ಭೇಟಿಯಾಗಿ ಗಣಿಗಾರಿಕೆ ಕುರಿತು ಮೌಖಿಕ ಮಾಹಿತಿ ನೀಡಿ ಮನವಿ ಸಲ್ಲಿಸಿದ ಅವರು, ಶಾಹಬಾದ ಮಾದರಿ ಕಲ್ಲುಗಣಿಗಾಣಿಕೆ ಉದ್ಯಾಮಿದಾರರು ಸರ್ಕಾರದಿಂದ ಪರವಾನಿಗೆ ಪಡೆದು ಗಣಿಗಾರಿಕೆ ನಡೆಸುತ್ತಿದ್ದೇವೆ ಆದರೆ ಪದೇ ಪದೇ ದಾಳಿ ನಡೆಸಿ ಬಡವರ ಉದ್ಯಾಮಿದಾರರು ಮೇಲೆ ಬರೆ ಏಳೆಯುವ ಕೆಲಸ ಅಧಿಕಾರಿಗಳು ಮಾಡುತ್ತಿದ್ದಾರೆ ಎಂದು ನೋವು ತೋಡಿಕೊಂಡರು.


ಉದಯವಾಹಿನಿ ಚಿತ್ರ

**ಸಮಗ್ರ ತನಿಖೆ ನಡೆಸಿ**

ಸರ್ಕಾರ ಮೊದಲು 20ಗುಂಟೆ ಜಮೀನು ಮೇಲೆ ಪರವಾನಿಗೆ ನೀಡುತ್ತಿತ್ತು ಈಗ ಏಕಾಏಕಿ 02 ಏಕರೆಗೆ ಗಣಿಗಾರಿಕೆ ನಡೆಸಲು ಪರವಾನಿಗೆ ನೀಡುತ್ತಿದೆ ಇದರಿಂದ ಗಣಿಗಾರಿಕೆ ಲೀಜ್ ಪಡೆಯಲು ಬಹಳಷ್ಟು ಕಷ್ಟಕರವಾಗಿದೆ, ಸರ್ಕಾರ ಗಮನಹರಿಸಿ ಏಕರೆಯಷ್ಟು ಜಮೀನಿಗೆ ಲೀಜ್ ಕೊಡಬೇಕು ಹಾಗೂ ಗಣಿಗಾರಿಕೆ ನಡೆಸುವ ವಿಧಾನಗಳು ಸಡಿಲಗೊಳಿಸಬೇಕು. ಅಧಿಕಾರಿಗಳು ಆಕ್ರಮ ಗಣಿಗಾರಿಕೆ ನಡೆಸುವವರ ಮೇಲೆ ಕ್ರಮಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ ಆದರೆ ಕೆಲ ಪ್ರಭಾವಿ ರಾಜಕೀಯ ಮುಖಂಡರಿಂದ ದೂರು ಪಡೆದು ಉದ್ದೇಶಪೂರ್ವಕವಾಗಿ ದಾಳಿ ನಡೆಸುವುದು ತಪ್ಪು, ದಾಳಿ ನಡೆಸಿದ ಮೇಲೆ ವಿದ್ಯುತ್ ಪರಿವರ್ತಕಗಳು ಗಣಿಗಾರಿಕೆಯಲ್ಲಿ ಹೇಗೆ ಬರುತ್ತವೆ, ಗಣಿಗಾರಿಕೆಗೆ ವಿದ್ಯುತ್ ಸಂಪರ್ಕ ಯಾರು ಕೊಡುತ್ತಾರೆ, ತಂತ್ತಿಗಳು ಏಲ್ಲಿಂದ ಬರುತ್ತವೆ ಎಂಬುವುದು ಒಮ್ಮೆ ಸಮಗ್ರವಾಗಿ ತನಿಖೆ ನಡೆಸಿ ಆಗ ವಿದ್ಯುತ್ ಸಂಬಂಧಿತ ಅಧಿಕಾರಿಗಳು ಸಿಬ್ಬಂದಿ ವರ್ಗದವರ ಪಾತ್ರವೇನಿದೆ ಎಂಬುವುದು ಹೊರಗಡೆ ಬರುತ್ತದೆ ಎಂದು ಸಂಸರಿಗೆ ಭೇಟಿಯಾದ ನಿಯೋಗ ಒತ್ತಾಯಿಸಿದರು. ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್, ಕಾಂಗ್ರೇಸ್ ಅಧ್ಯಕ್ಷ ಬಸವರಾಜ ಮಾಲಿ, ಅಬ್ದುಲ್ ಬಾಷೀದ್, ನಂದು ಪಾಟೀಲ, ಜಗನ್ನಾಥ ಇದಲಾಯಿ, ನರೇಶಗೌಡ, ಅಬ್ದುಲ್ ಸದ್ದಾಂ, ಅನೇಕರಿದ್ದರು.

**ಗಣಿಗಾರಿಕೆಗಳು ಕಾನೂನು ಬಾಹಿರ**

**ಕಾನೂನು ಬಾಹಿರವಾಗಿ ಯಾವುದೇ ಗಣಿಗಾರಿಕೆ ನಡೆಸುತ್ತಿಲ್ಲಾ ಅಥಹ ಯಾವುದೇ ಗಣಿಗಾರಿಕೆಗಳು ಕಾನೂನು ಬಾಹಿರವಾಗಿ ನಡೆಸುತ್ತಿದ್ದರೆ ಅಂಥಹ ಗಣಿಗಾರಿಕೆಗಳು ಸೀಜ್ ಮಾಡಿ ಅವರ ಮೇಲೆ ಪ್ರಕರಣ ದಾಖಲು ಮಾಡಲಿ ಅದನ್ನು ಬಿಟ್ಟು ಪರವಾನಿಗೆ ಪಡೆದ ಗಣಿಗಾರಿಕೆಗಳಿಗೆ ತೊಂದರೆ ಕೊಡುವುದು ಎಷ್ಟರ ಮಟ್ಟಿಗೆ ಸರಿಯಿದೆ, ಪದೇಪದೇ ಗಣಿಗಾರಿಕೆಗೆ ಮೇಲೆ ದಾಳಿ ಮಾಡುವುದರಿಂದ ಭಯದಲ್ಲಿ ಬಡವರು ಕೂಲಿಕಾರ್ಮಿಕರು ಜೀವನ ನಡೆಸುತ್ತಿದ್ದಾರೆ.**

# ಮಕ್ಕಳಲ್ಲಿನ ಸುಪ್ತ ಪ್ರತಿಭೆಗೆ ಚಿಗುರು ಪ್ರೋತ್ಸಾಹ

• **ಉದಯವಾಹಿನಿ, ಚಿತ್ರದುರ್ಗ**

ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಕಲಾ ಮಾಧ್ಯಮದ ಮೂಲಕ ಹೊರತೆಗೆಯುವ ಪ್ರಯತ್ನದ ಭಾಗವೇ ಚಿಗುರು ಕಾರ್ಯಕ್ರಮ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ ಹೇಳಿದರು. ಹೊಸದುರ್ಗ ತಾಲ್ಲೂಕಿನ ಬಾಗೂರಿನ ವಿದ್ಯಾವಾಹಿನಿ ವಿದ್ಯಾನಿಕೇತನ ಶಾಲಾ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಚಿಗುರು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಿಗುರು ಕಾರ್ಯಕ್ರಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವದ ಯೋಜನೆಯು ಹೌದು. ಇಂದು ನಮ್ಮ ಮಕ್ಕಳನ್ನು ಕೇವಲ ಪಠ್ಯಕ್ಕೆ ಸೀಮಿತಗೊಳಿಸಿದ್ದೇವೆ. ಹಾಗಾಗಿ ಅವರ ಮಾನಸಿಕ ವಿಕಾಸ ಕುಂಠಿತವಾಗಲಿಕ್ಕೆ ನಾವೇ ಕಾರಣವಾಗುತ್ತಿದ್ದೇವೆ ಎಂದು ತಿಳಿಸಿದ ಅವರು, ಇಂತಹ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು



ಉದಯವಾಹಿನಿ ಚಿತ್ರ

ತೊಡಗಿಸುವ ಮೂಲಕ ಪಠ್ಯೇತರವಾಗಿಯೂ ಅವರನ್ನು ಬೆಳೆಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಇಲ್ಲಿ ಪ್ರದರ್ಶನವಾಗುವ ಸುಗಮ ಸಂಗೀತ, ಜಾನಪ ಸಂಗೀತ, ನಾಟಕ ಇತ್ಯಾದಿಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟರು. ಚಿಗುರು ಕಾರ್ಯಕ್ರಮದ ಅಂಗವಾಗಿ ಶಾಲೋಮ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ವೇದಿಕಾ ಅವರಿಂದ ಸುಗಮ ಸಂಗೀತ, ನಾಗೇನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪಿ.ಕೆ.ಸ್ವಾಮಿ ಮತ್ತು ತಂಡದವರಿಂದ ಜಾನಪದ ಗೀತೆಗಳು, ಭೂಮಿಕಾ, ತಂಡದವರಿಂದ ಸಮೂಹ ನೃತ್ಯ, ಭುವನ್ಯ ರಾವ್, ತಂಡದವರಿಂದ ನಾಟಕ ಹಾಗೂ ವಿದ್ಯಾವಾಹಿನಿ ವಿದ್ಯಾನಿಕೇತನ ಶಾಲೆಯ ಕೆ.ಆರ್.ಬಿಂದುಶ್ರೀ ಅವರಿಂದ ಏಕ ಪಾತ್ರಾಭಿನಯ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಬಾಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹೆಚ್.ಶಾರದಮ್ಮ, ಸ್ವಾಮಿ ವಿವೇಕಾನಂದ, ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ ಅಧ್ಯಕ್ಷ ಕೆ. ಶ್ರೀನಿವಾಸ್, ಕಾರ್ಯದರ್ಶಿ ಬಿ.ಜಿ. ರಂಗನಾಥ್, ವಿದ್ಯಾವಾಹಿನಿ ವಿದ್ಯಾನಿಕೇತನ ಶಾಲೆಯ ಮುಖ್ಯ ಶಿಕ್ಷಕ ಕೆ.ಮಂಜುನಾಥ್, ಕಲಾವಿದ ಕಂಠೇಶ್ ಇದ್ದರು.


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಂಚೋಳಿ:**

**ಪಟ್ಟಣದ ಚಂದಾಪೂರ ಕಸ್ತೂರಿಭಾ ವಸತಿ ಶಾಲೆಯಲ್ಲಿ ಭಾರತದ ಮಾಜಿ ರಾಷ್ಟ್ರಪತಿ ಶಿಕ್ಷಣ ಪ್ರೇಮಿ ಡಾ:ರಾಧಾಕೃಷ್ಣನ್ ರವರ ಜನ್ಮದಿನ ನಿಮಿತ್ತ ಶಿಕ್ಷಕರ ದಿನಾಚರಣೆ ಸಮಾರಂಭ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ತಾಲ್ಲೂಕಾ ಸ್ತ್ರೀ ಶಕ್ತಿ ಒಕ್ಕೂಟದ ಅದ್ಯಕ್ಷರು, ಜಿಲ್ಲಾ ಜನಜಾಗೃತಿ ವೇದಿಕೆ ಉಪಾದ್ಯಕ್ಷೆ ನರಸಮ್ಮ ಲಕ್ಷ್ಮಣ ಆವುಂಟಿ ಉಧ್ಘಾಟಿಸಿದರು. ಈ ಸಂದರ್ಭದಲ್ಲಿ ಭಾರತ ಮುಕ್ತಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಮಾರುತಿ ಗಂಜಗಿರಿ, ದೇಗಲ್ಮಡಿ ಗ್ರಾಮ ಪಂಚಾಯತ್ ಅದ್ಯಕ್ಷ ಕಾಶಿರಾಮ ತಳವಾರ, ಶಾಲೆಯ ಮುಖ್ಯೋಪಾದ್ಯಾಯ ಫಾಳಮ್ಮ ಶಿಂದೆ, ಮೇಲ್ವಾಚಾರಕಿ ಜ್ಯೋತಿ, ಶಿಕ್ಷಕರಾದ ರಾಧಾ, ಅಸಿಲಾ ಆರ್ ಕೆ, ತಾರಾ ನಾಯಿಕೊಡಿ, ವಿಜಯಲಕ್ಷ್ಮಿ, ಮಧುಮತಿ, ಮೇಘಾರಾಣಿ, ಉಜ್ಮಾ, ಅನಿತಾ ವಿಧ್ಯಾರ್ಥಿನಿಯರು ಇದ್ದರು.**

# ವಿವೇಕ ಪೂರ್ಣಿಮ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಕಾರ್ಯ

• **ಉದಯವಾಹಿನಿ, ಸಿಂಧನೂರು**

ನಗರದ ಬಪ್ಪರು ರಸ್ತೆಯ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಅನಂತನ ಹುಣ್ಣಿಮೆಯ ಅಂಗವಾಗಿ ವಿವೇಕ ಪೂರ್ಣಿಮ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ವಿಶೇಷ ಆಹ್ವಾನಿತರಾಗಿ ಅಮರೇಗೌಡ ಮಲ್ಲಾಪುರ, ಕರ್ನಾಟಕ ಪರಿಸರ ಪ್ರಶಸ್ತಿ ಪುರಸ್ಕೃತರು, ಸಂಸ್ಥಾಪಕ ಅಧ್ಯಕ್ಷರು, ವನಸಿರಿ ಫೌಂಡೇಶನ್ ರಾಯಚೂರು ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಸಿ ನೆಡುವುದರಿಂದಾಗುವ ಪ್ರಯೋಜನಗಳು ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಮಾತನಾಡಿದರು.


ಉದಯವಾಹಿನಿ ಚಿತ್ರ

ನಂತರ ಪೂಜ್ಯ ಸ್ವಾಮೀಜಿಯವರಿಗೆ ವನಸಿರಿ ಫೌಂಡೇಶನ್ ವತಿಯಿಂದ ಹೂವಿನ ಸಸಿಗಳನ್ನು ನೀಡಿದರು. ಕಾರ್ಯಕ್ರಮದ ಅತಿಥಿಗಳಾದ ಮಲ್ಲಪ್ಪ ಬಿ ಅಧ್ಯಕ್ಷರು, ಸಿ.ತಾ.ಪ್ರಾ. ಶಾಲಾ ಶಿ.ಪ.ಸ.ಸಂಘ ಮುಖ್ಯ ಗುರುಗಳು, ಸ.ಹಿ.ಪ್ರಾ.ಶಾಲೆ ಕನಕನಗರ ಸಿಂಧನೂರು ಇವರು ಸ್ವಾಮಿ ವಿವೇಕಾನಂದರ ಆದರ್ಶಗಳ ಕುರಿತು ಮಾತನಾಡಿದರು. ಭಜನ ಸಂಧ್ಯಾ ಕಾರ್ಯಕ್ರಮವನ್ನು ಶ್ರೀಯಿಮ್ಮಳ್ಳ ಪದ್ಮರಾಜು ಚೌಧರಿ ಗುರುಗಳು ಪಗಡದಿನ್ನಿ ಕ್ಯಾಂಪ್ ಸಂಗಡಿಗರು ಬಹಳ ಶ್ರದ್ಧಾ ಭಕ್ತಿಯಿಂದ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ಅಧ್ಯಕ್ಷತೆಯನ್ನು ವಹಿಸಿದ್ದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಸದಾನಂದ ಮಹಾರಾಜ್ ರವರ ಆಶೀರ್ವದಿಸಿದರು. ಕಳಕಪ್ಪ ಗಡಾದ ಅವರು ನಿರೂಪಣೆ ಮಾಡಿದರು. ನಂತರ ಮಹಾಪ್ರಸಾದ ನೆರವೇರಿತು. ಈ ಸಂಧರ್ಭದಲ್ಲಿ ಸ್ವಾಮಿ ವಿವೇಕಾನಂದ ಆಶ್ರಮದ ಸರ್ವ ಭಕ್ತಾಧಿಗಳು ಉಪಸ್ಥಿತರಿದ್ದರು.

## ಶಿಕ್ಷಕರ ಪಾತ್ರ ಮಹತ್ವದ್ದು

• **ಉದಯವಾಹಿನಿ, ಮೂಡಲಗಿ**

ಮೂಡಲಗಿ ವಲಯವು ಶೈಕ್ಷಣಿಕವಾಗಿ ಸುಧಾರಿಸುವಲ್ಲಿ ನಿರ್ಗಮಿತ ಬಿಇಒ ಅಜೀತ ಮನ್ನಿಕೇರಿ ಅವರ ಪಾತ್ರ ಗಣನೀಯವಾಗಿದ್ದು, ಈಗಿರುವ ಗುಣಮಟ್ಟದ ಶಿಕ್ಷಣ ಮುಂದುವರೆಸಿಕೊಂಡು ಹೋಗಬೇಕು ಎಂದು ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ನೂತನ ಬಿಇಒ ಅವರಿಗೆ ಸಲಹೆ ನೀಡಿದರು. ತಾಲ್ಲೂಕಿನ ತಿಗಡಿ ಗ್ರಾಮದ ಉನ್ನತೀಕರಣ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಿಂದ ಆಯೋಜಿಸಿದ್ದ ಮೂಡಲಗಿ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ, ವಿವಿಧ ಸಂಘಟನೆಯವರು ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಶಾಸಕರಾರ ಮೇಲೆ 28 ಸರ್ಕಾರಿ ಶಾಲೆ ಮತ್ತು ವಸತಿ ಶಾಲೆಗಳನ್ನು ಮಂಜೂರ ಮಾಡಿಸಲಾಗಿದೆ. ಹಳ್ಳೂರ, ತುಕ್ಕಾನಟ್ಟಿ, ಖಂಡ್ರಟ್ಟಿ ಗ್ರಾಮಗಳಿಗೆ ಪ್ರಸಕ್ತ ವರ್ಷದಿಂದ ನೂತನವಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದ್ದು ಸರ್ಕಾರದ ಷರತ್ತಿನಂತೆ ಈ ಮೂರು ಶಾಲೆಗಳ ಮೂರು ವರ್ಷಗಳ ವೆಚ್ಚವನ್ನು ಸ್ವತಃ ಭರಿಸವುದಾಗಿ ತಿಳಿಸಿದರು. ಖಾಸಗಿ ಸಂಸ್ಥೆಗಳಿಗಿಂತ ಗುಣಮಟ್ಟದ ಶಿಕ್ಷಣಕ್ಕೆ ಮೂಡಲಗಿ ವಲಯವು ಗುರುತಿಸಿಕೊಂಡು ಎರಡು ಬಾರಿ ಕೇಂದ್ರ ಸರ್ಕಾರದ ಪ್ರಶಸ್ತಿ ಪಡೆದಿದ್ದು, ಫಲಿತಾಂಶದಲ್ಲಿ ಸಹ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದಿದೆ. ಇಲ್ಲಿಯ ಸರ್ಕಾರಿ ಶಾಲೆಗಳಲ್ಲಿ 50 ಸಾವಿರಕ್ಕೂ ಅಧಿಕ ಮಕ್ಕಳು ಓದುತ್ತಿರುವುದು ರಾಜ್ಯದಲ್ಲಿ 3ನೇ ಸ್ಥಾನ ಹೊಂದಿದೆ. ಇದು ಬಿಇಒ ಅಜಿತ ಮನ್ನಿಕೇರಿ ಅವರ ಅವಿರತ ಪರಿಶ್ರಮವಾಗಿದೆ ಎಂದರು.

# ಸ್ವಾವಲಂಬನೆ, ಘನತೆಯ ಬದುಕಿಗೆ ಸಾಕ್ಷರತೆ ಅಗತ್ಯ

• **ಉದಯವಾಹಿನಿ, ಕಲಬುರಗಿ**

ಸಾಕ್ಷರತೆಯು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಪ್ರಮುಖವಾದ ಅಂಶವಾಗಿದ್ದು, ವ್ಯಕ್ತಿಯನ್ನು ಸಮಾಜದಲ್ಲಿ ಘನತೆ, ಸ್ವಾವಲಂಬನೆಯಿಂದ ಬದಕಲು ಸಹಾಯ ಮಾಡುತ್ತದೆ. ಸಾಕ್ಷರತೆಯು ಉದ್ಯೋಗ, ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಜನರನ್ನು ಬಡತನ ಮತ್ತು ನಿರುದ್ಯೋಗದಿಂದ ಹೊರಬರಲು ಸಹಾಯ ಮಾಡುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣ ಪಡೆದು ಸುಶಿಕ್ಷಿತರಾಗಬೇಕು ಎಂದು ಉಪನ್ಯಾಸಕ, ಸಮಾಜ ಸೇವಕ ಎಚ್.ಬಿ.ಪಾಟೀಲ್ ಹೇಳಿದರು.

ನಗರದ ಆಳಂದ ರಸ್ತೆಯ ಶಿವ ನಗರದಲ್ಲಿನ ಶ್ರೀಮಲ್ಲಿನಾಥ ಮಹಾರಾಜ ಟ್ಯುಟೋರಿಯಲ್ಸ್ ನಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಸೋಮವಾರ ಬೆಳಿಗ್ಗೆ ಜರುಗಿದ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಸಾಕ್ಷರತೆಯು ದುಃಖದಿಂದ ಭರವಸೆಗೆ ಸೇತುವೆಯಾಗಿದೆ.

ರಾಷ್ಟ್ರದ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಪೂರಕವಾಗಿದೆ. ಜೀವಮಾನದ ಕಲಿಕೆಗೆ ಅಡಿಪಾಯವಾಗಿ ಸಾಕ್ಷರತೆಯ ಮಹತ್ವವನ್ನು ಉತ್ತೇಜಿಸಲು ಪ್ರತಿ ವರ್ಷ ಸೋಮವಾರ ಅಂತರರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಿಸಲಾಗುತ್ತದೆ. ಪ್ರತಿಯೊಬ್ಬರೂ ಮೂಲಭೂತ ಓದುವಿಕೆ, ಬರವಣಿಗೆ ಮತ್ತು ಸಂಖ್ಯಾಶಾಸ್ತ್ರ ಕೌಶಲ್ಯಗಳನ್ನು ಪಡೆಯಲು ಅವಕಾಶವನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವ ನಿರಂತರ ಅಗತ್ಯವನ್ನು ಎತ್ತಿ ತೋರಿಸುತ್ತದೆ ಎಂದರು.


ಉದಯವಾಹಿನಿ ಚಿತ್ರ

ಸಾಕ್ಷರತೆ ಎಂದರೆ ಕೇವಲ ಓದುವ ಮತ್ತು ಬರೆಯುವ ಸಾಮರ್ಥ್ಯಕ್ಕಿಂತ ಹೆಚ್ಚಿನದು. ಇದು ಸ್ವತಂತ್ರ ಚಿಂತನೆ, ತಿಳುವಳಿಕೆಯುಳ್ಳ ನಿರ್ಧಾರ ತೆಗೆದುಕೊಳ್ಳುವಿಕೆ, ಸಾಮಾಜಿಕ ಸಂಪರ್ಕ, ವೈಯಕ್ತಿಕ ಬೆಳವಣಿಗೆಗೆ ಹೆಬ್ಬಾಗಿಲು. ಸಾಕ್ಷರರಾಗಿರುವುದು ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಪಡೆಯಲು, ಸಮಾಜದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು, ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳನ್ನು ನಿವಾರಿಸಲು, ಶಾಂತಿಯುತ ಜಗತ್ತಿಗೆ ಕೊಡುಗೆ ನೀಡಲು ಅನುವು ಮಾಡಿಕೊಡುತ್ತದೆ. 2025 ರಲ್ಲಿ ಬಹುಭಾಷಾ ಶಿಕ್ಷಣದ ಮೇಲೆ ಕೇಂದ್ರೀಕರಿಸುವ ಮೂಲಕ, ವೈವಿಧ್ಯತೆಯ ಮೌಲ್ಯ ಮತ್ತು ಕಲಿಕೆಯಲ್ಲಿ ಸ್ಥಳೀಯ ಭಾಷೆಗಳ ಪಾತ್ರವನ್ನು ಬಲಪಡಿಸುತ್ತದೆ ಎಂದು ನುಡಿದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ಶಿಕ್ಷಕಿಯರಾದ ಚಂಪಾಕಲಾ ನೆಲ್ಲೂರೆ, ಗೀತಾಂಜಲಿ ಹಡಪದ, ಮಂಜುಳಾ ನರೋಣಾ, ಸೇವಕಿ ಸಿದ್ದಮ್ಮ ಕೌಂಟೆ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಧರ್ಮಸ್ಥಳ ಪ್ರಕರಣದಲ್ಲಿ ಸೌಜನ್ಯ ಮಾವನೇ ಪ್ರಮುಖ ಆರೋಪಿ

• **ಉದಯವಾಹಿನಿ, ಮಂಗಳೂರು**

ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ಧರ್ಮಸ್ಥಳದ ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸೋಮವಾರ ಹೊಸ ರಾಗ ತೆಗೆದಿದ್ದಾರೆ. ಪ್ರಕರಣದಲ್ಲಿ ಆಕೆಯ ಸೋದರಮಾವ ವಿಠಲ ಗೌಡನೇ ಪ್ರಮುಖ ಆರೋಪಿ ಎಂದು ಆರೋಪಿಸಿರುವ ಮುಡಾ ಪ್ರಕರಣದ ಖ್ಯಾತಿಯ ಕೃಷ್ಣ, ಪ್ರಕರಣದ ಮರುತನಿಖೆಗೆ ಆಗ್ರಹಿಸಿದ್ದಾರೆ. ಈ ಸಂಬಂಧ ಅವರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದ್ದು, ವಿಠಲ ಗೌಡರ ಮಂಪರು ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

**ಸ್ನೇಹಮಯಿ ಕೃಷ್ಣ ಆರೋಪ ಏನು?:** ಸೌಜನ್ಯಳ ಸೋದರಮಾವ ವಿಠಲ ಗೌಡನಿಗೆ ಆಕೆಯ ಮೇಲೆ ಕೆಟ್ಟ ದೃಷ್ಟಿ ಇತ್ತು. ಆಕೆಯನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನ ನಡೆಸುತ್ತಿದ್ದ. ಇದಕ್ಕೆ ಸೌಜನ್ಯ ಒಪ್ಪದಿದ್ದಾಗ, ಆಕೆಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರಬಹುದು ಎಂದು ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ. ಬೇರೆ ಸ್ಥಳದಲ್ಲಿ ಕೊಲೆಗೈದು, ಬಳಿಕ ಮೃತದೇಹವನ್ನು ಈಗಿರುವ ಸ್ಥಳಕ್ಕೆ ತಂದು ಹಾಕಲಾಗಿದೆ ಎಂದು ಸ್ನೇಹಮಯಿ ಶಂಕೆ ವ್ಯಕ್ತಪಡಿಸಿದ್ದು, ಈ ಕೃತ್ಯವನ್ನು ನೋಡಿದ್ದ ಸಂತೋಷ್ ರಾವ್‌ನನ್ನು ಬೆದರಿಸಿ ಪ್ರಕರಣದಲ್ಲಿ ಸಿಲುಕಿಸಿರಬಹುದು ಅಂದು ಅನುಮಾನ ವ್ಯಕ್ತಪಡಿಸಿದ್ದಾರೆ.



- **ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಹೊಸ ತಿರುವು ನೀಡಿದ ಸ್ನೇಹಮಯಿ ಕೃಷ್ಣ**
- **ಸೌಜನ್ಯ ಮಾವ ವಿಠಲ ಗೌಡನೇ ಪ್ರಮುಖ ಆರೋಪಿ ಎಂದ ಸಾಮಾಜಿಕ ಕಾರ್ಯಕರ್ತ**

ತಮ್ಮ ಆರೋಪವನ್ನು ಸಮರ್ಥಿಸಲು ಸ್ನೇಹಮಯಿ ಕೃಷ್ಣ ಅವರು ಹಲವು ಸಾಂದರ್ಭಿಕ ಸಾಕ್ಷ್ಯಗಳನ್ನು ಕೂಡ ಮುಂದಿಟ್ಟಿದ್ದಾರೆ. ಸೌಜನ್ಯಳ ತಾಯಿ ಕುಸುಮಾವತಿ ಅವರಿಗೂ ತಮ್ಮ ಸಹೋದರ ವಿಠಲ ಗೌಡನ ಮೇಲೆ ಮೊದಲಿನಿಂದಲೂ ಅನುಮಾನ ಇತ್ತು.

ಈ ಕಾರಣದಿಂದಲೇ ಅವರು ಮಗಳ ಮೃತದೇಹವನ್ನು ನೋಡಲು ಹೋಗಿರಲಿಲ್ಲ. ಅಲ್ಲದೆ, ಕೊಲೆ ನಡೆದ ದಿನದಂದು ವಿಠಲ ಗೌಡ ತನ್ನ ಹೋಟೆಲ್ ಕೆಲಸಕ್ಕೆ ರಜೆ ಹಾಕಿದ್ದ ಎನ್ನುವ ಮಾಹಿತಿ ಲಭ್ಯವಾಗಿದೆ ಎಂದಿದ್ದಾರೆ. ಸೌಜನ್ಯಳ ಮೃತದೇಹ ಪತ್ತೆಯಾದಾಗ ಆಕೆಯ ಬೆನ್ನಿನ ಮೇಲೆ ಬ್ಯಾಗ್ ಇತ್ತು ಎಂದಿರುವ ಕೃಷ್ಣ, ಅಪರಿಚಿತರು ಅತ್ಯಾಚಾರ ಎಸಗಿದ್ದರೆ ಈ ರೀತಿ ಇರಲು ಸಾಧ್ಯವಿಲ್ಲ ಎಂದು ವಾದಿಸಿದ್ದಾರೆ.

ಅಷ್ಟೇ ಅಲ್ಲದೆ, ಈ ಎಲ್ಲಾ ಸಾಕ್ಷ್ಯಗಳನ್ನು ಆಧರಿಸಿ ಪ್ರಕರಣದ ಸಂಪೂರ್ಣ ಮರು ತನಿಖೆ ನಡೆಸಬೇಕು ಎಂದು ಸ್ನೇಹಮಯಿ ಕೃಷ್ಣ ಆಗ್ರಹಿಸಿದ್ದಾರೆ. ವಿಠಲ ಗೌಡರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ಸತ್ಯಾಂಶ ಹೊರಬರಲಿದೆ ಎಂದು ಹೇಳಿರುವ ಅವರು, ಇದನ್ನು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಹೊಸ ಆರೋಪವು ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ.

**ಧರ್ಮಸ್ಥಳದ ಸೌಜನ್ಯ ಪ್ರಕರಣಕ್ಕೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೊಸ ತಿರುವು ನೀಡಿದ್ದಾರೆ. ಸೌಜನ್ಯಳ ಸೋದರಮಾವ ವಿಠಲ ಗೌಡನೇ ಆರೋಪಿ ಎಂದು ಅವರು ಆರೋಪಿಸಿದ್ದಾರೆ. ವಿಠಲ ಗೌಡನಿಗೆ ಸೌಜನ್ಯ ಮೇಲೆ ಕೆಟ್ಟ ದೃಷ್ಟಿ ಇತ್ತು ಎಂದಿರುವ ಕೃಷ್ಣ, ಆತನೇ ಅತ್ಯಾಚಾರ ಎಸಗಿ ಕೊಲೆ ಮಾಡಿರಬಹುದು ಎಂದು ಶಂಕಿಸಿದ್ದಾರೆ. ಮರು ತನಿಖೆ ನಡೆಸುವಂತೆ ಆಗ್ರಹಿಸಿರುವ ಅವರು, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದಾರೆ.**

## ಕನ್ನಡ ಉಳಿವಿಗೆ ಹೋರಾಟ

• **ಉದಯವಾಹಿನಿ, ಚಿಕ್ಕೋಡಿ**

ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ತಾಲ್ಲೂಕು ವ್ಯಾಪ್ತಿಯ ವಿವಿಧ ಪಟ್ಟಣ ಗ್ರಾಮಗಳಲ್ಲಿ ಕನ್ನಡ ಉಳಿಸಿ, ಬೆಳೆಸಲು ಕರವೇ ಪದಾಧಿಕಾರಿಗಳು ಪಣ ತೊಡಬೇಕು ಎಂದು ಬೆಳಗಾವಿ ಜಿಲ್ಲಾ ಕರವೇ ಸಂಘಟನೆಯ ಉಪಾಧ್ಯಕ್ಷ ಗಣೇಶ ರೋಖಡೆ ಹೇಳಿದರು. ಪಟ್ಟಣದ ಲೋಕೋಪಯೋಗಿ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಚಿಕ್ಕೋಡಿ ತಾಲ್ಲೂಕು ಮಟ್ಟದ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕು ವ್ಯಾಪ್ತಿ, ಹೋಬಳಿ ಮಟ್ಟದಲ್ಲಿ ಕರವೇ ಸಂಘಟನೆಯ ಘಟಕಗಳನ್ನು ನಿರ್ಮಿಸಿ ಸ್ಥಳೀಯ ಸಮಸ್ಯೆಗಳ ನಿವಾರಣೆ, ಕನ್ನಡ ಉಳಿಸಲು ಬೆಳೆಸಲು ವಿವಿಧ ಹಂತಗಳ ಹೋರಾಟ ಮಾಡಬೇಕು ಎಂದರು. ಕರವೇ ತಾಲ್ಲೂಕು ಘಟಕದ ಅಧ್ಯಕ್ಷ ಸಂಜು ಬಡಿಗೇರ ಮಾತನಾಡಿ, ಕನ್ನಡ ನಾಡು ನುಡಿ, ನೆಲ ಜಲಕ್ಕಾಗಿ ಪ್ರಾಮಾಣಿಕವಾಗಿ ನಾವೆಲ್ಲರೂ ಹೋರಾಟ ಮಾಡಿ ಗಡಿ ಭಾಗದಲ್ಲಿ ಕನ್ನಡ ನಾಡನ್ನು ಕಟ್ಟುವ ಕೆಲಸ ಮಾಡಬೇಕು ಎಂದರು.

# ಬೆಳೆ ಹಾನಿ ಪರಿಹಾರಕ್ಕೆ ರೈತರ ಆಗ್ರಹ

• **ಉದಯವಾಹಿನಿ, ಹಾವೇರಿ**

ಜಿಲ್ಲೆಯಲ್ಲಿ ಉಂಟಾಗಿರುವ ಬೆಳೆ ಹಾನಿ ಬಗ್ಗೆ ಜಂಟಿ ಸಮೀಕ್ಷೆ ನಡೆಸಲು ಸೂಚನೆ ನೀಡಿರುವ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರು ಹಲವು ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೆಳಗೊಂಡ, ತಡಸ, ಮತ್ತೂರು, ಮತ್ತೂರು, ಕಚವಿ, ಚಿನ್ನಮುಳಗುಂದ, ಬಾಳೂರು, ಹನುಮನಹಳ್ಳಿ, ಬಾಳಂಬಿಡ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜಮೀನುಗಳನ್ನು ವೀಕ್ಷಿಸಿದ ಜಿಲ್ಲಾಧಿಕಾರಿ, ಸ್ಥಳದಲ್ಲಿದ್ದ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಗೋವಿನ ಜೋಳ, ಹೆಸರು, ಭತ್ತ, ಶುಂಠಿ ಸೇರಿದಂತೆ ಎಲ್ಲಾ ಬಗೆಯ ಬೆಳೆಯ ಪರಿಸ್ಥಿತಿಯನ್ನು ಜಿಲ್ಲಾಧಿಕಾರಿಯವರು ತಿಳಿದುಕೊಂಡರು. ತಮ್ಮ ಜಮೀನಿಗೆ ಬಂದ ಜಿಲ್ಲಾಧಿಕಾರಿ ಎದುರು ಅಳಲು ತೋಡಿಕೊಂಡ ರೈತರು, ಮುಂಗಾರು ಪೂರ್ವ ಮಳೆ ಮುಗಿದು ಮುಂಗಾರು ಮಳೆ ಶುರುವಾಗುತ್ತಿದ್ದಂತೆ, ಜಮೀನು ಹದಗೊಳಿಸಿ ಗೋವಿನ ಜೋಳ ಬಿತ್ತನೆ ಮಾಡಿದ್ದೆವು. ಆದರೆ, ಜಿಟಿ ಜಿಟಿ ಮಳೆ ಹಾಗೂ ಮೋಡ ಕವಿದ ವಾತಾವರಣದಿಂದಾಗಿ ಇಡೀ ಬೆಳೆ ಹಾನಿಯಾಗಿದೆ ಎಂದು ಹೇಳಿದರು. ಎಕರೆಗೆ 15 ಸಾವಿರದಿಂದ 30 ಸಾವಿರ ಖರ್ಚು ಮಾಡಿ ಬಿತ್ತನೆ ಮಾಡಿದ್ದೆವು. ಕಟಾವು ಬರುವ ಸಮಯದಲ್ಲಿಯೇ ಇಡೀ ಬೆಳೆ ಒಣಗಿದೆ. ಈ ವರ್ಷ ಬೆಳೆ ಸಂಪೂರ್ಣ ನಾಶವಾಗಿದ್ದು, ನಮಗೆ ಪರಿಹಾರ ನೀಡಬೇಕು. ಇಲ್ಲದಿದ್ದರೆ, ಮಾಡಿದ ಸಾಲ ತೀರಿಸಲು ಸಹ ನಾವೆಲ್ಲರೂ ಪರದಾಡಬೇಕಾಗುತ್ತದೆ ಎಂದು ತಿಳಿಸಿದರು. ರೈತರ ಮನವಿ ಆಲಿಸಿದ ಜಿಲ್ಲಾಧಿಕಾರಿ ವಿಜಯಮಹಾಂತೇಶ, ಜಿಲ್ಲೆಯಲ್ಲಿ ಅಂದಾಜು 22 ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿರುವ ಮಾಹಿತಿಯಿದೆ. ಹಾನಿ ಬಗ್ಗೆ ರೈತರು ನೀಡಿರುವ ಮನವಿಗಳನ್ನು ಪರಿಗಣಿಸಲಾಗಿದೆ. ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಮೂಲಕ ಜಂಟಿ ಸಮೀಕ್ಷೆಯನ್ನೂ ಆರಂಭಿಸಲಾಗಿದೆ ಎಂದರು. ಜಿಲ್ಲೆಯಲ್ಲಿ ಅಂದಾಜು 22 ಸಾವಿರ ಹೆಕ್ಟೇರ್ ಬೆಳೆ ಹಾನಿ ಕೃಷಿ, ತೋಟಗಾರಿಕೆ, ಹಾಗೂ ಕಂದಾಯ ಇಲಾಖೆಯಿಂದ ಜಂಟಿ ಸಮೀಕ್ಷೆ ಬಳಿಕ ಸೂಕ್ತ ಪರಿಹಾರ ಒದಗಿಸುವ ಭರವಸೆ


ಉದಯವಾಹಿನಿ ಚಿತ್ರ


# ಹಾಸನದಲ್ಲಿ ಗೊಂದಲಕ್ಕೀಡು ಮಾಡಿದ ಸಮೀಕ್ಷೆ ಸ್ಟಿಕ್ಕರ್

## ಸೆಸ್ಕ್ ಸಿಬ್ಬಂದಿಯಿಂದ ಕಾರ್ಯಾಚರಣೆ, ಜನ ಜಾಗೃತಿ ಇಲ್ಲದೆ ತೊಡಕು

• **ಉದಯವಾಹಿನಿ, ಹೊಳೆನರಸೀಪುರ**

ಹಿಂದುಳಿದ ವರ್ಗಗಳ ಆಯೋಗವು ವಿದ್ಯುತ್ ಸಂಪರ್ಕ ಆಧರಿಸಿ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಬಗ್ಗೆ ಮನೆ ಮಾಲೀಕರಿಗೆ ಮಾಹಿತಿ ನೀಡದೆ ಸ್ಟಿಕ್ಕರ್ ಅಂಟಿಸುತ್ತಿರುವುದು ಹಲವು ಗೊಂದಲಗಳಿಗೆ ಕಾರಣವಾಗುತ್ತಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆಸ್ಕ್ ನೌಕರರ ಬಳಕೆ ಮಾಡಿಕೊಂಡು ವಿದ್ಯುತ್ ಗ್ರಾಹಕರನ್ನು ಆಧರಿಸಿ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪೂರ್ಣ ಮಾಹಿತಿಯಂತೆ ನಡೆದಿಲ್ಲ. ಮನೆಬಾಗಿಲಿಗೆ ಸ್ಟಿಕ್ಕರ್ ಅಂಟಿಸಿ ಮಾಯವಾಗುತ್ತಿದ್ದಾರೆ. ಬಹಳಷ್ಟು ಜನಕ್ಕೆ ಸ್ಟಿಕ್ಕರ್ ಬಗ್ಗೆ ಮಾಹಿತಿಯೂ ಇಲ್ಲವಾಗಿರುವುದು ಸಮೀಕ್ಷೆಯ ಉದ್ದೇಶ ಸಫಲವಾಗುವುದೇ ಎಂಬ ಸಂದೇಹ ಹುಟ್ಟುಹಾಕಿದೆ.

ನಾಗರಿಕರಿಂದಲೂ ಕೌಟುಂಬಿಕ ವಿವರ ಸಂಗ್ರಹಿಸಲಾಗುತ್ತಿಲ್ಲ. ಸೆಸ್ಕ್ ಸಿಬ್ಬಂದಿ ವಿದ್ಯುತ್ ಮೀಟರ್ ರೀಡಿಂಗ್ ತೆಗೆದುಕೊಳ್ಳುವ ವೇಳೆ ಮನೆ ಬಾಗಿಲಿಗೆ ಸ್ಟಿಕ್ಕರ್ ಅಂಟಿಸಿ, ಅದರ ಮೇಲೆ ವಿದ್ಯುತ್ ಗ್ರಾಹಕರ ಸಂಖ್ಯೆ (ಆರ್ ಆರ್ ನಂಬರ್) ಬರೆದು ತೆರಳುತ್ತಿದ್ದಾರೆ. ಈ ಬಗ್ಗೆ ಮನೆ ಮಾಲೀಕರು, ಏಕೆ ಇದನ್ನು ಅಂಟಿಸುತ್ತಿದ್ದೀರಿ ಎಂದು ಪ್ರಶ್ನಿಸಿದರೆ, ಇಲಾಖೆಯ ಹಿರಿಯ ಅಧಿಕಾರಿಗಳ ಆದೇಶ ಪಾಲಿಸುತ್ತಿದ್ದೇವೆ ಎಂದಷ್ಟೇ ಹೇಳುತ್ತಿದ್ದಾರೆ ಎನ್ನುವುದು ಸ್ಥಳೀಯರ ದೂರು. ಸೆಸ್ಕ್ ಎಂಜಿನಿಯಗಳ ಪ್ರಕಾರ ನೌಕರರು ಕೌಟುಂಬಿಕ ಸದಸ್ಯರ ಸಂಪೂರ್ಣ ಮಾಹಿತಿ ಪಡೆದು, ಆ್ಯಪ್‌ನಲ್ಲಿ ನಮೂದಿಸಿ, ನಂತರ ಬರುವ ಸ್ಟಿಕ್ಕರ್ ಮೇಲೆ ನಂಬರ್ ಬರೆದು ಅಂಟಿಸಬೇಕು. ಆದರೆ, ಇದು ಯಾವುದೂ ನಿಯಮದಂತೆ ನಡೆದಿಲ್ಲ. ಕೇವಲ


ಉದಯವಾಹಿನಿ ಚಿತ್ರ

**ನಮ್ಮ ಇಲಾಖೆ ಅಧಿಕಾರಿಗಳ ಆದೇಶದಂತೆ ವಿದ್ಯುತ್ ಗ್ರಾಹಕರ ಮನೆ ಬಾಗಿಲಿಗೆ ವಿದ್ಯುತ್ ಗ್ರಾಹಕ ಸಂಖ್ಯೆಯನ್ನು ನಮೂದಿಸಿ ಸ್ಟಿಕ್ಕರ್ ಹಾಕುತ್ತಿದ್ದೇವೆ. ವಿದ್ಯುತ್ ಬಿಲ್ ನೀಡುವುದರ ಜತೆಗೆ ಈ ಕಾರ್ಯವನ್ನು ಮಾಡುತ್ತಿದ್ದೇವೆ ಎಂದಿದ್ದಾರೆ ಹೆಸರು ಹೇಳಲಿಚ್ಚಿಸದ ವಿದ್ಯುತ್ ಇಲಾಖೆ ನೌಕರರು.**

ಸ್ಟಿಕ್ಕರ್ ಅಂಟಿಸಿ ಹೋಗುತ್ತಿದ್ದಾರೆ. ಈ ಬಗ್ಗೆ ಮಾಹಿತಿಯನ್ನು ನೀಡುತ್ತಿಲ್ಲಇದು ನಮಗೆ ಗೊಂದಲ ಉಂಟು ಮಾಡುತ್ತಿದೆ ಎನ್ನುವುದು ಮನೆ ಮಾಲೀಕರ ದೂರು.

**ಸೆ. 22ರಿಂದ ಆರಂಭ:** ಹೊಳೆನರಸೀಪುರ ಪಟ್ಟಣ ಪ್ರದೇಶದಲ್ಲಿ 7 ಸಾವಿರ ಮನೆಗಳಿವೆ ಎಂದು ಅಂದಾಜಿದೆ. ಸೆ. 22ರಿಂದ ಗ್ರಾಹಕರ ಮನೆಗಳಿಗೆ ಸ್ಟಿಕ್ಕರ್ ಅಂಟಿಸುವ ಪ್ರಕ್ರಿಯೆ ಭರದಿಂದ ಸಾಗಲಿದೆ. ವಿದ್ಯುತ್ ಗ್ರಾಹಕರು ಇಲ್ಲದ ಮನೆಗಳಿಲ್ಲ ಎಂಬ ಅಂದಾಜಿನ ಮೇಲೆ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಸುಧಾರಿತ ಆಪ್ ಬಳಸಿ ಮಾಹಿತಿ ಪಡೆದು ದತ್ತಾಂಶ ನಮೂದಿಸಬೇಕು. ಈಗ ಸ್ಟಿಕ್ಕರ್ ಮಾತ್ರ ಅಂಟಿಸಲಾಗುತ್ತಿದೆ.

**ಜನರಲ್ಲಿ ಗೊಂದಲ:** ಸೆಸ್ಕ್ ಸಿಬ್ಬಂದಿಯು ಮನೆ ಬಾಗಿಲಿಗೆ ಬಂದರೂ ಯಾವುದೇ ಮಾಹಿತಿಯನ್ನು ನೀಡದೆ ಸ್ಟಿಕ್ಕರ್ ಅನ್ನು ಮನೆ ಬಾಗಿಲು, ಮೀಟರ್ ಬೋರ್ಡ್‌ಗೆ ಅಂಟಿಸಿ ತೆರಳುತ್ತಿದ್ದಾರೆ. ಇದನ್ನು ಏಕೆ ಅಂಟಿಸಲಾಗುತ್ತಿದೆ. ನಂತರದ ಪ್ರಕ್ರಿಯೆ ಏನು ಎಂಬ ಮಾಹಿತಿಯನ್ನು ಮನೆಯ ಮಾಲೀಕರಿಗಾಗಲಿ, ಗ್ರಾಹಕರಿಗಾಗಲಿ ನೀಡದಿರುವುದು ಗೊಂದಲಕ್ಕೆ ಕಾರಣವಾಗಿದೆ. ಈ ಸ್ಟಿಕ್ಕರ್ ಅನ್ನು ಏಕೆ ಅಂಟಿಸಲಾಗುತ್ತಿದೆ ಎನ್ನುವ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ.

**ಏಕೆ ಈ ಸಮೀಕ್ಷೆ:** ವಿಧಾನ ಸಭಾ ಕ್ಷೇತ್ರವಾರು ಆಯೋಗವು ವಿದ್ಯುತ್ ಮೀಟರ್ ಆಧರಿಸಿ ಮನೆಗಳನ್ನು ಗುರುತಿಸಲು ತೀರ್ಮಾನಿಸಿ ಅಷ್ಟೂ ಮನೆಗಳನ್ನು ತಲುಪಿ ಸಮೀಕ್ಷೆ ನಡೆಸಿ ಕುಟುಂಬದ ಮಾಹಿತಿ ಸಂಗ್ರಹಿಸುವ ಕೆಲಸಕ್ಕೆ ಮುಂದಾಗಿದೆ. ಇದಕ್ಕೆ ವಿದ್ಯುತ್ ಇಲಾಖೆಯ ಮೀಟರ್ ರೀಡಿಂಗ್ ನೌಕರರ ಬಳಕೆ ಮಾಡಿಕೊಂಡು ಮನೆ-ಮನೆ ತಲುಪಿ ಮಾಹಿತಿ ಕಲೆ ಹಾಕುವ ಕೆಲಸ ಮಾಡುತ್ತಾರೆ.

**ಸೆಸ್ಕ್ ಪವರ್‌ಮನ್‌ಗಳು ಮನೆ ಬಾಗಿಲಿಗೆ ಸ್ಟಿಕ್ಕರ್ ಅಂಟಿಸಿ ತೆರಳುತ್ತಿದ್ದಾರೆ. ಈ ಕುರಿತು ಸೂಕ್ತ ಮಾಹಿತಿ ನೀಡುತ್ತಿಲ್ಲ. ಈ ಸಮೀಕ್ಷೆ ಏನು ಎಂಬುದೇ ತಿಳಿಯುತ್ತಿಲ್ಲ.**

**-ಚಲುವರಾಜ, ನಾಗರಿಕ. ಹೊಳೆನರಸೀಪುರ.**

## ಶತಮಾನೋತ್ಸವ ಸಮಾರಂಭ

• **ಉದಯವಾಹಿನಿ, ಬೆಳಗಾವಿ**

ಕರ್ನಾಟಕ ರೆಡ್ಡಿ ಜನಸಂಘದ ಶತಮಾನೋತ್ಸವ ಸಮಾರಂಭ ಬೆಂಗಳೂರಿನ ಗಾಯತ್ರಿ ವಿಹಾರದ ಅರಮನೆ ಮೈದಾನದಲ್ಲಿ ಸೆ.24ರಂದು ಬೆಳಿಗ್ಗೆ 10ಕ್ಕೆ ಆಯೋಜಿಸಲಾಗಿದೆ ಎಂದು ಎರೆಹೊಸಹಳ್ಳಿಯ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರೆಡ್ಡಿ ಜನಸಂಘ 100ನೇ ವಸಂತಕ್ಕೆ ಕಾಲಿಟ್ಟಿದೆ. ಈ ಸಂಭ್ರಮಕ್ಕಾಗಿ ಆಯೋಜಿಸಿದ ಕಾರ್ಯಕ್ರಮಕ್ಕೆ ಸಿಎಂಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ರೆಡ್ಡಿ ಸಮಾಜದ ಶಾಸಕರು, ಮಾಜಿ ಶಾಸಕರು, ಮುಖಂಡರು, ಸ್ವಾಮೀಜಿಗಳು ಆಗಮಿಸುವರು ಎಂದು ತಿಳಿಸಿದರು.

# ಜೆನ್ -ಝಡ್‌ಗಳಿಂದ ಭಾರೀ ಪ್ರತಿಭಟನೆ, 14 ಸಾವು

## ಸರ್ಕಾರದ ಭ್ರಷ್ಟಾಚಾರ, ಸಾಮಾಜಿಕ ಮಾಧ್ಯಮಗಳ ಮೇಲಿನ ನಿಷೇಧ ವಿರೋಧಿಸಿ ಪ್ರತಿಭಟನೆ, ನೂರಕ್ಕೂ ಹೆಚ್ಚು ಜನರಿಗೆ ಗಾಯ

**ಕಠ್ಮಂಡು:** ಭಾರತದ ನೆರೆಯ ದೇಶ, ಒಂದು ಕಾಲದ ಹಿಂದೂ ರಾಷ್ಟ್ರ ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ ಭಾರೀ ಪ್ರತಿಭಟನೆ ಆರಂಭವಾಗಿದೆ. ದೃಶ್ಯಾವಳಿಗಳು, ಜನರ ಕೋಪತಾಪ ನೋಡುತ್ತಿದ್ದರೆ ಮತ್ತೊಂದು ಅರಾಜಕ ಬಾಂಗ್ಲಾದೇಶವಾಗಿ ಬದಲಾಗುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ. ಸರ್ಕಾರದ ಭ್ರಷ್ಟಾಚಾರ ಮತ್ತು ಸಾಮಾಜಿಕ ಮಾಧ್ಯಮಗಳ ಮೇಲಿನ ನಿಷೇಧವನ್ನು ವಿರೋಧಿಸಿ ಈ ಪ್ರತಿಭಟನೆ ನಡೆಯುತ್ತಿದ್ದು, ಹಿಂಸಾರೂಪಕ್ಕೆ ತಿರುಗಿದೆ. ಘಟನೆಯಲ್ಲಿ ಇವರೆಗೆ ಕನಿಷ್ಠ 14 ಜನರು ಸಾವನ್ನಪ್ಪಿ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಸೇನೆಯನ್ನು ನಿಯೋಜಿಸಲಾಗಿದ್ದು, ರಾಜಧಾನಿಯ ಪ್ರಮುಖ ಪ್ರದೇಶಗಳಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ.

ಜೆನ್-ಝಡ್, ಪೀಳಿಗೆಯ ಯುವಕರ ನೇತೃತ್ವ ವಹಿಸಿದ್ದ ಈ ಪ್ರತಿಭಟನೆಯಲ್ಲಿ, ಸಾವಿರಾರು ಮಂದಿ ಕರ್ಫ್ಯೂ ಉಲ್ಲಂಘಿಸಿ ಸಂಸತ್ತಿನ ಬಳಿಯ ನಿರ್ಬಂಧಿತ ವಲಯಗಳಿಗೆ ನುಗ್ಗಲು ಯತ್ನಿಸಿದ್ದಾರೆ. ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಪೊಲೀಸರ ಮೇಲೆ ಮರದ ತುಂಡುಗಳು ಮತ್ತು ನೀರಿನ ಬಾಟಲಿಗಳನ್ನು ಎಸೆದಿದ್ದಾರೆ. ಇದಕ್ಕೆ ಪ್ರತಿಯಾಗಿ ಪೊಲೀಸರು ಜಲಫಿರಂಗಿ, ಅಶ್ರುವಾಯು, ರಬ್ಬರ್ ಬುಲೆಟ್‌ಗಳನ್ನು ಬಳಸಿ ಗುಂಪನ್ನು ಚದುರಿಸಿದ್ದಾರೆ. ಕೆಲವು ಪ್ರತಿಭಟನಾಕಾರರು ಸಂಸತ್ತಿನ ಆವರಣವನ್ನೇ ಪ್ರವೇಶಿಸಿದ್ದರಿಂದ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಂಡಿತು ಎಂದು ದಿ ಕಠ್ಮಂಡು ಪೋಸ್ಟ್ ವರದಿ ಮಾಡಿದೆ. ಹಿಂಸಾಚಾರದ ಹಿನ್ನೆಲೆಯಲ್ಲಿ ಕಠ್ಮಂಡು ಜಿಲ್ಲಾಡಳಿತವು ಅಧ್ಯಕ್ಷರ ನಿವಾಸ, ಪ್ರಧಾನ ಮಂತ್ರಿಗಳ ನಿವಾಸ, ಸಿಂಹ ದರ್ಬಾರ್ ಸೇರಿದಂತೆ ಹಲವು ಉನ್ನತ ಭದ್ರತಾ ವಲಯಗಳಲ್ಲಿ ಕರ್ಫ್ಯೂ ಜಾರಿಗೊಳಿಸಿದೆ. ಪೊಲೀಸರು ಹಾರಿಸಿದ ರಬ್ಬರ್ ಬುಲೆಟ್‌ಗಳಿಂದ ಇಬ್ಬರು ಗಾಯಗೊಂಡಿದ್ದರೆ, ಪ್ರತಿಭಟನೆಯ ವರದಿ ಮಾಡುತ್ತಿದ್ದ ಕಾಂಟಿಪುರ್ ಟೆಲಿವಿಷನ್‌ನ ಪತ್ರಕರ್ತ ಶ್ಯಾಮ್ ಶ್ರೇಷ್ಠ ಅವರಿಗೆ ರಬ್ಬರ್ ಬುಲೆಟ್ ತಗುಲಿದೆ. ಇದೇ ವೇಳೆ, ಪ್ರಧಾನಿ ಕೆ.ಪಿ. ಶರ್ಮಾ ಓಲಿ ಅವರ ತವರೂರಾದ ದಮಾಕ್‌ನಲ್ಲಿ ಭಾರೀ ಪ್ರತಿಭಟನೆ ನಡೆಯುತ್ತಿದ್ದು, ಇಲ್ಲೂ ಓರ್ವ ವ್ಯಕ್ತಿ ಗಾಯಗೊಂಡಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೇಲಿನ ನಿಷೇಧವನ್ನು ತೆರವುಗೊಳಿಸಬೇಕು ಮತ್ತು ದೇಶದಲ್ಲಿನ ಭ್ರಷ್ಟಾಚಾರಕ್ಕೆ ಅಂತ್ಯ ಹಾಡಬೇಕು ಎಂದು ಸಾವಿರಾರು ಯುವಕರು ಆಗ್ರಹಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೇಲಿನ ನಿಷೇಧವು ನಮ್ಮನ್ನು ಕೆರಳಿಸಿದೆ, ಆದರೆ ನಾವು ಪ್ರತಿಭಟಿಸುತ್ತಿರುವುದು ಸಾಂಸ್ಥಿಕ ರೂಪ ಪಡೆದಿರುವ ಭ್ರಷ್ಟಾಚಾರದ ವಿರುದ್ಧ ಎಂದು ವಿದ್ಯಾರ್ಥಿಯೊಬ್ಬರು ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ನಿಷೇಧದ ನಂತರ, ದೇಶದಲ್ಲಿ ಇನ್ನೂ ಕಾರ್ಯನಿರ್ವಹಿಸುತ್ತಿರುವ ಟಿಕ್‌ಟಾಕ್‌ನಲ್ಲಿ, ಸಾಮಾನ್ಯ ನೇಪಾಳಿಗಳ ಬವಣೆ, ರಾಜಕಾರಣಿಗಳ ಮಕ್ಕಳು ಐಷಾರಾಮಿ ಜೀವನವನ್ನು ಹೋಲಿಸುವ ವಿಡಿಯೋಗಳು ವೈರಲ್ ಆಗಿವೆ. ತಾನು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವುದಾಗಿ ನೇಪಾಳ ಸರ್ಕಾರ ಹೇಳಿಕೆ ನೀಡಿದೆ. ನೇಪಾಳದಲ್ಲಿ ಈ ಹಿಂದೆ ಕೂಡ ಆನ್‌ಲೈನ್ ವಂಚನೆಗಳ ಕಾರಣ ಟೆಲಿಗ್ರಾಮ್ ಅಪ್ಲಿಕೇಶನ್ ಅನ್ನು ನಿರ್ಬಂಧಿಸಲಾಗಿತ್ತು, ಇದೇ ರೀತಿ ಟಿಕ್‌ಟಾಕ್‌ಗೂ ನಿಷೇಧ ಹೇರಲಾಗಿತ್ತು. ಆದರೆ ಚೀನಾ ಮೂಲದ ಟಿಕ್‌ಟಾಕ್ ನಿಯಮ ಪಾಲನೆಗೆ ಒಪ್ಪಿದ ಮೇಲೆ ಅದರ ಮೇಲಿನ ನಿಷೇಧವನ್ನು ಹಿಂಪಡೆಯಲಾಗಿತ್ತು. ಹೀಗಾಗಿ ಸದ್ಯ ಎಲ್ಲಾ ಸಾಮಾಜಿಕ ಜಾಲತಾಣಗಳು ಕಾರ್ಯನಿರ್ವಹಿಸುವುದು ಸ್ಥಗಿತ ಆಗಿದ್ದೂ, ಟಿಕ್‌ಟಾಕ್ ಮಾತ್ರ ನೇಪಾಳದಲ್ಲಿ ಸಕ್ರಿಯವಾಗಿದೆ. ಇದರ ಮೂಲಕವೇ ಜನರು ಸರ್ಕಾರದ ವಿರುದ್ಧದ ತಮ್ಮ ಆಕ್ರೋಶವನ್ನು ಹೊರಹಾಕುತ್ತಿದ್ದಾರೆ. ಕಳೆದ ವರ್ಷ ಬಾಂಗ್ಲಾದೇಶದಲ್ಲಿ ಇದೇ ರೀತಿ ಶೇಕ್ ಹಸೀನಾ ಸರ್ಕಾರದ ವಿರುದ್ಧ ವಿದ್ಯಾರ್ಥಿಗಳು ತಿರುಗಿ ಬಿದ್ದಿದ್ದರು. ಪ್ರತಿಭಟನೆ ದಿನ ದಿನಕ್ಕೂ ಜೋರಾಗಿ ಕಡೆಗೆ ಪ್ರಧಾನಿಯೇ ದೇಶ ತೊರೆಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಘಟನೆಗೆ ತೇಪೆ ಹಚ್ಚುವಂತೆ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ.



### ಸರ್ಕಾರ ಹೇಳುತ್ತಿರುವುದೇನು?

**ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯವಾಗಿರುವ ಸಾಮಾಜಿಕ ಮಾಧ್ಯಮ ಕಂಪನಿಗಳು ನೇಪಾಳದಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಸ್ಥಳೀಯವಾಗಿ ಕುಂದುಕೊರತೆ ಅಧಿಕಾರಿಯನ್ನು ನೇಮಿಸಬೇಕು ಎಂದು ನೇಪಾಳದ ಸುಪ್ರೀಂ ಕೋರ್ಟ್ ಕಳೆದ ವರ್ಷ ಆದೇಶ ನೀಡಿತ್ತು. ಆದರೆ ಈ ಆದೇಶವನ್ನು ಪಾಲಿಸುವ ವಿಫಲವಾದ ಹಿನ್ನೆಲೆಯಲ್ಲಿ ಈ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.**

### ಪ್ರತಿಭಟನೆಗೆ ಕಾರಣವೇನು?

**ನೇಪಾಳದಲ್ಲಿ ನೋಂದಣಿ ಮಾಡಿಕೊಳ್ಳದ 26 ಸಾಮಾಜಿಕ ಜಾಲತಾಣಗಳನ್ನು ಅಲ್ಲಿನ ಸರ್ಕಾರ ನಿರ್ಬಂಧಿಸಿತ್ತು. ಇದಾದ ನಂತರ, ನೇಪಾಳದಲ್ಲಿ ಫೇಸ್ ಬುಕ್, ಯೂಟ್ಯೂಬ್, ಎಕ್ಸ್ ನಂತಹ ಪ್ರಮುಖ ಸೈಟ್‌ಗಳು ಸ್ಥಗಿತಗೊಂಡಿವೆ. ಸಹಜವಾಗಿ ಸರ್ಕಾರದ ಈ ಕ್ರಮ ಜಾಲತಾಣಗಳಲ್ಲೇ ಸಮಯ ಕಳೆಯುತ್ತಿದ್ದ, ತಮ್ಮ ಮನರಂಜನೆ, ಮಾಹಿತಿಗಾಗಿ ಇವುಗಳನ್ನೇ ನೆಚ್ಚಿಕೊಂಡಿದ್ದ ಹೊಸ ಪೀಳಿಗೆಯ ಯುವಜನರನ್ನು ತೀವ್ರವಾಗಿ ಕೆರಳಿಸಿದೆ. ದೇಶದಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ನಿಭಾಯಿಸುವಲ್ಲಿ ವಿಫಲವಾಗಿರುವ ಸರ್ಕಾರ, ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.**

# ಗ್ರೇಟ್ ನಿಕೋಬಾರ್ ಮೂಲಸೌಕರ್ಯ ಯೋಜನೆಗೆ ಖಂಡನೆ



**ನವದೆಹಲಿ:** ಗ್ರೇಟ್ ನಿಕೋಬಾರ್ ಮೂಲಸೌಕರ್ಯ ಯೋಜನೆಯನ್ನು ಯೋಜಿತ ದುಸ್ಸಾಹಸ ಎಂದು ಕರೆದ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಇದು ದ್ವೀಪದ ಸ್ಥಳೀಯ ಬುಡಕಟ್ಟು ಸಮುದಾಯಗಳಿಗೆ ಅಸ್ತಿತ್ವದ ಅಪಾಯ ಉಂಟುಮಾಡುತ್ತದೆ, ಸಂವೇದನಾ ರಹಿತವಾಗಿ ಅದನ್ನು ಜಾರಿಗೆ ತರಲಾಗುತ್ತಿದೆ, ಇದು ಎಲ್ಲಾ ಕಾನೂನು, ಉದ್ದೇಶಪೂರ್ವಕ ಪ್ರಕ್ರಿಯೆಗಳ ಅಪಹಾಸ್ಯವಾಗಿದೆ ಎಂದು ಹೇಳಿದ್ದಾರೆ.

ಶೋಂಪೆನ್ ಮತ್ತು ನಿಕೋಬಾರೀಸ್ ಬುಡಕಟ್ಟು ಜನಾಂಗದವರ ಉಳಿವು ಅಪಾಯದಲ್ಲಿರುವಾಗ ಸಾಮೂಹಿಕ ಆತ್ಮಸಾಕ್ಷಿಯು ಮೌನವಾಗಿರಲು ಸಾಧ್ಯವಿಲ್ಲ ಮತ್ತು ಇರಬಾರದು ಎಂದು ಅವರು ದಿ ಹಿಂದೂನಲ್ಲಿ ಪ್ರಕಟವಾದ ಲೇಖನದಲ್ಲಿ ಹೇಳಿದರು. ಭವಿಷ್ಯದ ಪೀಳಿಗೆಗೆ ನಮ್ಮ ಬದ್ಧತೆಯು ಅತ್ಯಂತ ವಿಶಿಷ್ಟ ಪರಿಸರ ವ್ಯವಸ್ಥೆಯ ಈ ದೊಡ್ಡ ಪ್ರಮಾಣದ ನಾಶವನ್ನು ಅನುಮತಿಸುವುದಿಲ್ಲ. ನ್ಯಾಯದ ಈ ವಿಡಂಬನೆ ಮತ್ತು ನಮ್ಮ ರಾಷ್ಟ್ರೀಯ ಮೌಲ್ಯಗಳಿಗೆ ಈ ದ್ರೋಹದ ವಿರುದ್ಧ ನಾವು ನಮ್ಮ ಧ್ವನಿಯನ್ನು ಎತ್ತಬೇಕು ಎಂದು ಅವರು ದಿ ಮೇಕಿಂಗ್ ಆಫ್ ಆನ್ ಇಕಲಾಜಿಕಲ್ ಡಿಸಾಸ್ಟರ್ ಇನ್ ದಿ ನಿಕೋಬಾರ್ ಎಂಬ ಶೀರ್ಷಿಕೆಯ ತಮ್ಮ ಲೇಖನದಲ್ಲಿ ಹೇಳಿದ್ದಾರೆ. ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, ಕಳೆದ 11 ವರ್ಷಗಳಲ್ಲಿ ಅರೆ ಬೇಯಿಸಿದ ಮತ್ತು ಕೆಟ್ಟ ಕಲ್ಪನೆಯ ನೀತಿ ನಿರೂಪಣೆಗೆ ಯಾವುದೇ ಕೊರತೆಯಿಲ್ಲ ಎಂದು ಹೇಳಿದರು.ಈ ಯೋಜಿತ ದುಸ್ಸಾಹಸಗಳ ಸರಣಿಯಲ್ಲಿ ಇತ್ತೀಚಿನದು ಗ್ರೇಟ್ ನಿಕೋಬಾರ್ ಮೆಗಾ-ಮೂಲಸೌಕರ್ಯ ಯೋಜನೆ. ಸಂಪೂರ್ಣವಾಗಿ ತಪ್ಪಿಹೋದ ರೂ. 72,000 ಕೋಟಿ ವೆಚ್ಚವು ದ್ವೀಪದ ಸ್ಥಳೀಯ ಬುಡಕಟ್ಟು ಸಮುದಾಯಗಳಿಗೆ ಅಸ್ತಿತ್ವದ ಅಪಾಯ ಉಂಟುಮಾಡುತ್ತದೆ.

ವಿಶ್ವದ ಅತ್ಯಂತ ವಿಶಿಷ್ಟವಾದ ಸಸ್ಯ, ಪ್ರಾಣಿ ಪರಿಸರ ವ್ಯವಸ್ಥೆಗಳಲ್ಲಿ ಒಂದಕ್ಕೆ ಬೆದರಿಕೆ ಹಾಕುತ್ತದೆ, ನೈಸರ್ಗಿಕ ವಿಕೋಪಗಳಿಗೆ ಹೆಚ್ಚು ಒಳಗಾಗುತ್ತದೆ ಎಂದು ಅವರು ಹೇಳಿದರು.

ನಿಕೋಬಾರೀಸ್ ಬುಡಕಟ್ಟು ಜನಾಂಗದವರ ಪೂರ್ವಜರ ಗ್ರಾಮಗಳು ಯೋಜನೆಯ ಪ್ರಸ್ತಾವಿತ ಭೂಪ್ರದೇಶದಲ್ಲಿ ಬರುತ್ತವೆ. 2004 ರ ಹಿಂದೂ ಮಹಾಸಾಗರದ ಸುನಾಮಿಯ ಸಮಯದಲ್ಲಿ ನಿಕೋಬಾರೀಸ್ ಹಳ್ಳಿಗಳನ್ನು ಸ್ಥಳಾಂತರಿಸಬೇಕಾಯಿತು. ಈ ಯೋಜನೆಯು ಈಗ ಈ ಸಮುದಾಯವನ್ನು ಶಾಶ್ವತವಾಗಿ ಸ್ಥಳಾಂತರಿಸುತ್ತದೆ, ಅದರ ಪೂರ್ವಜರ ಹಳ್ಳಿಗಳಿಗೆ ಮರಳುವ ಕನಸನ್ನು ಕೊನೆಗೊಳಿಸುತ್ತದೆ ಎಂದು ಅವರು ಹೇಳಿದರು.

# ತಾಜ್‌ಮಹಲ್‌ಗೂ ತಟ್ಟಿದ ಯುಮುನೆ ಪ್ರವಾಹ

**ಲಕ್ನೋ:** ಉತ್ತರ ಭಾರತದ ಹಲವೆಡೆ ಸುರಿಯುತ್ತಿರುವ ಭಾರೀ ಮಳೆ ಹಿನ್ನೆಲೆಯಲ್ಲಿ ಯಮುನಾ ನದಿಯ ನೀರು ಮಟ್ಟ ತಾಜ್ ಮಹಲ್ ಗೋಡೆಗಳನ್ನು ತಲುಪಿದ್ದು, ನದಿಯಲ್ಲಿ ನೀರಿನ ಪ್ರಮಾಣ ಅಪಾಯದ ಮಟ್ಟ ತಲುಪಿದೆ.

ಈ ಹಿನ್ನೆಲೆಯಲ್ಲಿ ಸ್ಥಳೀಯರಿಗೆ ಮುನ್ನೆಚ್ಚರಿಕೆ ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆಗ್ರಾದಲ್ಲಿ ಏರುತ್ತಿರುವ ಯಮುನಾ ನೀರಿನ ಮಟ್ಟ ನದಿಯ ದಡದಲ್ಲಿ ವಾಸಿಸುವ ಕೆಲವು ಜನರ ಮನೆಗಳನ್ನು ಸಹ ಮುಳುಗಿಸಿದೆ. ಐತಿಹಾಸಿಕ ಪ್ರವಾಸಿ ತಾಣ ತಾಜ್‌ಮಹಲ್ ಗೋಡೆಯ ತನಕ ನೀರು ಬಂದಿದ್ದು ಮತ್ತಷ್ಟು ಆತಂಕ ಸೃಷ್ಟಿಸಿದೆ. ಹಿಮಾಚಲ ಪ್ರದೇಶ, ಉತ್ತರಾಖಂಡದ ಕೆಲವು ಭಾಗಗಳನ್ನು ವ್ಯಾಪಿಸಿರುವ ಕೆಳಗಿನ ಹಿಮಾಲಯ ಪ್ರದೇಶದಲ್ಲಿ ಇತ್ತೀಚೆಗೆ ಮಳೆಯಾದ ನಂತರ ಯಮುನಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದು ಅದು ಇದೀಗ ತಾಜ್ ಮಹಲ್ ಮತ್ತು ಅಕ್ಕ ಪಕ್ಕದ ಗ್ರಾಮಗಳ ಜನರಲ್ಲಿ ಆತಂಕ ಸೃಷ್ಟಿ ಮಾಡಿದೆ. ಸ್ಥಳೀಯ ಇತಿಹಾಸಕಾರ ರಾಜ್ ಕಿಶೋರ್ ರಾಜೆ ಪ್ರತಿಕಿಯಿಸಿ ಯಮುನಾ ನದಿ 2023ರಲ್ಲಿ ಇದ್ದಂತೆ ಹೆಚ್ಚಿನ ನೀರಿನ ಮಟ್ಟ ಹೊಂದಿದೆ. ಕಳೆದ ಬಾರಿಯಂತೆ ತಾಜ್ ಮಹಲ್ ಗೋಡೆ ತಲುಪಿದೆ. ನೀರಿನ ಮಟ್ಟವನ್ನು ತಡೆದುಕೊಳ್ಳುವಂತೆ ಅದರ ನಿರ್ಮಾಣ ವಿನ್ಯಾಸಗೊಳಿಸಲಾಗಿರುವುದರಿಂದ ಸ್ಮಾರಕಕ್ಕೆ ಯಾವುದೇ ಹಾನಿಯಾಗಿಲ್ಲ ಎಂದು ಅವರು ಹೇಳಿದ್ದಾರೆ.



ಜಿಲ್ಲಾಡಳಿತ ಪ್ರವಾಹ ಪರಿಸ್ಥಿತಿ ನಿರ್ವಹಿಸಲು ಸಿದ್ಧತೆ ಮಾಡಿಕೊಂಡಿದೆ. ನಿಯಂತ್ರಣ ಕೊಠಡಿ ತೆರೆದು ಪ್ರವಾಹ ಪರಿಸ್ಥಿತಿಯ ಮೇಲೆ ತೀವ್ರ ನಿಗಾವಹಿಸಿದೆ. ನಿರಂತರ ಮಳೆಯಿಂದಾಗಿ ಯಮುನಾ ನದಿಯ ನೀರಿನ ಮಟ್ಟ 205.33 ಮೀಟರ್ ಮಟ್ಟಕ್ಕಿಂತ ಹೆಚ್ಚಾಗಿ ಹರಿಯುತ್ತಿದೆ. ದೆಹಲಿಗೆ ಯಮುನಾ ನದಿಯ ಎಚ್ಚರಿಕೆ ಗುರುತು 204.5 ಮೀಟರ್ ಆಗಿದ್ದರೆ, ಅಪಾಯದ ಗುರುತು 205.33 ಮೀಟರ್ ಆಗಿದೆ. 206 ಮೀಟರ್‌ನಿಂದ ಜನರನ್ನು ಸ್ಥಳಾಂತರಿಸುವ ಕಾರ್ಯ ಪ್ರಾರಂಭವಾಗುತ್ತದೆ. ಸಂಭವನೀಯ ಪ್ರವಾಹ ಪರಿಸ್ಥಿತಿ ಊಹಿಸಿ, ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ವಲಸೆ ಕಾರ್ಮಿಕರನ್ನು ನುಸುಳುಕೋರರೆಂದರೆ ಆ್ಯಸಿಡ್ ಹಾಕುವೆ: ಬಿಜೆಪಿ ವಿರುದ್ಧ ಟಿಎಂಸಿ ಶಾಸಕ

**ಕೋಲ್ಕತ್ತ:** ಪಶ್ಚಿಮ ಬಂಗಾಳದಲ್ಲಿ ವಲಸೆ ಕಾರ್ಮಿಕರನ್ನು ಹೀಗಳೆದರೆ ಅಂಥವರ ಗಂಟಲಿಗೆ ಆ್ಯಸಿಡ್ ಸುರಿಯುವುದಾಗಿ ಬಿಜೆಪಿ ವಿರುದ್ಧ ಟಿಎಂಸಿ ಶಾಸಕ ಅಬ್ದುಲ್ ರಹೀಮ್ ಬಾಕ್ಸಿ ವಾಗ್ದಾಳಿ ನಡೆಸಿದ್ದಾರೆ. ತಾವು ಪ್ರತಿನಿಧಿಸುವ ಕ್ಷೇತ್ರದ ಮಾಲತಿಪುರದಲ್ಲಿ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿರುವ ವಿಡಿಯೋ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಬಂಗಾಳದ ವಲಸೆ ಕಾರ್ಮಿಕರ ವಿರುದ್ಧದ ದಾಳಿಯನ್ನು ಖಂಡಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಶಾಸಕರೊಬ್ಬರು ಅಸಹ್ಯಕರ ಮಾತುಗಳನ್ನಾಡಿದರು. ಅದನ್ನು ಬಲವಾಗಿ ಖಂಡಿಸಿದ್ದೇನೆ. ಪಶ್ಚಿಮ ಬಂಗಾಳದ ಆ



ಕಾರ್ಮಿಕರನ್ನು ಬಾಂಗ್ಲಾದೇಶಿಗಳು ಮತ್ತು ರೋಹಿಂಗ್ಯಾಗಳು ಎಂದು ಹಣಪಟ್ಟಿ ಅಂಟಿಸಿದ್ದಾರೆ. ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಉದ್ಯೋಗ ಅರಿಸಿ ಹೋಗುವವರನ್ನು ಈ ರೀತಿ ಅವಮಾನಿಸಲು ಅವರಿಗೆಷ್ಟು ಧೈರ್ಯ' ಎಂದು ಪ್ರಶ್ನಿಸಿದ್ದಾರೆ. ಇಂಥ ಹೇಳಿಕೆ ನೀಡಿದ ಅವರ ಬಾಯಿ ಮುಚ್ಚಿಸಲು ಅವರ ಗಂಟಲಿಗೆ ಆ್ಯಸಿಡ್ ಸುರಿಯುವುದಾಗಿ ಎಚ್ಚರಿಕೆ ನೀಡುತ್ತೇನೆ' ಎಂದಿದ್ದಾರೆ.

ಒಡೆದಾಳುವ ರಾಜಕೀಯ ನೀತಿ ಅನುಸರಿಸುವ ಬಿಜೆಪಿ ಮುಖಂಡರಿಗೆ ರಾಜ್ಯದ ಜನರು ಬಾಂಗ್ಲಾದೇಶದ ನುಸುಳುಕೋರರಂತೆ ಕಾಣಿಸುತ್ತಿದ್ದಾರೆ. ಅವರ ಕಣ್ಣುಗಳನ್ನು ಪರೀಕ್ಷಿಸಬೇಕು' ಎಂದು ಬಾಕ್ಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಹೇಳಿಕೆಗೆ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿರುಗೇಟು ನೀಡಿರುವ ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಅಮಿತ್ ಮಾಳವಿಯಾ, 'ಟಿಎಂಸಿಗೆ ಹಿಂಸೆ ಎಂಬುದು ಹೊಸತೇನೂ ಅಲ್ಲ. ಅದು ಅವರ ರಾಜಕೀಯ ಸಂಸ್ಕೃತಿ. ಮಾಲ್ಡಾ- ಮುರ್ಷಿದಾಬಾದ್‌ನಲ್ಲಿ ಬಾಂಗ್ಲಾದೇಶದಿಂದ ಅಕ್ರಮವಾಗಿ ನುಸುಳಿದವರು ಮತ್ತು ರೋಹಿಂಗ್ಯಾಗಳು ಮಮತಾ ಬ್ಯಾನರ್ಜಿ ಅವರ ಮತಬ್ಯಾಂಕ್. ತನ್ನ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಟಿಎಂಸಿ ಇಂಥ ಬೆದರಿಕೆ ಹಾಕುತ್ತಿರುವುದೇ ಅದರ ಗುಣಲಕ್ಷಣಗಳಿಗೆ ಹಿಡಿದ ಕನ್ನಡಿ ಎಂದಿದ್ದಾರೆ.

# ಅಣಬೆ ತಿನ್ನಿಸಿ ಕೊಲೆ: ಮಹಿಳೆಗೆ ಜೀವಾವಧಿ ಶಿಕ್ಷೆ ವಿಧಿಸಿದ ಆಸ್ಟ್ರೇಲಿಯಾ ಕೋರ್ಟ್

**ಸಿಡ್ನಿ:** ತನ್ನ ಪತಿಯ ಮೂವರು ಸಂಬಂಧಿಕರನ್ನು ಕೊಲೆ ಮಾಡಿದ ಆರೋಪ ಪ್ರಕರಣದಲ್ಲಿ ದೋಷಿಯಾಗಿರುವ ಎರಿಕ್ ಪ್ಯಾಟರ್ಸನ್ ಎಂಬ ಮಹಿಳೆಗೆ ಆಸ್ಟ್ರೇಲಿಯಾ ನ್ಯಾಯಾಲಯವು ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ವಿಕ್ಟೋರಿಯನ್ ಸುಪ್ರೀಂ ಕೋರ್ಟ್ ನ್ಯಾ. ಕ್ರಿಸ್ಟೋಫರ್ ಬೀಲೆ ಅವರು, ಎರಿಕ್ ಮಾಡಿರುವ ಅಪರಾಧವು ವಿಶ್ವಾಸಘಾತವೂ ಹೌದು ಎಂದಿದ್ದಾರೆ.

ದೋಷಿ ಎರಿಕ್, ತಮ್ಮಿಂದ ದೂರವಾಗಿದ್ದ ಪತಿ ಸೈಮನ್ ಪ್ಯಾಟರ್ಸನ್ ಅವರನ್ನು ಕೊಲ್ಲಲು ಸಂಚು ಮಾಡಿದ್ದಳು. ಅದರಂತೆ, 2023ರ ಜುಲೈನಲ್ಲಿ ಸೈಮನ್, ಅವರ ಅಮ್ಮ-ಅಪ್ಪ, ಚಿಕ್ಕಮ್ಮ-ಚಿಕ್ಕಪ್ಪನನ್ನು ಊಟಕ್ಕೆ ಆಹ್ವಾನಿಸಿದ್ದಳು. ಮನೆಗೆ ಕರೆಯುವ ವೇಳೆ, ತನಗೆ ಕ್ಯಾನ್ಸರ್ ಇದೆ. ಆ ವಿಚಾರವನ್ನು ತನ್ನ ಇಬ್ಬರು ಮಕ್ಕಳಿಗೆ ತಿಳಿಸುವುದು ಹೇಗೆ ಎಂಬುದೇ ಗೊತ್ತಾಗುತ್ತಿಲ್ಲ. ಅದಕ್ಕೆ ನಿಮ್ಮ ಸಲಹೆ ಬೇಕಿದೆ ಎಂದು ಹೇಳಿ ನಂಬಿಸಿದ್ದಳು ಎನ್ನಲಾಗಿದೆ. ಸೈಮನ್ ಹೊರತುಪಡಿಸಿ ಉಳಿದವರು ಮನೆಗೆ ಊಟಕ್ಕೆ ಹೋಗಿದ್ದರು.


ಮೊದಲೇ ಮಾಡಿಕೊಂಡಿದ್ದ ಯೋಜನೆಯಂತೆ ವಿಷಪೂರಿತ ಅಣಬೆ ಸೇರಿಸಿ ತಯಾರಿಸಿದ್ದ ಗೋಮಾಂಸದ ಆಹಾರವನ್ನು ಅವರಿಗೆ ಬಡಿಸಿದ್ದಳು. ಆ ವೇಳೆ, ಗೇಲ್ ಪ್ಯಾಟರ್ಸನ್, ಡಾನ್ ಪ್ಯಾಟರ್ಸನ್, ಗೇಲ್ ಸಹೋದರಿ ಹೀದರ್ ವಿಲ್ಕಿನ್ಸನ್ ಅವರು ಮೃತಪಟ್ಟಿದ್ದರು. ಆದರೆ, ಹೀದರ್ ಪತಿ ಇಯಾನ್ ವಿಲ್ಕಿನ್ಸನ್ ಬದುಕುಳಿದಿದ್ದರು. ಈ ಪ್ರಕರಣದಲ್ಲಿ ಎರಿಕ್ ದೋಷಿ ಎಂದು ಜುಲೈನಲ್ಲಿ ಘೋಷಿಸಲಾಗಿತ್ತು. ಮೂವರನ್ನು ಕೊಂದಿರುವುದಷ್ಟೇ ಅಲ್ಲ, ಇಯಾನ್ ವಿಲ್ಕಿನ್ಸನ್ ಅವರ ಆರೋಗ್ಯಕ್ಕೆ ಶಾಶ್ವತ ಹಾನಿ ಮಾಡಿದ್ದೀರಿ. ಅಲ್ಲದೆ, ಪ್ಯಾಟರ್ಸನ್ ಮತ್ತು ವಿಲ್ಕಿನ್ಸನ್ ಕುಟುಂಬಗಳನ್ನೇ ನಾಶ ಮಾಡಿದ್ದೀರಿ. ನಿಮ್ಮ ಸ್ವಂತ ಮಕ್ಕಳಿಗೂ ಅಪಾರ ದುಃಖ ತೊಂದೊಡ್ಡಿದ್ದೀರಿ. ಅವರ ಪ್ರೀತಿಯ ಅಜ್ಜ-ಅಜ್ಜಿಯನ್ನು ಕಸಿದುಕೊಂಡಿದ್ದೀರಿ ಎಂದು ನ್ಯಾ. ಬೀಲೆ ಅವರು ತೀರ್ಪು ಪ್ರಕಟಿಸುವ ವೇಳೆ ಹೇಳಿದ್ದಾರೆ.

ಸೈಮನ್ ಅವರು ಆಹ್ವಾನವನ್ನು ಸ್ವೀಕರಿಸಿ ಊಟಕ್ಕೆ ಹೋಗಿದ್ದರೆ, ಅವರೂ ಮೃತಪಡುವ ಸಾಧ್ಯತೆ ಇತ್ತು ಎಂದಿರುವ ನ್ಯಾ. ಬೀಲೆ, ದೋಷಿ ಮಹಿಳೆಗೆ 33 ವರ್ಷಗಳವರೆಗೆ ಪರೋಲ್ ನೀಡದಂತೆಯೂ ಆದೇಶಿಸಿದ್ದಾರೆ. 2023ರ ನವೆಂಬರ್ 2ರಿಂದ ಜೈಲಿನಲ್ಲಿರುವ ಎರಿಕ್‌ಗೆ ಮೇಲ್ಮನವಿ ಸಲ್ಲಿಸಲು 28 ದಿನಗಳ ಕಾಲಾವಕಾಶ ನೀಡಲಾಗಿದೆ.

# ಭಾರತ ಸೇರಿ ಹಲವು ದೇಶಗಳಲ್ಲಿ ಇಂಟರ್‌ನೆಟ್ ವ್ಯತ್ಯಯ

**ದುಬೈ:** ಕೆಂಪು ಸಮುದ್ರದ ಮೂಲಕ ಹಾದುಹೋಗುವ ಫೈಬರ್ ಕೇಬಲ್ ತುಂಡಾಗಿದ್ದು ವಿಶ್ವಾದ್ಯಂತ ಇಂಟರ್‌ನೆಟ್ ಬಳಕೆಯಲ್ಲಿ ಸಮಸ್ಯೆಯಾಗಿದೆ. ಕೇಬಲ್ ವ್ಯವಸ್ಥೆಗೆ ಹಾನಿಯಾಗಿರವ ಕಾರಣ ಭಾರತ, ಪಾಕಿಸ್ತಾನ ಮತ್ತು ಮಧ್ಯಪ್ರಾಚ್ಯದ ಕೆಲವು ಭಾಗಗಳಲ್ಲಿ ಬಳಕೆದಾರರು ಅಡಚಣೆಗಳನ್ನು ಎದುರಿಸಿದ್ದಾರೆ ಎಂದು ಇಂಟರ್ನೆಟ್ ಸಂಪರ್ಕದ ಮೇಲೆ ಕಣ್ಣಾವಲು ಇಡುವ ನೆಟ್‌ಬ್ಲಾಕ್ಸ್ ಹೇಳಿದೆ. ಸಂಸ್ಥೆಯು ಸೌದಿ ಅರೇಬಿಯಾದ ಜೆಡ್ಡಾ ಸಮೀಪ SMW4 ಮತ್ತು IMEWE ಕೇಬಲ್ ವ್ಯವಸ್ಥೆಯಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ ಎಂದು ಮಾಹಿತಿ ನೀಡಿದೆ.

ಭಾರತದ ಟಾಟಾ ಕಮ್ಯುನಿಕೇಷನ್ಸ್ ಆಗ್ನೇಯ ಏಷ್ಯಾ-ಮಧ್ಯಪ್ರಾಚ್ಯ-ಪಶ್ಚಿಮ ಯುರೋಪ್ 4 ನಿರ್ವಹಣೆ ಮಾಡಿದರೆ, ಅಲ್ಕಾಟೆಲ್-ಲ್ಯೂಸೆಂಟ್ ನೇತೃತ್ವದ ಒಕ್ಕೂಟ ಭಾರತ-ಮಧ್ಯಪ್ರಾಚ್ಯ-ಪಶ್ಚಿಮ ಯುರೋಪ್ ಕೇಬಲ್ ನಿರ್ವಹಿಸುತ್ತಿದೆ. ಫೈಬರ್ ಕೇಬಲ್‌ಗಳು ತುಂಡಾಗಿದ್ದು ಹೇಗೆ ಎನ್ನುವುದಕ್ಕೆ ಇನ್ನೂ ನಿಖರ ಕಾರಣ ತಿಳಿದು ಬಂದಿಲ್ಲ. ನೈಸರ್ಗಿಕ ಘಟನೆಗಳು, ಅಪರೂಪದ ಸಂದರ್ಭಗಳಲ್ಲಿ ಉದ್ದೇಶಕ ಕೃತ್ಯದಿಂದ ಕೇಬಲ್ ತುಂಡಾಗುತ್ತದೆ. ಕೆಲವೊಮ್ಮೆ ಆಂಕರ್ ಡ್ರ್ಯಾಗ್‌ನಿಂದಲೂ ತುಂಡಾಗುವ ಸಾಧ್ಯತೆ ಇರುತ್ತದೆ. ಹಡಗು ಲಂಗರು ಹಾಕುವಾಗ ಭಾರವಾದ ಲೋಹದ ಸರಪಳಿ ಇರುವ ಆಂಕರ್ ಅನ್ನು ಸಮುದ್ರಕ್ಕೆ ಬೀಳಿಸಲಾಗುತ್ತದೆ. ಒಂದು ವೇಳೆ ಸರಿಯಾಗಿ ನೆಲವನ್ನು ಹಿಡಿದಿಟ್ಟುಕೊಳ್ಳದೇ ಇದ್ದರೆ ಹಡಗು ಚಲಿಸಿದಾಗ ಆಂಕರ್ ಚಲಿಸುವ ಸಾಧ್ಯತೆ ಇರುತ್ತದೆ. ಚಲಿಸಿದಾಗ ಸಮುದ್ರದ ಆಳದಲ್ಲಿ ಹಾಕಿರುವ ಆಂಕರ್‌ಗೆ ಸಿಕ್ಕಿ ಕೇಬಲ್ ತುಂಡಾಗುವ ಸಾಧ್ಯತೆಯಿದೆ.



### ಕೆಂಪು ಸಮುದ್ರ ಮಾರ್ಗ ಎಲ್ಲಿದೆ?

**ಯುರೋಪ್ ಮತ್ತು ಏಷ್ಯಾದ ವ್ಯಾಪಾರದ ಕೊಂಡಿಯೇ ಕೆಂಪು ಸಮುದ್ರ ಮಾರ್ಗ. ಯುರೋಪ್‌ನಿಂದ ಮೆಡಿಟರೆನಿಯನ್ ಸಮುದ್ರದ ಮೂಲಕ ಬರುವ ಹಡಗುಗಳು ಸೂಯೆಜ್ ಕಾಲುವೆ ಮೂಲಕ ಕೆಂಪು ಸಮುದ್ರಕ್ಕೆ ಆಗಮಿಸಿ ಯೆಮನ್ ಬಳಿ ಬಾಬ್ ಎಲ್ ಮಂಡೇಬ್ ಚೋಕ್ ಪಾಯಿಂಟ್ ಮೂಲಕ ಅರಬ್ಬಿ ಸಮುದ್ರಕ್ಕೆ ಬಂದು ಏಷ್ಯಾದ ದೇಶಗಳಿಗೆ ಹೋಗುತ್ತದೆ. ಪ್ರತಿ ದಿವಸ ಈ ಮಾರ್ಗದಲ್ಲಿ ಅಂದಾಜು 385 ಕಾರ್ಗೋ ಹಡಗುಗಳು ಸಂಚರಿಸುತ್ತವೆ.**

ಇಸ್ರೇಲ್ ಪ್ಯಾಲೆಸ್ತೀನ್ ಮೇಲೆ ಮಾಡುತ್ತಿರುವ ದಾಳಿಯನ್ನು ನಿಲ್ಲಿಸದೇ ಇದ್ದರೆ ಸಮುದ್ರದಲ್ಲಿ ಹೋಗಿರುವ ಕೇಬಲ್ ಕತ್ತರಿಸುತ್ತೇವೆ ಎಂದು ಯೆಮನ್‌ನ ಹೌತಿ ಬಂಡುಕೋರರು ಎಚ್ಚರಿಕೆ ನೀಡಿದ್ದರು. ಈ ಬಾರಿಯ ಕೃತ್ಯದಲ್ಲಿ ಹೌತಿ ಬಂಡುಕೋರರ ಕೈವಾಡ ಇರುವ ಶಂಕೆ ಈಗ ವ್ಯಕ್ತವಾಗುತ್ತಿದೆ.

## ಅದು ಕೊಲೆಗಾರನ ಸ್ನೇಹಿತರನ್ನು ತಡೆಯುವ ಮಾರ್ಗ; ಭಾರತದ ವಿರುದ್ಧ ಟ್ರಂಪ್ ಸುಂಕ ಸಮರಕ್ಕೆ ಝೆಲೆನ್ಸ್ಕಿ ಬೆಂಬಲ

# ರಷ್ಯಾ ಜೊತೆ ತೈಲ ಸಂಬಂಧ ಹೊಂದಿರುವ ರಾಷ್ಟ್ರಗಳ ವಿರುದ್ಧ ಝೆಲೆನ್ಸ್ಕಿ ಗುಡುಗು

**ಕೈವ್:** ಭಾರತವೂ ಸೇರಿದಂತೆ ರಷ್ಯಾದೊಂದಿಗೆ ಕಚ್ಚಾತೈಲ ವ್ಯಾಪಾರ ಸಂಬಂಧ ಹೊಂದಿರುವ ಪಾಲುದಾರರ ಮೇಲಿನ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರವನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸಮರ್ಥಿಸಿಕೊಂಡಿದ್ದಾರೆ. ಟ್ರಂಪ್ ಅವರ ಸುಂಕವನ್ನು ಕೊಲೆಗಾರರನ್ನು ತಡೆಯುವ ಏಕೈಕ ಮಾರ್ಗ ಎಂದು ಕರೆದಿರುವ ಝೆಲೆನ್ಸ್ಕಿ, ಈ ರಾಷ್ಟ್ರಗಳು ಉಕ್ರೇನ್ ಯುದ್ಧಕ್ಕೆ ರಷ್ಯಾಗೆ ಧನಸಹಾಯ ಮಾಡುತ್ತಿರುವುದು ವಿಷಾದಕರ ಎಂದು ಬಣ್ಣಿಸಿದ್ದಾರೆ. ಅಮೆರಿಕನ್ ಪ್ರಸಾರಕ ಎಬಿಸಿಯೊಂದಿಗೆ ಮಾತನಾಡಿದ ವೊಲೊಡಿಮಿರ್ ಝೆಲೆನ್ಸ್ಕಿ, ಮಾಸ್ಕೋದೊಂದಿಗಿನ ಕೆಲವು ರಾಷ್ಟ್ರಗಳ ಇಂಧನ ವ್ಯಾಪಾರವನ್ನು, ಉಕ್ರೇನ್ ವಿರುದ್ಧ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಪ್ರಬಲ ಅಸ್ತ್ರ ಎಂದು ಲೇಬಲ್ ಮಾಡಿದರು.

ಅಲ್ಲದೇ ಈ ವ್ಯಾಪಾರವನ್ನು ನಿರ್ಬಂಧಿಸಲು ಡೊನಾಲ್ಡ್ ಟ್ರಂಪ್ ಅವರ ಸುಂಕಗಳು ಸರಿಯಾದ ಕ್ರಮ ಎಂದು ಝೆಲೆನ್ಸ್ಕಿ ಅಭಿಪ್ರಾಯಪಟ್ಟರು. ರಷ್ಯಾದೊಂದಿಗೆ ಒಪ್ಪಂದಗಳನ್ನು ಮುಂದು ವರಿಸುವ ದೇಶಗಳ ಮೇಲೆ ಸುಂಕಗಳನ್ನು ವಿಧಿಸುವ ಅಮೆರಿಕ ಅಧ್ಯಕ್ಷರ ಕಲ್ಪನೆ ಸರಿಯಾಗಿದೆ. ಈ ಅಕ್ರಮ ಕಚ್ಚಾತೈಲ ವ್ಯಾಪಾರ ಉಕ್ರೇನ್ ಯುದ್ಧಕ್ಕೆ ಹಣಕಾಸು ನೆರವು ಒದಗಿಸುತ್ತಿದ್ದು, ಕೊಲೆಗಾರರನ್ನು ತಡೆಯಲು ಇದೊಂದು ಉತ್ತಮ ಮತ್ತು ಏಕೈಕ ಮಾರ್ಗವಾಗಿದೆ ಎಂದು ಉಕ್ರೇನ್ ಅಧ್ಯಕ್ಷ ಸಂದರ್ಶನದಲ್ಲಿ ಹೇಳಿದ್ದಾರೆ. ರಷ್ಯಾದಿಂದ ಕಚ್ಚಾತೈಲ ಖರೀದಿಸುವ ಮೂಲಕ ಉಕ್ರೇನ್ ಯುದ್ಧಕ್ಕಾಗಿ ರಷ್ಯಾಗೆ ಭಾರತ ಧನಸಹಾಯ ಮಾಡುತ್ತಿದೆ ಎಂಬ ಡೊನಾಲ್ಡ್ ಟ್ರಂಪ್ ಆಡಳಿತದ ವಾದಕ್ಕೆ ಬೆಂಬಲ ವ್ಯಕ್ತಪಡಿಸಿರುವ ವೊಲೊಡಿಮಿರ್ ಝೆಲೆನ್ಸ್ಕಿ, ಇಲ್ಲದಿದ್ದರೆ ಯುರೋಪಿಯನ್ ಯೂನಿಯನ್ ನಿರ್ಬಂಧಗಳ ಹೊರತಾಗಿಯೂ ರಷ್ಯಾ ಇಷ್ಟು ದೀರ್ಘಕಾಲ ಯುದ್ಧ ಭೂಮಿಯಲ್ಲಿ ಇರಲು ಸಾಧ್ಯವಾಗುತ್ತಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ ರಷ್ಯಾದೊಂದಿಗೆ ತೈಲ ವ್ಯಾಪಾರ ಮಾಡುತ್ತಿರುವ ಯುರೋಪಿಯನ್ ಪಾಲುದಾರರ ವಿರುದ್ಧವೂ ಗುಡುಗಿರುವ ವೊಲೊಡಿರ್‌ಝೆಲೆನ್ಸ್ಕಿ, ಪುಟಿನ್ ಅವರಿಂದ ತೈಲ ಮತ್ತು ಅನಿಲ ಖರೀದಿಸುತ್ತಿರುವ ರಾಷ್ಟ್ರಗಳಿಗೆ ಉಕ್ರೇನ್‌ನಲ್ಲಿ ಸಾಯುತ್ತಿರುವ ಜನರ ಆಕ್ರಂದನ ಕೇಳಿಸುತ್ತಿಲ್ಲ ಎಂದು ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಭಾರತದ ಕುರಿತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರ ಅಭಿಪ್ರಾಯ ಹೊಸ ವಿವಾದ ಸೃಷ್ಟಿಸುವ ಸಾಧ್ಯತೆ ಇದೆ. ಏಕೆಂದರೆ ರಷ್ಯಾದೊಂದಿಗೆ ತೈಲ ಸಂಬಂಧ ಹೊಂದಿರುವ ರಾಷ್ಟ್ರಗಳನ್ನು ಝೆಲೆನ್ಸ್ಕಿ ಕೊಲೆಗಾರನ ಸ್ನೇಹಿತರು ಎಂದು ಕರೆದಿದ್ದಾರೆ. ರಷ್ಯಾ ಕಚ್ಚಾತೈಲ ವ್ಯಾಪಾರಕ್ಕೆ ಸಂಬಂಧಿಸಿದಂತೆ ಭರತ ಈಗಾಗಲೇ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದು, ದೇಶದ ಇಂಧನ ಅಗತ್ಯತೆ ಪೂರೈಸಲು ಲಾಭದಾಯಕ ಒಪ್ಪಂದ ಮಾಡಿಕೊಳ್ಳುವುದು ನಮ್ಮ ಸಾರ್ವಭೌಮ ಹಕ್ಕು ಎಂದು ಖಚಿತವಾಗಿ ಹೇಳಿದೆ. ಒಟ್ಟಿನಲ್ಲಿ ಭಾರತ-ರಷ್ಯಾ ಕಚ್ಚತೈಲ ವ್ಯಾಪಾರ ಒಪ್ಪಂದ ಅಮೆರಿಕದ ನಿದ್ದೆಗೆಡೆಸಿದ್ದು, ಅದನ್ನು ಉಕ್ರೇನ್ ಯುದ್ಧದೊಂದಿಗೆ ತಳುಕು ಹಾಕುವ ಪ್ರಯತ್ನಕ್ಕೆ ಇದೀಗ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಧ್ವನಿಗೂಡಿಸಿದ್ದಾರೆ.

**ಅಧ್ಯಕ್ಷರ ಕಲ್ಪನೆ ಸರಿ**



### ಸಾರ್ವಭೌಮತ್ವ ಕೆಣಕುವ ಪ್ರಯತ್ನ

**ಕೈಲಾಗದವ ಮೈ ಪರಚಿಕೊಂಡ ಎಂಬಂತೆ ರಷ್ಯಾ ದಾಳಿಯನ್ನು ಸಮರ್ಥವಾಗಿ ಎದುರಿಸಲಾಗದೇ ಒದ್ದಾಡುತ್ತಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಭಾರತವೂ ಸೇರಿದಂತೆ ರಷ್ಯಾದೊಂದಿಗೆ ಕಚ್ಚಾತೈಲ ಸಂಬಂಧ ಹೊಂದಿರುವ ರಾಷ್ಟ್ರಗಳ ಮೇಲೆ ಟ್ರಂಪ್ ಹೇರಿರುವ ಸುಂಕವನ್ನು ಸಮರ್ಥಿಸಿಕೊಂಡಿದ್ದಾರೆ. ಟ್ರಂಪ್ ಸುಂಕಗಳು ಕೊಲೆಗಾರನ ಸ್ನೇಹಿತರನ್ನು ತಡೆಯುವ ಮಾರ್ಗ ಎಂದು ಹೇಳಿರುವ ಝೆಲೆನ್ಸ್ಕಿ, ರಷ್ಯಾದೊಂದಿಗೆ ತೈಲ ಸಂಬಂಧ ಹೊಂದಿರುವ ರಾಷ್ಟ್ರಗಳ ಸಾರ್ವಭೌಮತ್ವವನ್ನು ಕೆಣಕುವ ಪ್ರಯತ್ನ ಮಾಡಿದ್ದಾರೆ.**

**ಉಕ್ರೇನ್‌ನಲ್ಲಿ ಮಾನವೀಯತೆಯ ಮಾರಣಹೋಮ ನಿಲ್ಲಬೇಕಾದರೆ, ಯುರೋಪಿಯನ್ ರಾಷ್ಟ್ರಗಳು ರಷ್ಯಾದೊಂದಿಗೆ ವ್ಯವಹರಿಸುವುದನ್ನು ನಿಲ್ಲಿಸಬೇಕು. ಇಲ್ಲವಾದಲ್ಲಿ ಉಕ್ರೇನ್ ವಿಚಾರವಾಗಿ ಈ ರಾಷ್ಟ್ರಗಳು ಮೊಸಳೆ ಕಣ್ಣೀರು ಸುರಿಸುತ್ತಿವೆ ಎಂದು ನಾವು ಪರಿಗಣಿಸಬೇಕಾಗುತ್ತದೆ ಎಂದು ಉಕ್ರೇನ್ ಅಧ್ಯಕ್ಷ ಎಚ್ಚರಿಕೆ ನೀಡಿದ್ದಾರೆ.**

## ಮಿನಿ ನ್ಯೂಸ್

### ಗುಂಡಿಕ್ಕಿ ಉಗ್ರನ ಹತ್ಯೆ: ಯೋಧನಿಗೆ ಗಾಯ

**ಶ್ರೀನಗರ:** ಜಮ್ಮು-ಕಾಶ್ಮೀರದ ಕುಲ್ಗಾಮ್‌ನಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಭಯೋತ್ಪಾದಕನನ್ನು ಹತ್ಯೆ ಮಾಡುವಲ್ಲಿ ಸೇನಾಪಡೆ ಯಶಸ್ವಿಯಾಗಿದ್ದು ಗುಂಡಿನ ದಾಳಿಯಲ್ಲಿ ಸೈನಿಕರೊಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ. ಗುಡರ್ ಅರಣ್ಯ ಪ್ರದೇಶದಲ್ಲಿ ಭಯೋತ್ಪಾದಕರು ಇರುವ ಬಗ್ಗೆ ಮಾಹಿತಿ ಪಡೆದ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿದ್ದವು, ಈ ವೇಳೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದರು, ಇದಕ್ಕೆ ಪ್ರತಿಯಾಗಿ ಸೇನಾ ಪಡೆಗಳು ದಾಳಿ ನಡೆಸಿ ಓರ್ವ ಭಯೋತ್ಪಾದಕನನ್ನು ಹತ್ಯೆ ಮಾಡುವಲ್ಲಿ ಯಶಸ್ವಿಯಾಗಿವೆ.

ದಕ್ಷಿಣ ಕಾಶ್ಮೀರದ ಗುಡರ್ ಅರಣ್ಯ ಪ್ರದೇಶದಲ್ಲಿ ಇಬ್ಬರು ಭಯೋತ್ಪಾದಕರು ಸಿಕ್ಕಿಬಿದ್ದಿದ್ದಾರೆ, ಪ್ರಸ್ತುತ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸೇನಾ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ. ಸೇಬು ತೋಟಗಳಲ್ಲಿ ಬಿದ್ದಿರುವ ಭಯೋತ್ಪಾದಕನ ಮೃತದೇಹ ಪತ್ತೆಯಾಗಿದ್ದು, ಭಯೋತ್ಪಾದಕನ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ. ಆತನ ಸುಳಿವು ಸಿಕ್ಕ ನಂತರ ಇನ್ನಷ್ಟು ಮಾಹಿತಿ ಲಭ್ಯವಾಗಲಿದೆ ಎಂದು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಪೊಲೀಸ್, ಭಾರತೀಯ ಸೇನೆ ಮತ್ತು ಸಿಆರ್‌ಪಿಎಫ್‌ನ ಸಿಬ್ಬಂದಿ ಪ್ರಸ್ತುತ ಜಂಟಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಕಾಶ್ಮೀರ ವಲಯ ಪೊಲೀಸರು ತಿಳಿಸಿದ್ದಾರೆ. ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ, ಕುಲ್ಗಾಮ್‌ನ ಗುಡ್ಡರ್ ಅರಣ್ಯದಲ್ಲಿ ಎನ್‌ಕೌಂಟರ್ ಪ್ರಾರಂಭವಾಗಿದೆ. ಜಮ್ಮು, ಕಾಶ್ಮೀರ ಪೊಲೀಸರು, ಸೇನೆ, ಸಿಆರ್‌ಪಿಎಫ್‌ನ ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿದೆ. ಗುಂಡಿನ ದಾಳಿಯಲ್ಲಿ ಗಾಯಗೊಂಡ ಸೈನಿಕರೊಬ್ಬರು ಸೇನಾ ಜೆಸಿಒ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಭದ್ರತಾ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ. ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಮಾಹಿತಿಯ ಮೇರೆಗೆ ಭದ್ರತಾ ಪಡೆಗಳು ಗುಡಾರ್ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿದವು. ಭಯೋತ್ಪಾದಕರು ಭದ್ರತಾ ಪಡೆಗಳ ಸ್ಥಾನಗಳ ಮೇಲೆ ಗುಂಡು ಹಾರಿಸಿದ ನಂತರ ಶೋಧ ಕಾರ್ಯಾಚರಣೆ ನಡೆಯಿತು ಎಂದು ತಿಳಿಸಲಾಗಿದೆ.

### ಇಸ್ರೇಲ್ ಏರ್‌ಪೋರ್ಟ್‌ಗೆ ಅಪ್ಪಳಿಸಿದ ಹುಥಿ ಬಂಡುಕೋರರು ಹಾರಿಸಿದ ಡ್ರೋನ್

**ಟೆಲ್ ಅವಿವ್:** ಯೆಮೆನ್‌ನ ಹುಥಿ ಬಂಡುಕೋರರು ಹಾರಿಸಿದ ಡ್ರೋನ್ ಇಸ್ರೇಲ್‌ನ ಬಹುಪದರದ ವಾಯು ರಕ್ಷಣೆಯನ್ನು ಭೇದಿಸಿ ದೇಶದ ದಕ್ಷಿಣ ವಿಮಾನ ನಿಲ್ದಾಣಕ್ಕೆ ಅಪ್ಪಳಿಸಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಸ್ಫೋಟದಿಂದ ವಿಮಾನನಿಲ್ದಾಣದ ಗಾಜಿನ ಕಿಟಕಿಗಳು ಒಡೆದು, ಒಬ್ಬ ವ್ಯಕ್ತಿ ಗಾಯಗೊಂಡರು. ಕೂಡಲೇ ವಾಣಿಜ್ಯ ವಿಮಾನಗಳ ಹಾರಾಟವನ್ನು ಸ್ವಲ್ಪ ಸಮಯದವರೆಗೆ ಸ್ಥಗಿತಗೊಳಿಸಲಾಗಿತ್ತು ಎಂದು ವರದಿ ತಿಳಿಸಿದೆ. ದಾಳಿಯಿಂದ ರಾಮನ್ ವಿಮಾನ ನಿಲ್ದಾಣಕ್ಕೆ ಹಾನಿಯಾಗಿದ್ದು. ಕೆಲ ಗಂಟೆಗಳಲ್ಲಿ ವಿಮಾನಗಳ ಹಾರಾಟ ಪುನರಾರಂಭಗೊಂಡವು. ಹುಥಿ ಬಂಡುಕೋರರು ದಾಳಿಯ ಹೊಣೆ ಹೊತ್ತುಕೊಂಡಿದ್ದಾರೆ.

ಇತ್ತೀಚೆಗೆ ಯೆಮೆನ್ ಮೇಲೆ ವೈಮಾನಿಕ ದಾಳಿ ನಡೆಸಿದ್ದ ಇಸ್ರೇಲ್, ಯೆಮೆನ್ ಪ್ರಧಾನಿ ಮತ್ತು ಇತರರನ್ನು ಕೊಂದಿತ್ತು. ಇದರ ಬೆನ್ನಲ್ಲೇ ಹುಥಿ ಬಂಡುಕೋರರು ಪ್ರತೀಕಾರದ ದಾಳಿ ನಡೆಸಿದ್ದಾರೆ.

ಈ ಮಧ್ಯೆ, ಇಸ್ರೇಲ್ ತನ್ನ ಕಸ್ಟಡಿಯಲ್ಲಿರುವ ಪ್ಯಾಲೆಸ್ಟೀನಿಯನ್ ಜನರಿಗೆ ಮೂಲಭೂತ ಸೌಕರ್ಯ ಖಚಿತಪಡಿಸಿಕೊಳ್ಳಲು ಸಾಕಷ್ಟು ಆಹಾರವನ್ನು ಒದಗಿಸುತ್ತಿಲ್ಲ ಎಂದು ಇಸ್ರೇಲ್ ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪು ನೀಡಿದೆ. ಬಂಧನ ಕೇಂದ್ರಗಳಲ್ಲಿರುವ ಸಾವಿರಾರು ಪ್ಯಾಲೆಸ್ಟೀನಿಯನ್ನರಿಗೆ ಕಾನೂನಿಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಖಾತರಿಪಡಿಸುವಂತೆ ಅದು ಸರ್ಕಾರಕ್ಕೆ ಆದೇಶಿಸಿದೆ. 2023ರ ಅಕ್ಟೋಬರ್ 7 ರಂದು ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸಿದ ಮಾರಕ ದಾಳಿಯ ನಂತರ, ಗಾಜಾ ಮತ್ತು ಪ್ಯಾಲೆಸ್ಟೀನ್ ಪಶ್ಚಿಮ ದಂಡೆಯಲ್ಲಿ ಹಮಾಸ್ ವಿರುದ್ಧ ಇಸ್ರೇಲ್ ನಡೆಸುತ್ತಿರುವ ಕಾರ್ಯಾಚರಣೆಯ ಭಾಗವಾಗಿ ಹಲವರನ್ನು ಬಂಧಿಸಲಾಗಿದೆ.

### ವಿದೇಶಿ ಪ್ರವಾಸಕ್ಕಲ್ಲ, ಪ್ರವಾಹ ಪೀಡಿತ ಸ್ಥಳಕ್ಕೆ ತೆರಳಿ: ರಾಹುಲ್‌ಗೆ ಬಿಜೆಪಿ ಸಲಹೆ

**ನವದೆಹಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿದೇಶಿ ಪ್ರವಾಸಕ್ಕೆ ತೆರಳುವ ಬದಲು, ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಲಿ ಎಂದು ಬಿಜೆಪಿ ಸಲಹೆ ನೀಡಿದೆ. ರಾಹುಲ್ ಗಾಂಧಿ ಅವರು ಮಲೇಷ್ಯಾ ಪ್ರವಾಸಕ್ಕೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿಯು ಅವರ ಕಾಲೆಳಿದಿದೆ. ರಜೆಯಲ್ಲಿ ವಿದೇಶಿ ಪ್ರವಾಸಕ್ಕೆ ತೆರಳುತ್ತಿರುವ ರಾಹುಲ್ ಗಾಂಧಿ ಅವರಿಗೆ ಶುಭಾಶಯಗಳು. ಕೆಲವೊಮ್ಮೆ ಸಾಮಾನ್ಯ ರಾಜಕಾರಣಿಯಾಗಿದ್ದರೆ, ನಾನು ತುಂಬಾ ಕೆಲಸ ಮಾಡಿದ್ದೇನೆ ಎಂದು ರಜೆ ತೆಗೆದುಕೊಳ್ಳುತ್ತೇನೆ ಎನ್ನುತ್ತಾರೆ. ಆದರೆ, ಸಾರ್ವಜನಿಕ ಜೀವನದಲ್ಲಿ ಯಾವುದೇ ವಿರಾಮಗಳು ಇರುವುದಿಲ್ಲ ಎಂದು ರಾಹುಲ್ ಅವರಿಗೆ ನೆನಪಿಸುತ್ತೇನೆ ಎಂದು ಬಿಜೆಪಿ ನಾಯಕ ರವಿ ಶಂಕರ್ ಪ್ರಸಾದ್ ಅವರು ಹೇಳಿದ್ದಾರೆ. ಜನ ನಾಯಕನಾದವರು ಜನರ ಕಷ್ಟಗಳಿಗೆ ಸದಾ ಸ್ಪಂದಿಸಬೇಕಾಗುತ್ತದೆ. ಪಂಜಾಬ್, ಕರ್ನಾಟಕದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಅಲ್ಲಿ ಸಂಕಷ್ಟದಲ್ಲಿರುವ ಜನರನ್ನು ರಾಹುಲ್ ಭೇಟಿಯಾಗಿದ್ದರೆ ಒಳ್ಳೆಯದಿತ್ತು ಎಂದಿದ್ದಾರೆ. ಬಿಹಾರ ರಾಜಕಾರಣದ ಬಿಸಿ ತಾಳಲಾರದೆ ಕಾಂಗ್ರೆಸ್‌ನ ಯುವ ರಾಜರು ವಿದೇಶಿ ಪ್ರವಾಸ ಮಾಡುತ್ತಿದ್ದಾರೆಯೇ ಅಥವಾ ಯಾರಿಗೂ ತಿಳಿಯದ ರಹಸ್ಯ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆಯೇ ಎಂದು ಅಮಿತ್ ಮಾಳವೀಯ ಪ್ರಶ್ನಿಸಿದ್ದಾರೆ. ಜನರು ಪ್ರವಾಹದಿಂದ ಸಂಕಷ್ಟದಲ್ಲಿರುವಾಗ ರಾಹುಲ್ ಗಾಂಧಿ ಅವರು ರಜೆಗಾಗಿ ತೆರಳುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

### ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಸಹಾಯಧನ ಹೆಚ್ಚಳ

**ಪಟ್ನಾ:** ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಬಿಹಾರದಲ್ಲಿ ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರ ಸಹಾಯಧಾನವನ್ನು ಹೆಚ್ಚಳ ಮಾಡಲಾಗಿದೆ. ಈ ಬಗ್ಗೆ ಸಿಎಂ ನಿತೀಶ್ ಕುಮಾರ್ ಸೋಮವಾರ ಘೋಷಣೆ ಮಾಡಿದ್ದಾರೆ. ಎಕ್ಸ್ ಪೋಸ್ಟ್‌ನಲ್ಲಿ ಮಾಡಿರುವ ಅವರು, ಅಂಗನವಾಡಿ ಕಾರ್ತಕರ್ತೆಯರು ಇನ್ನು ಮುಂದೆ 7 ಸಾವಿರಕ್ಕೆ ಬದಲಾಗಿ 9 ಸಾವಿರ ಪಡೆಯಲಿದ್ದಾರೆ ಎಂದು ಹೇಳಿದ್ದಾರೆ. ಅಂಗನವಾಡಿ ಸಹಾಯಕಿಯರ ಸಹಾಯಧನವನ್ನು 4 ಸಾವಿರದಿಂದ 4,500ಕ್ಕೆ ಏರಿಕೆ ಮಾಡಲಾಗಿದೆ. ಈ ಬಗ್ಗೆ ಸಂಬಂಧಿತ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ.

ಮಕ್ಕಳು, ಗರ್ಭಿಣಿಯರ ಪೋಷಣೆ ಮತ್ತು ಒಟ್ಟಾರೆ ಯೋಗಕ್ಷೇಮ ಸುಧಾರಣೆಯಲ್ಲಿ ಅಂಗನವಾಡಿ ಕಾರ್ಯಕರ್ತರ ಹಾಗೂ ಸೇವಕಿಯಯರು ಬಹುಮುಖ್ಯ ಪಾತ್ರ ವಹಿಸುತ್ತಾರೆ ಎಂದು ನಿತೀಶ್ ಹೇಳಿದ್ದಾರೆ. 2005ರಲ್ಲಿ ನಾವು ಅಧಿಕಾರಕ್ಕೆ ಬಂದ ಬಳಿಕ, ಮಕ್ಕಳು, ಗರ್ಭಿಣಿಯರ ಕಲ್ಯಾಣಕ್ಕೆ ನಾವು ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಈ ಯೋಜನೆಗಳನ್ನು ಜಾರಿಗೆ ತರುವಲ್ಲಿ ಅಂಗನವಾಡಿಗಳ ಪಾತ್ರವನ್ನು ಪರಿಗಣಿಸಿ, ಸಹಾಯಧನ ಹೆಚ್ಚಿಸುವ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ.

# ಪುಷ್ಪ 3 ಬರೋದು ಪಕ್ಕಾ

ಅಲ್ಲು ಅರ್ಜುನ್ ನಟನೆಯ 'ಪುಷ್ಪ ದಿ ರೈಸ್' ಹಾಗೂ 'ಪುಷ್ಪ ದಿ ರೂಲ್' ಸರಣಿ ಸಿನಿಮಾ ಬಾಕ್ಸಾಫೀಸ್ ಕೊಳ್ಳೆ ಹೊಡೆದ ದಕ್ಷಿಣ ಭಾರತದ ಹೆಸರಾಂತ ಸೀಕ್ವೆಲ್ ಸಿನಿಮಾ. ಈ ಹಿಟ್ ಸರಣಿ ಮುಂದುವರೆಯುವ ಸುಳಿವನ್ನ ಎರಡನೇ ಭಾಗದ ಅಂತ್ಯದಲ್ಲಿ ಚಿತ್ರತಂಡ ತೋರಿಸಿತ್ತು. ಆದರೆ ಯಾವಾಗ ಪುಷ್ಪ 3 ಬರುತ್ತೆ.. ಸ್ಕ್ರಿಪ್ಟ್ ಪ್ರಗತಿಯಲ್ಲಿದೆಯಾ ಇಲ್ವಾ ಅಥವಾ ಚಮಕ್ ಕೊಟ್ಟಿರೋದಾ.. ಹೀಗೆ ಪುಷ್ಪ ಅಭಿಮಾನಿಗಳ ಯಾವುದೇ ಪ್ರಶ್ನೆಗೂ ಪುಷ್ಪ ರಿಲೀಸ್ ಬಳಿಕ ಚಿತ್ರತಂಡ ಉತ್ತರಿಸಿರಲಿಲ್ಲ. ಆದರೆ ಮೊದಲ ಬಾರಿಗೆ ಪುಷ್ಪ 3 ಸಿನಿಮಾ ಬಗ್ಗೆ ಹಾಗೂ ರೆಡಿಯಾಗುತ್ತಿರುವ ಸ್ಕ್ರಿಪ್ಟ್ ಬಗ್ಗೆ ಅಲ್ಲು ಅರ್ಜುನ್ ಮಾತನಾಡಿದ್ದಾರೆ.

ಪ್ರಸಕ್ತ ಸಾಲಿನ ಸೈಮಾ ಅತ್ಯುತ್ತಮ ತೆಲುಗು ನಟ ಪ್ರಶಸ್ತಿ ಅಲ್ಲು ಅರ್ಜುನ್‌ಗೆ ಲಭಿಸಿದ್ದು, ದುಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿದ್ದಾರೆ. ಈ ವೇಳೆ ವೇದಿಕೆಯಲ್ಲೇ 'ಪುಷ್ಪ 3 ಖಂಡಿತ ಬರುತ್ತೆ ಎಂದಿದ್ದಾರೆ ಅಲ್ಲು ಅರ್ಜುನ್. ಈ ಮೂಲಕ ಪುಷ್ಪರಾಜ್ ಅಭಿಮಾನಿಗಳಿಗೆ ಬಿಸಿ ಬಿಸಿ ಸುದ್ದಿ ಪುಷ್ಪ ಕಡೆಯಿಂದಲೇ ಬಂದಿದೆ. ಈ ವೇಳೆ ಚಿತ್ರದ ನರದೇಶಕ ಸುಕುಮಾರ್ ಉಪಸ್ಥಿತರಿದ್ದರು. ಇಬ್ಬರೂ ಒಟ್ಟಿಗೆ ಪುಷ್ಪ3 ತಯಾರಾಗ್ತಿರೋ ಬಗ್ಗೆ ಕನ್ಫರ್ಮೇಷನ್ ಕೊಟ್ಟಿದ್ದಾರೆ. 'ಪುಷ್ಪ 3 ಖಂಡಿತವಾಗಲೂ ಬರುತ್ತೆ. ಸ್ಕ್ರಿಪ್ಟ್ ಪ್ರಗತಿಯಲ್ಲಿದೆ ಎಂದು ಅಲ್ಲು ಅರ್ಜುನ್ ಪುಷ್ಪ 3ಗೆ ಅಧಿಕೃತ ಮುದ್ರೆ ಒತ್ತಿದ್ದಾರೆ. ಅಲ್ಲಿಗೆ ಪಾರ್ಟಿ ಇಲ್ವಾ ಪುಷ್ಪ ಎಂದು ಕೇಳುತ್ತಿದ್ದ ಪುಷ್ಪನ ಫ್ಯಾನ್ಸ್‌ಗೆ ಖುಷಿಯೋ ಖುಷಿ.





# ಸಿನಿಮಾ ನಿರ್ಮಾಣದತ್ತ ಹೆಜ್ಜೆ ಇಟ್ಟ ಪ್ರಜ್ವಲ್

ಕನ್ನಡ ಪ್ರೇಕ್ಷಕರಿಗೆ ಸದಭಿರುಚಿಯ ಸಿನಿಮಾಗಳ ಮೂಲಕ ಉತ್ತಮ ಮನರಂಜನೆ ನೀಡುವ ಉದ್ದೇಶದಿಂದ ಪ್ರಾರಂಭವಾದ ಸಂಸ್ಥೆ ಪುರಾತನ ಫಿಲಂಸ್. ಈಗಾಗಲೇ ಸನ್ ಆಫ್ ಮುತ್ತಣ್ಣ ಎಂಬ ಭಾವನಾತ್ಮಕ ಕಥೆಯ ಚಿತ್ರ ನಿರ್ಮಿಸಿ ತೆರೆಗೆ ತರುತ್ತಿರುವ ಪುರಾತನ ಫಿಲಂಸ್ ಮುಂದಿನ ದಿನಗಳಲ್ಲಿ ನಟ ಪ್ರಜ್ವಲ್ ದೇವರಾಜ್ ಅವರ ಜೊತೆಗೂಡಿ ಅತ್ಯುತ್ತಮ ತಾಂತ್ರಿಕತೆಯ ಹಾಗೂ ಸದಭಿರುಚಿಯ ಸಿನಿಮಾಗಳನ್ನು ನಿರ್ಮಾಣ ಮಾಡಲು ಮುಂದಾಗಿದೆ.

ಪುರಾತನ ಫಿಲಂಸ್ ಹಾಗೂ ಪ್ರಜ್ವಲ್ ದೇವರಾಜ್ ಸೇರಿ ಎಂಬ ನೂತನ ನಿರ್ಮಾಣ ಸಂಸ್ಥೆಯನ್ನು ಹುಟ್ಟುಹಾಕಿದ್ದು, ಇದರ ಮೂಲಕ ಪ್ರತಿಭಾವಂತ ಕಲಾವಿದರು, ತಂತ್ರಜ್ಞರು ಮತ್ತು ಒಳ್ಳೆಯ ಕಥೆಗಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಲಿದೆ. ಈಗಾಗಲೇ ಹೊಸ ಪ್ರತಿಭೆಗಳಿಗೆ ಮಣೆ ಹಾಕುವ ನಿಟ್ಟಿನಲ್ಲಿ ಕೆಲವು ಕೆಲಸಗಳನ್ನು ಮಾಡುತ್ತಿದೆ.

**ಸಾಮಾಜಿಕ ಮಾಧ್ಯಮದಲ್ಲಿ ವೈರಲ್**

ಇದುವರೆಗೆ ಲವರ್ ಬಾಯ್, ಆಕ್ಷನ್ ಹೀರೋ ಹೀಗೆ ಎಲ್ಲಾ ತರಹದ ಪಾತ್ರಗಳನ್ನ ನಿರ್ವಹಿಸುವ ಮೂಲಕ ಗುರುತಿಸಿಕೊಂಡ ನಟ ಪ್ರಜ್ವಲ್ ದೇವರಾಜ್ ಇದೀಗ ಚಲನಚಿತ್ರ ನಿರ್ಮಾಣದತ್ತ ಹೊಸ ಹೆಜ್ಜೆ ಇಟ್ಟಿದ್ದು, ದೊಡ್ಡ ಸಂಸ್ಥೆಯ ಜತೆ ಕೈಜೋಡಿಸಿದ್ದಾರೆ. ಹೊಸ ಹೊಸ ಸಿನಿಮಾಗಳನ್ನು ಮಾಡುವ ಪ್ಲ್ಯಾನ್ ಮಾಡಿದ್ದಾರೆ.



# ಮಲ್ಲಿಗೆ ಹೂ ಒಯ್ದಿದ್ದಕ್ಕೆ ನಟಿ ನವ್ಯಾಗೆ ದಂಡ

ಕನ್ನಡವೂ ಸೇರಿದಂತೆ ವಿವಿಧ ದಕ್ಷಿಣ ಭಾರತೀಯ ಭಾಷಾ ಸಿನಿಮಾಗಳಲ್ಲಿ ನಟಿಸಿರುವ ಮಲಯಾಳಿ ನಟಿ ನವ್ಯಾ ನಾಯರ್ ಅವರಿಗೆ ಮೆಲ್ಬೋರ್ನ್ ಏರ್‌ಪೋರ್ಟ್‌ನಲ್ಲಿ ಲಕ್ಷ ರೂಗೂ ಅಧಿಕ ಮೊತ್ತದ ದಂಡ ವಿಧಿಸಿದ ಘಟನೆ ನಡೆದಿದೆ. ಮಲ್ಲಿಗೆ ಹೂವನ್ನು ತೆಗೆದುಕೊಂಡು ಹೋಗಿದ್ದು ಈ ನಟಿ ಮಾಡಿದ ತಪ್ಪು. ನವ್ಯಾ ಅವರು ತಮ್ಮ ಹ್ಯಾಂಡ್ ಬ್ಯಾಗ್‌ನಲ್ಲಿ ಕೇವಲ 15 ಸೆಂಟಿಮೀಟರ್ ಉದ್ದದ ಮಲ್ಲಿಗೆ ಹೂವಿನ ಪುಟ್ಟ ಹಾರವನ್ನು ಇಟ್ಟುಕೊಂಡಿದ್ದರು. ಏರ್‌ಪೋರ್ಟ್ ಅಧಿಕಾರಿಗಳು ಈಕೆಗೆ 1,980 ಆಸ್ಟ್ರೇಲಿಯನ್ ಡಾಲರ್ (ಸುಮಾರು 1.14 ಲಕ್ಷ ರೂ) ದಂಡ ಹಾಕಿದ್ದಾರೆ. ನವ್ಯಾ ನಾಯರ್ ಅವರು ಈ ವಿಷಯವನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಆಸ್ಟ್ರೇಲಿಯಾದ ವಿಕ್ಟೋರಿಯಾ ಮಲಯಾಳಿ ಸಂಘವೊಂದು ಓನಂ ಆಚರಣೆಗೆ ನವ್ಯಾ ನಾಯರ್ ಅವರನ್ನು ಆಹ್ವಾನಿಸಿತ್ತು.

**ಆಸ್ಟ್ರೇಲಿಯಾಗೆ ಹೋಗುವ ಮುನ್ನ ಎಚ್ಚರ**

ಇಲ್ಲಿಗೆ ಬರುವ ಮುನ್ನ ನವ್ಯಾ ಸಿಂಗಾಪುರಕ್ಕೆ ಹೋಗಿದ್ದರು. ಸಿಂಗಾಪುರಕ್ಕೆ ಹೋಗುವಾಗ ಮಲ್ಲಿಗೆ ಹಾರವನ್ನು ಇವರ ತಂದೆಯು ಎರಡಾಗಿ ಮಾಡಿ, ಒಂದನ್ನು ತಲೆಗೆ ಮುಡಿದುಕೊಳ್ಳಲು ಹೇಳಿದ್ದರು. ಆಸ್ಟ್ರೇಲಿಯಾಗೆ ಹೋದಾಗ ಮತ್ತೊಂದು ಭಾಗದ ಹಾರವನ್ನು ಮುಡಿದುಕೊಳ್ಳುವಂತೆ ಹೇಳಿದ್ದರು. ನವ್ಯಾ ಹಾಗೇ ಮಾಡಿದ್ದರು.

ಸಿಂಗಾಪುರದಿಂದ ನೇರವಾಗಿ ಆಸ್ಟ್ರೇಲಿಯಾದ ಮೆಲ್ಬೋರ್ನ್ ವಿಮಾನ ನಿಲ್ದಾಣಕ್ಕೆ ಬಂದಿದ್ದಾರೆ. ಮಲ್ಲಿಗೆ ಹೂ ಹಾರದ ಒಂದು ಭಾಗವನ್ನು ಹ್ಯಾಂಡ್‌ಬ್ಯಾಗ್‌ನಲ್ಲಿ ಇರಿಸಿಕೊಂಡಿದ್ದರು. ಅಲ್ಲಿಯ ಅಧಿಕಾರಿಗಳು ಪರಿಶೀಲಿಸಿದಾಗ ಹಾರ ಸಿಕ್ಕಿತು. ಅದಕ್ಕೆ ಆಸ್ಟ್ರೇಲಿಯಾದಲ್ಲಿ ಬಹಳ ಕಠಿಣವಾದ ಜೈವಿಕ ಭದ್ರತೆಯ ನಿಯಮಗಳಿವೆ. ಅಲ್ಲಿರುವ ಸೂಕ್ಷ್ಮ ಜೈವಿಕ ಪರಿಸರವನ್ನು ಸಂರಕ್ಷಿಸಲು ಬಿಗಿ ಕಾನೂನು ರೂಪಿಸಲಾಗಿದೆ.



# ಪ್ರಚಾರಕ್ಕೆ ಕರೆದರೂ ಬಾರದ ಅನುಷ್ಕಾ ಶೆಟ್ಟಿ

ಒಂದು ಸಿನಿಮಾ ಗೆಲ್ಲಬೇಕು ಎಂದರೆ ಅದಕ್ಕೆ ಪ್ರಚಾರ ತುಂಬಾನೇ ಮುಖ್ಯ. ಸಿನಿಮಾ ಪ್ರಚಾರ ಮಾಡಲು ನಾಯಕ-ನಾಯಕಿ ಬಂದಿಲ್ಲ ಎಂದರೆ ಅದು ಚಿತ್ರಕ್ಕೆ ದೊಡ್ಡ ಹಿನ್ನಡೆ ಎಂದೇ ಹೇಳಬಹುದು. 'ಘಾಟಿ' ಸಿನಿಮಾ ಚಿತ್ರಕ್ಕೂ ಈಗ ಅದೇ ಆಗಿದೆ. ಅನುಷ್ಕಾ ಶೆಟ್ಟಿ ಅವರು 'ಘಾಟಿ' ಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಹಿಳಾ ಪ್ರಧಾನ ಸಿನಿಮಾ ಇದು. ಆದರೆ, ಅವರು ಮೊದಲಿನ ಚಾರ್ಮ್ ಉಳಿಸಿಕೊಳ್ಳಲು ವಿಫಲವಾಗಿದ್ದಾರೆ. 'ಘಾಟಿ' ಸಿನಿಮಾ ಸೆಪ್ಟೆಂಬರ್ 5ರಂದು ರಿಲೀಸ್ ಆಯಿತು. ಸಿನಿಮಾ ಮೇಲಿರೋ ಹೈಪ್‌ನಿಂದ ಚಿತ್ರ ಮೊದಲ ದಿನ 2 ಕೋಟಿ ರೂಪಾಯಿ ಗಳಿಕೆ ಮಾಡಿತು. ಶನಿವಾರ 1.74 ಕೋಟಿ ರೂಪಾಯಿ ಹಾಗೂ ಭಾನುವಾರ 1.15 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಈ ಮೂಲಕ ಚಿತ್ರದ ಒಟ್ಟಾರೆ ಕಲೆಕ್ಷನ್ 4.89 ಕೋಟಿ ರೂಪಾಯಿ ಆಗಿದೆ. ಸಿನಿಮಾದ ಕಲೆಕ್ಷನ್ ಏರಿಕೆ ಕಾಣುವ ಬದಲು ಇಳಿಕೆ ಕಂಡಿದೆ. 'ಘಾಟಿ' ಸಿನಿಮಾಗೆ ಬುಕ್ ಮೈ ಶೋನಲ್ಲಿ ಒಳ್ಳೆಯ ರೇಟಿಂಗ್ ಸಿಕ್ಕಿದೆ. ಚಿತ್ರಕ್ಕೆ ಈವರೆಗೆ (ಸೆಪ್ಟೆಂಬರ್ 8 ಮಧ್ಯಾಹ್ನ 12.30) 4.4 ಸಾವಿರ ಜನರು ವೋಟ್ ಮಾಡಿದ್ದು, 8.3 ರೇಟಿಂಗ್ ಸಿಕ್ಕಿದೆ. ಚಿತ್ರವೊಂದಕ್ಕೆ 8+ ರೇಟಿಂಗ್ ಸಿಕ್ಕರೆ ಅದು ಉತ್ತಮವಾಗಿದೆ ಎಂದನ್ನಬಹುದು. ಆದಾಗ್ಯೂ 'ಘಾಟಿ' ಸಿನಿಮಾ ವೀಕ್ಷಣೆಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ತೆರಳುತ್ತಿಲ್ಲ. ಇದಕ್ಕೆ ಅನುಷ್ಕಾ ಶೆಟ್ಟಿ ನೇರ ಕಾರಣ ಎಂದು ಅನೇಕರು ಹೇಳಿದ್ದಾರೆ. 'ಬಾಹುಬಲಿ', 'ಭಾಗಮತಿ' ಸಿನಿಮಾಗಳ ರಿಲೀಸ್ ಸಂದರ್ಭದಲ್ಲಿ ಅನುಷ್ಕಾ ಶೆಟ್ಟಿ ಅವರು ಸಾಕಷ್ಟು ಪ್ರಚಾರ ಮಾಡಿದ್ದರು. ಆದರೆ, 'ಘಾಟಿ' ಸಿನಿಮಾ ಪ್ರಚಾರಕ್ಕೆ ಅವರು ತೆರಳೇ ಇಲ್ಲ.

# ನಟನೆ ಬಗ್ಗೆ ಆಸಕ್ತಿ ಇಲ್ಲ ಗೂಂಡಾಗಿರಿ ಮಾತ್ರ ಗೊತ್ತು

ಸಲ್ಮಾನ್ ಖಾನ್ ನಟನೆಯ 'ದಬಂಗ್' ಚಿತ್ರಕ್ಕೆ 15 ವರ್ಷಗಳು ಪೂರ್ಣಗೊಳ್ಳುವುದರಲ್ಲಿದೆ. ಹೀಗಿರುವಾಗಲೇ ಈ ಚಿತ್ರದ ನಿರ್ದೇಶಕ ಅಭಿನವ್ ಕಶ್ಯಪ್ ಅವರು ಸಲ್ಲು ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಸಲ್ಮಾನ್ ಖಾನ್‌ಗೆ ನಟನೆ ಬಗ್ಗೆ ಯಾವುದೇ ಆಸಕ್ತಿ ಇಲ್ಲ ಎಂದು ಹೇಳಿದ್ದಾರೆ. ಜೊತೆಗೆ ಅವರನ್ನು ಗೂಂಡಾ ಎಂದು ಕೂಡ ಕರೆದಿದ್ದಾರೆ. ಸದ್ಯ ಅವರು ನೀಡಿರುವ ಹೇಳಿಕೆ ಎಲ್ಲೆಡೆ ಚರ್ಚೆ ಆಗುತ್ತಾ ಇದೆ.

2010ರಲ್ಲಿ 'ದಬಾಂಗ್' ಸಿನಿಮಾ ರಿಲೀಸ್ ಆಯಿತು. ಆಗಿನ ಕಾಲದಲ್ಲಿ ಸಿನಿಮಾ ದೊಡ್ಡ ಮಟ್ಟದಲ್ಲಿ ಕಲೆಕ್ಷನ್ ಮಾಡಿತು. ಅಭಿನವ್ ಅವರು ಸಲ್ಲು ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. 'ಸಲ್ಮಾನ್ ಖಾನ್ ಅವರು ಸಿನಿಮಾ ಬಗ್ಗೆ ಯಾವಾಗಲೂ ಆಸಕ್ತಿ ತೋರಿಸಿಲ್ಲ. ನಟನೆಯ ಬಗ್ಗೆ ಅವರಿಗೆ ಆಸಕ್ತಿಯೇ ಇಲ್ಲ. ಕಳೆದ 25 ವರ್ಷಗಳಿಂದ ಇದೇ ನಡೆದುಕೊಂಡು ಬಂದಿದೆ. ಸೆಲೆಬ್ರಿಟಿ ಎನ್ನುವ ಟ್ಯಾಗ್ ಅವರಿಗೆ ಬೇಕಷ್ಟೆ. ಅವರು ಗೂಂಡಾ' ಎಂದಿದ್ದಾರೆ ಅಭಿನವ್.

'ಬಾಲಿವುಡ್‌ನ ಸ್ಟಾರ್‌ಗಿರಿ ವ್ಯವಸ್ಥೆಯ ಪಿತಾಮಹನೇ ಸಲ್ಮಾನ್ ಖಾನ್. ಅವರು ಸಿನಿಮಾ ಕುಟುಂಬ ಹಿನ್ನೆಲೆಯಿಂದ ಬಂದವರು. ಅವರು ಆ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸಲ್ಮಾನ್ ಖಾನ್ ಸೇಡಿನ ಮನುಷ್ಯ. ಅವರು ಸಂಪೂರ್ಣ ಪ್ರಕ್ರಿಯೆಯನ್ನೇ ನಿಯಂತ್ರಿಸುತ್ತಾರೆ.

ಅವರು ಹೇಳಿದಂತೆ ಕೇಳದಿದ್ದರೆ ನಿಮಗೆ ತೊಂದರೆ ಗ್ಯಾರಂಟಿ' ಎಂದಿದ್ದಾರೆ ಅವರು.



**ಸಲ್ಲು ವಿರುದ್ಧ ನಿರ್ದೇಶಕನ ಆರೋಪ**

ಅಭಿನವ್ ಕಶ್ಯಪ್ ಸಹೋದರ ಅನುರಾಗ್ ಕಶ್ಯಪ್ ಕೂಡ ಬಾಲಿವುಡ್‌ನಲ್ಲಿ ಹೆಸರು ಮಾಡಿದ್ದಾರೆ. 2003ರಲ್ಲಿ ಸಲ್ಲು ಹಾಗೂ ಅನುರಾಗ್ ಸಿನಿಮಾ ಮಾಡಬೇಕಿತ್ತು. ಆದರೆ, ಬೋನಿ ಕಪೂರ್ ಜೊತೆಗೆ ಆದ ಕಿರಿಕ್‌ನಿಂದ ಅನುರಾಗ್ ಅವರು ಹೊರ ನಡೆದರು.

# ಕಣ್ಣುಗಳಲ್ಲಿ ಕಿಡಿಗಳು, ಹೃದಯದಲ್ಲಿ ಉರಿಯುವ ಜ್ವಾಲೆಗಳು



**ಏಷ್ಯಾ ಕಪ್‌ಗೂ ಮುನ್ನ ಯಲ್ಗಾರ್ ಮೋಡ್‌ನಲ್ಲಿ ಭಾರತೀಯ ಯೋಧರು**

2025 ರ ಏಷ್ಯಾ ಕಪ್‌ಗಾಗಿ ಭಾರತೀಯ ಕ್ರಿಕೆಟ್ ತಂಡ ಈಗಾಗಲೇ ದುಬೈ ತಲುಪಿದೆ. ಸೆಪ್ಟೆಂಬರ್ 10 ರಂದು ಭಾರತ ತಂಡದ ಮೊದಲ ಪಂದ್ಯ ನಡೆಯಲಿದೆ. ಈ ಪಂದ್ಯಕ್ಕಾಗಿ ಭಾರತ ತಂಡವು ತನ್ನ ಸಿದ್ಧತೆಗಳನ್ನು ಪ್ರಾರಂಭಿಸಿದೆ. ಈ ಮಧ್ಯೆ, ಪಂದ್ಯಕ್ಕೂ ಮುನ್ನ, ಸೂರ್ಯಕುಮಾರ್ ಯಾದವ್ ಪಡೆ ತನ್ನ ಹೊಸ ಜೆರ್ಸಿಯೊಂದಿಗೆ ಫೋಟೋ ಶೂಟ್ ಕೂಡ ಮಾಡಿತು. ಏಷ್ಯಾ ಕಪ್‌ಗೆ ಭಾರತೀಯ ಕ್ರಿಕೆಟ್ ತಂಡ ಸಂಪೂರ್ಣವಾಗಿ ಸಿದ್ಧವಾಗಿದೆ. ಸೆಪ್ಟೆಂಬರ್ 4 ರಂದು ಭಾರತ ತಂಡವು ಟೂರ್ನಿಗಾಗಿ ಭಾರತದಿಂದ ಹೊರಟಿತು. ಅಂದರೆ ಸೆಪ್ಟೆಂಬರ್ 9 ರಂದು ಟೂರ್ನಿಗೆ ಚಾಲನೆ ಸಿಗಲಿದೆ. ಸೆಪ್ಟೆಂಬರ್ 10 ರಂದು ದುಬೈನಲ್ಲಿ ಯುಎಇ ವಿರುದ್ಧ ಟೀಮ್ ಇಂಡಿಯಾದ ಮೊದಲ ಪಂದ್ಯ ನಡೆಯಲಿದೆ. ಇಂತಹ ಪರಿಸ್ಥಿತಿಯಲ್ಲಿ, ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡವು ಪಂದ್ಯಕ್ಕೆ ತಯಾರಿ ನಡೆಸುತ್ತಿದ್ದು, ಭರ್ಜರಿ ಪ್ರ್ಯಾಕ್ಟೀಸ್ ಮಾಡುತ್ತಿದೆ. ಈ ಮಧ್ಯೆ, ಪಂದ್ಯಕ್ಕೂ ಮುನ್ನ, ಭಾರತ ತಂಡವು ತನ್ನ ಹೊಸ ಜೆರ್ಸಿಯೊಂದಿಗೆ ಫೋಟೋ ಶೂಟ್ ಕೂಡ ಮಾಡಿತು.

ಸೂರ್ಯಕುಮಾರ್ ಯಾದವ್ 2025ರ ಏಷ್ಯಾ ಕಪ್‌ನಲ್ಲಿ ಭಾರತೀಯ ಕ್ರಿಕೆಟ್ ತಂಡದ ನಾಯಕತ್ವ ವಹಿಸುತ್ತಿದ್ದಾರೆ. ಸೂರ್ಯಕುಮಾರ್ ಯಾದವ್ ಟೀಮ್ ಇಂಡಿಯಾ ಪರ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ಏಷ್ಯಾ ಕಪ್‌ಗೂ ಮುನ್ನ, ಕ್ಯಾಪ್ಟನ್ ಸೂರ್ಯ ಚೆಸ್ ಬೋರ್ಡ್ ಮುಂದೆ ಕುಳಿತು ಅದ್ಭುತ ಫೋಟೋ ಶೂಟ್ ಮಾಡಿದ್ದಾರೆ.

ಏಷ್ಯಾ ಕಪ್‌ನಲ್ಲಿ ಶುಭ್‌ಮನ್ ಗಿಲ್ ಟೀಮ್ ಇಂಡಿಯಾದ ಉಪನಾಯಕರಾಗಿದ್ದಾರೆ. ಇದಕ್ಕೂ ಮೊದಲು, ಗಿಲ್ ಟೆಸ್ಟ್‌ನಲ್ಲಿ ಟೀಮ್ ಇಂಡಿಯಾದ ನಾಯಕತ್ವ ವಹಿಸಿಕೊಂಡು ಇಂಗ್ಲೆಂಡ್‌ನಲ್ಲಿ ಸಂಚಲನ ಮೂಡಿಸಿದ್ದರು. ಹಾರ್ದಿಕ್ ಪಾಂಡ್ಯ ಕೂಡ ಏಷ್ಯಾಕಪ್‌ನಲ್ಲಿ ಟೀಮ್ ಇಂಡಿಯಾದ ಅತಿದೊಡ್ಡ ಎಕ್ಸ್-ಫ್ಯಾಕ್ಟರ್ ಆಟಗಾರ ಎಂದು ಸಾಬೀತುಪಡಿಸಬಹುದು. ಹಾರ್ದಿಕ್ ಏಷ್ಯಾಕಪ್ ಟಿ20ಯಲ್ಲಿ ಹೊಸ ಲುಕ್‌ನೊಂದಿಗೆ ಸದ್ದು ಮಾಡಲು ಸಿದ್ಧರಾಗಿದ್ದಾರೆ. 2025 ರ ಏಷ್ಯಾ ಕಪ್‌ಗಾಗಿ ಟೀಮ್ ಇಂಡಿಯಾ ತಂಡದಲ್ಲಿ ಪೇಸ್ ಬೌಲಿಂಗ್ ಆಲ್‌ರೌಂಡರ್ ಶಿವಂ ದುಬೆ ಕೂಡ ಸ್ಥಾನ ಪಡೆದಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ, ಶಿವಂ ದುಬೆಗೆ ಆಡುವ ಹನ್ನೊಂದರಲ್ಲಿ ಅವಕಾಶ ಸಿಕ್ಕರೆ, ಅವರು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಬಹುದು.

# ಮಾತಿಲ್ಲ, ಕೈ ಕುಲುಕಲಿಲ್ಲ

2025 ರ ಏಷ್ಯಾಕಪ್ ಪಂದ್ಯಾವಳಿ ಇದೇ ಸೆಪ್ಟೆಂಬರ್ 9 ರಂದು ಪ್ರಾರಂಭವಾಗಲಿದೆ. ಈ ಟೂರ್ನಿಯ ಹೈವೋಲ್ಟೇಜ್ ಕದನ ಭಾರತ ಮತ್ತು ಪಾಕಿಸ್ತಾನ ನಡುವೆ ಸೆಪ್ಟೆಂಬರ್ 14 ರಂದು ನಡೆಯಲಿದೆ. ಆದರೆ ಅದಕ್ಕೂ ಮುನ್ನ ಎರಡೂ ಸಾಂಪ್ರದಾಯಿಕ ಎದುರಾಳಿಗಳು ಈ ಟೂರ್ನಿಗಾಗಿ ದುಬೈನ ಐಸಿಸಿ ಅಕಾಡೆಮಿಯ ಮೈದಾನದಲ್ಲಿ ಅಭ್ಯಾಸ ಮಾಡುತ್ತಿವೆ. ಎರಡೂ ತಂಡಗಳು ಒಂದೇ ಮೈದಾನದಲ್ಲಿ ಅಭ್ಯಾಸ ಮಾಡುತ್ತಿವೆ. ಏತನ್ಮಧ್ಯೆ, ಒಂದೇ ಮೈದಾನದಲ್ಲಿ ಅಭ್ಯಾಸ ಮಾಡಿದರೂ, ಭಾರತ ಮತ್ತು ಪಾಕಿಸ್ತಾನದ ಆಟಗಾರರು ಒಬ್ಬರಿಗೊಬ್ಬರು ಕನಿಷ್ಠ ಪಕ್ಷ ಕೈ ಕೂಡ ಕುಲುಕಲಿಲ್ಲ ಎಂದು ವರದಿಯಾಗಿದೆ.

ಉಭಯ ಆಟಗಾರರು ಕೈಕುಲುಕಲಿಲ್ಲ



**ಒಂದೇ ಮೈದಾನದಲ್ಲಿ ಅಭ್ಯಾಸ**

ವರದಿಯ ಪ್ರಕಾರ, ಭಾರತ ಮತ್ತು ಪಾಕಿಸ್ತಾನಿ ಆಟಗಾರರು ಒಂದೇ ಮೈದಾನದಲ್ಲಿ ಅಭ್ಯಾಸ ಮಾಡುತ್ತಿದ್ದರೂ ಪರಸ್ಪರ ಭೇಟಿಯಾಗಿಲ್ಲ. ಪಾಕಿಸ್ತಾನ ತಂಡ ದುಬೈನಲ್ಲಿರುವ ಐಸಿಸಿ ಅಕಾಡೆಮಿ ತಲುಪಿದಾಗ, ಟೀಂ ಇಂಡಿಯಾ ಅಲ್ಲಿ ಅಭ್ಯಾಸ ನಡೆಸುತ್ತಿತ್ತು. ಭಾರತೀಯ ಆಟಗಾರರು ನೆಟ್ಸ್‌ನಲ್ಲಿ ಬೆವರು ಸುರಿಸುವುದನ್ನು ನೋಡಿದ ಪಾಕಿಸ್ತಾನದ ಆಟಗಾರರು ಯಾರೊಂದಿಗೂ ಮಾತನಾಡದೆ ತಮ್ಮ ತರಬೇತಿ ಮತ್ತು ಡ್ರಿಲ್ಲಿಂಗ್ ನಲ್ಲಿ ನಿರತರಾದರು ಎಂದು ವರದಿಯಾಗಿದೆ.

**ತ್ರಿಕೋನ ಸರಣಿಯ ಫೈನಲ್‌ಗೆ ಪಾಕ್ ಸಿದ್ಧತೆ**

ವಾಸ್ತವವಾಗಿ ಏಷ್ಯಾ ಕಪ್‌ಗೂ ಮುನ್ನ ಪಾಕಿಸ್ತಾನ ತಂಡ ಅಫ್ಘಾನಿಸ್ತಾನ ಹಾಗೂ ಯುಎಇ ಜೊತೆಗೆ ತ್ರಿಕೋನ ಸರಣಿಯಲ್ಲಿ ನಿರತವಾಗಿದೆ. ಇದೀಗ ಪಾಕಿಸ್ತಾನ ತಂಡ ಫೈನಲ್‌ಗೇರಿದ್ದು, ಅಲ್ಲಿ ಅಫ್ಘಾನಿಸ್ತಾನ ತಂಡವನ್ನು ಎದುರಿಸಲಿದೆ. ಇದೇ ಕಾರಣಕ್ಕಾಗಿಯೇ ಪಾಕಿಸ್ತಾನ ತಂಡ ಸೆಪ್ಟೆಂಬರ್ 6 ರಂದು ಸಂಜೆ 7 ಗಂಟೆಯ ನಂತರ ದುಬೈನ ಐಸಿಸಿ ಅಕಾಡೆಮಿಯಲ್ಲಿ ಅಭ್ಯಾಸ ನಡೆಸಲು ಆಗಮನಿಸಿತ್ತು.

**ಸೆ. 14 ರಂದು ಭಾರತ- ಪಾಕ್ ಮುಖಾಮುಖಿ:** ಏಷ್ಯಾಕಪ್ ಸೆಪ್ಟೆಂಬರ್ 9 ರಂದು ಆರಂಭವಾಗುತ್ತದೆ. ಆದರೆ ಭಾರತ ತನ್ನ ಅಭಿಯಾನವನ್ನು ಸೆಪ್ಟೆಂಬರ್ 10 ರಂದು ಪ್ರಾರಂಭಿಸಲಿದೆ. ಆದರೆ ಪಾಕಿಸ್ತಾನ ತಂಡವು ಸೆಪ್ಟೆಂಬರ್ 12 ರಂದು ತನ್ನ ಮೊದಲ ಪಂದ್ಯವನ್ನು ಆಡಲಿದೆ. ಅದರ ನಂತರ, ಸೆಪ್ಟೆಂಬರ್ 14 ರಂದು, ಭಾರತ ಮತ್ತು ಪಾಕಿಸ್ತಾನ ತಂಡಗಳು 2025 ರ ಏಷ್ಯಾಕಪ್‌ನ ಎರಡನೇ ಪಂದ್ಯದಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ. ಎರಡು ಸಾಂಪ್ರದಾಯಿಕ ಎದುರಾಳಿಗಳ ನಡುವಿನ ಆ ಪಂದ್ಯವು ದುಬೈನಲ್ಲಿಯೇ ನಡೆಯಲಿದೆ.

**ಟಿ20 ಏಷ್ಯಾಕಪ್‌ನಲ್ಲಿ ಭಾರತ-ಪಾಕಿಸ್ತಾನ:** ಈ ಬಾರಿಯ ಏಷ್ಯಾಕಪ್ ಅನ್ನು ಟಿ20 ಮಾದರಿಯಲ್ಲಿ ಆಯೋಜಿಸಲಾಗುತ್ತಿದೆ. ಈ ಮಾದರಿಯಲ್ಲಿ ಆಡಿದ ಏಷ್ಯಾಕಪ್ ಪಂದ್ಯಗಳ ದಾಖಲೆಯ ಬಗ್ಗೆ ಮಾತನಾಡಿದರೆ, ಭಾರತ ಪಾಕಿಸ್ತಾನಕ್ಕಿಂತ ಮೇಲುಗೈ ಸಾಧಿಸಿದೆ.

# ಮೂವರ ದಾಖಲೆಯನ್ನು ಸರಿಗಟ್ಟಿದ ಜೋ ರೂಟ್

ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವೆ ಮೂರನೇ ಏಕದಿನ ಪಂದ್ಯದಲ್ಲಿ ಇಂಗ್ಲೆಂಡ್ ಪರ ಅನುಭವಿ ಜೋ ರೂಟ್ ಶತಕದ ಇನ್ನಿಂಗ್ಸ್ ಆಡಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜೋ ರೂಟ್ ಶಿಸ್ತಿನ ಬ್ಯಾಟಿಂಗ್ ಮಾಡಿ 96 ಎಸೆತಗಳಲ್ಲಿ 6 ಬೌಂಡರಿಗಳನ್ನು ಒಳಗೊಂಡಂತೆ ಒಟ್ಟು 100 ರನ್ ಗಳಿಸಿದರು. ಇದು ಏಕದಿನ ಕ್ರಿಕೆಟ್‌ನಲ್ಲಿ ಜೋ ರೂಟ್ ಅವರ 19 ನೇ ಶತಕವಾಗಿತ್ತು.

ಇದರೊಂದಿಗೆ, ಅವರು ಬಾಬರ್ ಆಝಂ, ಬ್ರಿಯಾನ್ ಲಾರಾ ಮತ್ತು ಮಹೇಲಾ ಜಯವರ್ಧನೆ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಈ ಮೂವರು ಆಟಗಾರರು ಏಕದಿನ ಪಂದ್ಯಗಳಲ್ಲಿ ತಲಾ 19 ಶತಕಗಳನ್ನು ಗಳಿಸಿದ್ದಾರೆ. ಅದೇ ಸಮಯದಲ್ಲಿ, ಅವರು ವೆಸ್ಟ್ ಇಂಡೀಸ್‌ನ ಶೈ ಹೋಪ್, ನ್ಯೂಜಿಲೆಂಡ್‌ನ ಮಾರ್ಟಿನ್ ಗುಪ್ಟಿಲ್ ಮತ್ತು ಆಸ್ಟ್ರೇಲಿಯಾದ ಸ್ಟೀವ್ ವಾ ಅವರ ದಾಖಲೆಯನ್ನು ಹಿಂದಿಕ್ಕಿದ್ದಾರೆ. ಈ ಮೂವರು ಆಟಗಾರರು ಏಕದಿನ ಕ್ರಿಕೆಟ್‌ನಲ್ಲಿ ತಲಾ 18 ಶತಕಗಳನ್ನು ಬಾರಿಸಿದ್ದಾರೆ. 2013 ರಲ್ಲಿ ಇಂಗ್ಲೆಂಡ್ ಪರ ಏಕದಿನ ಪಂದ್ಯಕ್ಕೆ ಪಾದಾರ್ಪಣೆ ಮಾಡಿದ ಜೋ ರೂಟ್ ಅಂದಿನಿಂದ ಇಲ್ಲಿಯವರೆಗೆ 183 ಏಕದಿನ ಪಂದ್ಯಗಳಲ್ಲಿ ಒಟ್ಟು 7301 ರನ್ ಗಳಿಸಿದ್ದಾರೆ, ಇದರಲ್ಲಿ 19 ಶತಕಗಳು ಮತ್ತು 43 ಅರ್ಧಶತಕಗಳು ಸೇರಿವೆ.



# ಗೆದ್ದು ಭಾರತದ ವಿಶ್ವ ದಾಖಲೆ ಮುರಿದ ಇಂಗ್ಲೆಂಡ್

ಇಂಗ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ನಡುವೆ ನಡೆದ ಮೂರು ಪಂದ್ಯಗಳ ಏಕದಿನ ಸರಣಿ ಮೂರನೇ ಪಂದ್ಯವನ್ನು ಆತಿಥೇಯ ಇಂಗ್ಲೆಂಡ್ ತಂಡ ಬರೋಬ್ಬರಿ 342 ರನ್‌ಗಳಿಂದ ಗೆದ್ದುಕೊಂಡಿದೆ. ಇದರೊಂದಿಗೆ ವೈಟ್ ವಾಶ್ ಮುಖಭಂಗದಿಂದ ಪಾರಾಗಿದೆ. ಇತ್ತ ಈ ಪಂದ್ಯದಲ್ಲಿ ಹೀನಾಯವಾಗಿ ಸೋತರೂ ಮೊದಲೆರಡು ಪಂದ್ಯಗಳನ್ನು ಗೆದ್ದುಕೊಂಡಿದ್ದರ ಪರಿಣಾಮವಾಗಿ ದಕ್ಷಿಣ ಆಫ್ರಿಕಾ ತಂಡ ಏಕದಿನ ಸರಣಿಯನ್ನು ತನ್ನ ಖಾತೆಗೆ ಹಾಕಿಕೊಂಡಿದೆ. ಸೌತಾಂಪ್ಟನ್‌ನಲ್ಲಿ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಜಾಕೋಬ್ ಬೆಥೆಲ್ ಮತ್ತು ಜೋ ರೂಟ್ ಅವರ ಶತಕಗಳ ಆಧಾರದ ಮೇಲೆ 414 ರನ್‌ಗಳ ಬೃಹತ್ ಸ್ಕೋರ್ ದಾಖಲಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ದಕ್ಷಿಣ ಆಫ್ರಿಕಾ ತಂಡವು ಕೇವಲ 72 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಹೀನಾಯ ಸೋಲು ಅನುಭವಿಸಿತು.



**414 ರನ್ ಕಲೆಹಾಕಿದ ಇಂಗ್ಲೆಂಡ್:** ವಾಸ್ತವವಾಗಿ ದಕ್ಷಿಣ ಆಫ್ರಿಕಾ ತಂಡವು ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 7 ವಿಕೆಟ್‌ಗಳಿಂದ ಮತ್ತು ಎರಡನೇ ಪಂದ್ಯದ 5 ವಿಕೆಟ್‌ಗಳಿಂದ ಸೋಲಿಸಿ ಸರಣಿಯನ್ನು ಗೆದ್ದುಕೊಂಡಿತು. ಹೀಗಾಗಿ ಮೂರನೇ ಪಂದ್ಯದಲ್ಲಿ ತಂಡವನ್ನು ಕ್ಲೀನ್ ಸ್ವೀಪ್ ಮಾಡುವ ಅವಕಾಶವಿತ್ತು ಆದರೆ ಅದು ಆಗಲಿಲ್ಲ. ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಪರ ಆರಂಭಿಕರಾದ ಜೇಮೀ ಸ್ಮಿತ್ ಮತ್ತು ಬೆನ್ ಡಕೆಟ್ ಜೋಡಿ ಕೇವಲ 16 ಓವರ್‌ಗಳಲ್ಲಿ ತಂಡವನ್ನು 100 ರನ್‌ಗಳ ಗಡಿ ದಾಟಿಸಿದರು. ನಂತರ ರೂಟ್ ಮತ್ತು ಬೆಥೆಲ್ 182 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡರು. ಇದೇ ವೇಳೆ ಬೆಥೆಲ್ ತಮ್ಮ ಮೊದಲ ಅಂತರರಾಷ್ಟ್ರೀಯ ಶತಕವನ್ನು ಗಳಿಸಿದರೆ, ರೂಟ್ ತಮ್ಮ 19 ನೇ ಏಕದಿನ ಶತಕವನ್ನು ಪೂರ್ಣಗೊಳಿದರು. ಕೊನೆಯಲ್ಲಿ, ಜೋಸ್ ಬಟ್ಲರ್ ಕೇವಲ 32 ಎಸೆತಗಳಲ್ಲಿ 62 ರನ್ ಗಳಿಸಿ ತಂಡವನ್ನು 400 ರನ್‌ಗಳ ಗಡಿ ದಾಟಿಸಿದರು.

**ಆಫ್ರಿಕಾ ವಿರುದ್ಧ 342 ರನ್‌ಗೆಲುವು**

**7 ರನ್‌ಗಳಿಗೆ 4 ವಿಕೆಟ್ ಪತನ:** ವಾಸ್ತವವಾಗಿ ಈ ಪಂದ್ಯಕ್ಕೆ ಕೆಲವೇ ದಿನಗಳ ಮೊದಲು ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ವಿರುದ್ಧ 431 ರನ್ ಗಳಿಸಿತ್ತು. ಇದಕ್ಕೆ ಪ್ರತಿಯಾಗಿ ದಕ್ಷಿಣ ಆಫ್ರಿಕಾ ತಂಡ ಕೇವಲ 155 ರನ್‌ಗಳಿಗೆ ಆಲೌಟ್ ಆಗಿತ್ತು. ಆದರೆ ಈ ಬಾರಿ ಅವರು ಅರ್ಧ ರನ್‌ಗಳನ್ನು ಸಹ ಗಳಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಬಿರುಗಾಳಿಯ ವೇಗಿ ಆರ್ಚರ್. ಇನ್ನಿಂಗ್ಸ್‌ನ ಎರಡನೇ ಎಸೆತದಲ್ಲಿ, ಆರ್ಚರ್ ಆರಂಭಿಕ ಬ್ಯಾಟ್ಸ್‌ಮನ್ ಏಡೆನ್ ಮಾರ್ಕ್ರಾಮ್ ಅವರನ್ನು ಔಟ್ ಮಾಡಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966